ಬೀಜಗಣಿತ ಪರಿಚಯ

ಭಾಗ–2

ಡಿ ಎಸ್ ಗುಂಡೂರಾವ್

1979

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ : 142

ಬೀಜಗಣಿತ ಪರಿಚಯ
(ಭಾಗ - 2)

ಡಿ. ಎಸ್. ಗುಂಡೂರಾವ್

ಸಹಾಯಕ ಪ್ರಾಧ್ಯಾಪಕರು (ಗಣಿತ)
ಕೃಷಿ ವಿಶ್ವವಿದ್ಯಾನಿಲಯ

1984

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560065

ಬೀಜಗಣಿತ ಪರಿಚಯ (ಭಾಗ–2)–(ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು, ಸಂಪಸ ಸಮಿತಿ ಪ್ರಕಾಶಿತ), ಪ್ರಥಮ ಮುದ್ರಣ 1984 ಪ್ರತಿಗಳು 1000, ಪುಟಗಳು viii + 202

ಬೆಲೆ: ಸಾದಾಪ್ರತಿ ರೂ. 20–00 ಕ್ಯಾಲಿಕೊಪ್ರತಿ ರೂ. 30–00

ಮುದ್ರಣ :
ಸಪ್ನ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು–26.

ಕುಲಪತಿಗಳ ಹಾರೈಕೆ

ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯದ ಎರಡನೆಯ ಘಟ್ಟದಲ್ಲಿ ನಾವಿಂದು ಇದ್ದೇವೆ. ಈಗಾಗಲೇ ನೂರಕ್ಕೆ ಮಿಕ್ಕಿ ಹೊತ್ತಗೆಗಳು ಪ್ರಕಟಗೊಂಡಿವೆ. ಹತ್ತಾರು ಎರಡನೆಯ ಮುದ್ರಣಗೊಳ್ಳುತ್ತಿವೆ. ಇದು ಈ ಗ್ರಂಥಗಳ ಉಪಯುಕ್ತತೆ ಹಾಗೂ ಜನಮೆಚ್ಚುಗೆಯ ದ್ಯೋತಕ.

ಕೃಷಿ ವಿಜ್ಞಾನಗಳು ಹಲವಾರು. ಅವುಗಳ ವ್ಯಾಪ್ತಿ ಅಪಾರ. ಅವುಗಳ ಮಹತಿ ಹೆಚ್ಚಿನದು. ಅವುಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಪಡೆದ ಜ್ಞಾನಸಂಪತ್ತು ಒಂದು ಮೇರುಪರ್ವತ. ಅದರ ಪ್ರಯೋಜನ ನಾಡಿಗರಿಗೆ ಹಾಗೂ ನಾಡಿಗೆ ಸಂಪೂರ್ಣವಾಗಿ ಆದಾಗ, ದೇಶದಲ್ಲಿ ಪುಷ್ಟಿ-ತುಷ್ಟಿ, ಭದ್ರತೆ-ಭವ್ಯತೆ, ಸುಖ-ಶಾಂತಿಗಳು ನೆಲೆಗೊಳ್ಳುತ್ತವೆ. ಈ ದಿಶೆಯಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಕೃಷಿಯ ಸಂದೇಶ ಹರಡಲನುವಾಗುವ ಪ್ರಯತ್ನಗಳು ದೇಶಸೇವೆಯ ಮಹತ್ ಕಾರ್ಯಗಳು.

ಒಂದು ದಶಕದ ಹಿಂದೆ ನೋಳೆತ ಪೈರು, ಇಂದು ಹುಲುಸಾಗಿ ಬೆಳೆದಿದೆ. ಈ ಕಾರ್ಯದ ಮುಖ್ಯ ಹೇತುವಾದ ಕನ್ನಡ ಮಾಧ್ಯಮ ನನಸಾಗಲು ಈ ಬೆಳೆ ಏತಕ್ಕೂ ಸಾಲದು. ವಿಜ್ಞಾನದ ಒಂದೊಂದು ಪ್ರಕಾರಗಳಲ್ಲಿ ನೂರು ಪುಸ್ತಕಗಳು ಪ್ರಕಟವಾಗಬೇಕು. ಆ ದಿನದ ಮೇಲೆ ಕಣ್ಣಿಟ್ಟು ಸಂಬಂಧಿಸಿದವರೆಲ್ಲರೂ ಉತ್ಸಾಹದಿಂದ ಕಾರ್ಯ ಮುಂದುವರಿಸಬೇಕೆಂದು ನನ್ನ ಕಳಕಳಿಯ ಹಾರೈಕೆ.

ಈಗ ಪ್ರಕಟವಾಗುತ್ತಿರುವ ***ಬೀಜಗಣಿತ ಪರಿಚಯ (ಭಾಗ-2)*** ಈ ದಿಶೆಯಲ್ಲಿಯ ಮತ್ತೊಂದು ಹೆಜ್ಜೆ. ಇದರ ಉಪಯೋಗವನ್ನು ಸಂಬಂಧಪಟ್ಟವರೆಲ್ಲ ಮಾಡಿಕೊಳ್ಳಬೇಕು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು–560 065

ನಾ. ಗು. ಪೇರೂರ
ಕುಲಪತಿಗಳು

ಸಂಪಾದಕರ ಮಾತು

ಅನ್ವಯಿಕ ವಿಜ್ಞಾನ ಶಾಸ್ತ್ರಾಧ್ಯಯನಕ್ಕೆ ಸಂಬಂಧಪಟ್ಟ ಮೂಲವಿಜ್ಞಾನ ಶಾಸ್ತ್ರಗಳ ತಿಳಿವಳಿಕೆ ಅವಶ್ಯವಿರುತ್ತದೆ. ಇದಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯವು ಮೂಲವಿಜ್ಞಾನ ಹಾಗೂ ಮಾನವಿಕ ಶಿಕ್ಷಣ ನಿರ್ದೇಶನಾಲಯವನ್ನು ವ್ಯವಸ್ಥೆಗೊಳಿಸಿದೆ.

ಈ ಪುಸ್ತಕವನ್ನು ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಶ್ರೀ ಡಿ. ಎಸ್. ಗುಂಡೂರಾಯರು ಬರೆದಿದ್ದಾರೆ. ಇದು ಇದೇ ಲೇಖಕರ ಬೀಜಗಣಿತ ಪರಿಚಯ ಭಾಗ-1 ರ ಮುಂದಿನ ಭಾಗ. ಇದರಲ್ಲಿ ವಿಭಜಿತ ಭಿನ್ನರಾಶಿಗಳು, ಗಣಿತಾನುಮಾನ, ಕ್ರಮಯೋಜನೆಗಳು ಮತ್ತು ವಿಕಲ್ಪಗಳು, ದ್ವಿಪದ ಪ್ರಮೇಯ, ಮಂಡಲಗಳು ಮತ್ತು ನಿರ್ಧಾರಕಗಳು - ಇವುಗಳನ್ನು ಕುರಿತು ವಿವರಿಸಲಾಗಿದೆ. ಓದುಗರ ಅನುಕೂಲಕ್ಕಾಗಿ ಕಡೆಯಲ್ಲಿ ಪಾರಿಭಾಷಿಕ ಪದಕೋಶ ಕೊಟ್ಟಿದೆ.

ಈ ಪುಸ್ತಕವನ್ನು ತಾಂತ್ರಿಕವಾಗಿ ಪರಿಶೀಲಿಸಿದವರು ಕೃಷಿ ವಿಶ್ವವಿದ್ಯಾನಿಲಯ ಗಣಿತಶಾಸ್ತ್ರವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಶ್ರೀ ಎಚ್. ಎಸ್. ಕೃಷ್ಣಸ್ವಾಮಿಯವರು. ಈ ಪುಸ್ತಕದ ಭಾಷಾಸಂಪಾದನ ಕಾರ್ಯನಿರ್ವಹಿಸಿ ಅಚ್ಚಿಗೆ ಸಿದ್ಧಪಡಿಸಿದವರು ವಿಭಾಗದ ಸಂಶೋಧನ ಸಹಾಯಕರಾದ ಶ್ರೀಮತಿ ಸಿ. ಕೆ. ಕುಮುದಿನಿಯವರು. ಈ ಪುಸ್ತಕದ ಕರಡೋದಿದವರು ವಿಭಾಗದ ಕರಡೋದುಗಾರ ಶ್ರೀ ಎಂ. ರಮೇಶ್‌ರವರು.

ಇವರಿಗೆಲ್ಲ ಕೃತಜ್ಞತೆಗಳು.

ಈ ಪುಸ್ತಕವು ಪಿ.ಯು.ಸಿ. ಹಾಗೂ ಕೃಷಿ ವಿಜ್ಞಾನದ ಮೊದಲವರ್ಷದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆಲ್ಲ ಉಪಯುಕ್ತವಾಗುತ್ತದೆಂದು ಭಾವಿಸಲಾಗಿದೆ.

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಗಳು

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು–560 065

ಪರಿವಿಡಿ

ಬೀಜಗಣಿತ ಪರಿಚಯ
(ಭಾಗ - 2)

9

ವಿಭಜಿತ ಭಿನ್ನರಾಶಿಗಳು

9.1 ವ್ಯಾಖ್ಯೆ : $a_0x^n + a_1x^{n-1} + \ldots + a_{n-1}x + a_n$, $(a_0 \neq 0)$ ಎಂಬ ಬೀಜೋಕ್ತಿಯನ್ನು, xನಲ್ಲಿ nನೆಯ ಘಾತದ ಬಹುಪದಿ ಎಂದು ಕರೆಯುತ್ತೇವೆ.

ಉದಾ : (*i*) $2x^2 + 3x + 1$, ಇದು xನಲ್ಲಿ 2ನೇ ಘಾತದ ಬಹುಪದಿ.

(ii) $4x^5 - x^2 + 7$, ಇದು xನಲ್ಲಿ 5ನೇ ಘಾತದ ಬಹುಪದಿ.

9.2 ವಿಭಜಿತ ಭಿನ್ನರಾಶಿಗಳು : ಯಾವುದೇ ಎರಡು ಬಹುಪದಿಗಳ ಭಾಗ ಲಬ್ಧವನ್ನು, ಕೆಲವು ಭಿನ್ನರಾಶಿಗಳ ಮೊತ್ತವಾಗಿ ವ್ಯಕ್ತಪಡಿಸಲು ಸಾಧ್ಯವೆ? ಹಾಗೆ ಮಾಡಲು ಸಾಧ್ಯವಾದಾಗ, ಸಂಬಂಧಪಟ್ಟ ಭಿನ್ನರಾಶಿಗಳನ್ನು ಪಡೆಯುವ ಕ್ರಮ ಏನು? ಎಂಬ ಸಮಸ್ಯೆಯನ್ನು ಕುರಿತು ಈಗ ಆಲೋಚಿಸೋಣ. ಇದಕ್ಕಾಗಿ,

$$\frac{x+10}{x^2-x-12} \quad \ldots \quad \ldots \qquad (9.2.1)$$

ಎಂಬ ಭಿನ್ನರಾಶಿಯನ್ನು ಪರಿಶೀಲಿಸೋಣ. ಇದರಲ್ಲಿ ಅಂಶವು xನಲ್ಲಿ 1 ನೇ ಘಾತದ ಬಹುಪದಿ; ಛೇದವು xನಲ್ಲಿ 2ನೇ ಘಾತದ ಬಹುಪದಿ ಎಂಬುದನ್ನು ಗಮನಿಸೋಣ.

ಅಲ್ಲದೆ,

$$\frac{x+10}{x^2-x-12} = \frac{x+10}{(x-4)(x+3)}$$

ಎಂಬುದನ್ನು ಗಮನಿಸೋಣ. ಆದ್ದರಿಂದ, A, B ಎಂಬ ಸ್ಥಿರ ಸ್ಥಿರ ಸಂಖ್ಯೆಗಳನ್ನು

$$\frac{x+10}{x^2-x-12} = \frac{A}{x-4} + \frac{B}{x+3} \qquad (9.2.2)$$

ಎಂಬ ಸಮೀಕರಣವು ಯುಕ್ತವಾಗುವಂತೆ ಪಡೆಯಲು ಸಾಧ್ಯವೆ? ಎಂಬ ಪ್ರಶ್ನೆಯು ಸಹಜವಾಗಿ ಮೂಡುತ್ತದೆ. ಹೀಗೆ A, Bಗಳನ್ನು ಪಡೆಯಲು ಸಾಧ್ಯವಾದಾಗ, $\frac{A}{x+4}$ ಮತ್ತು $\frac{B}{x+3}$ ಗಳನ್ನು $\frac{x+10}{x^2-x-12}$ ಎಂಬ ಮೂಲ ಭಿನ್ನರಾಶಿಯ ವಿಭಜಿತ ಭಿನ್ನರಾಶಿಗಳೆಂದು ಕರೆಯುತ್ತೇವೆ. ಯಾವುದೇ ಎರಡು ದತ್ತ ಬಹುಪದಿಗಳ ಭಾಗಲಬ್ಧದ ವಿಭಜಿತ ಭಿನ್ನರಾಶಿಗಳನ್ನು ಪಡೆಯಲು ಸಹಕಾರಿಯಾಗುವ ನಿಯಮಗಳನ್ನು ಈಗ ಹೇಳುತ್ತೇವೆ;

9.3 ನಿಯಮಗಳು :

1. ದತ್ತ ಭಿನ್ನರಾಶಿಯ ಅಂಶದಲ್ಲಿ ಬರುವ ಬಹುಪದಿಯ ಘಾತವು ಅದರ ಛೇದದ ಬಹುಪದಿಯ ಘಾತಕ್ಕಿಂತ

(i) **ಕಡಿಮೆಯಾದರೆ, ಛೇದವನ್ನು ಅಪವರ್ತಿಸಬೇಕು.**

(ii) **ಅಧಿಕವಾದರೆ ಅಥವಾ ಸಮನಾದರೆ, ಆಗ ಅಂಶವನ್ನು ಛೇದದಿಂದ ಭಾಗಿಸಬೇಕು.** ಹೀಗೆ ಮಾಡುವುದರಿಂದ, ಒಂದು ಬಹುಪದಿಯೂ ಮತ್ತು ಛೇದದ ಘಾತಕ್ಕಿಂತ ಕಡಿಮೆ ಘಾತದ ಅಂಶವುಳ್ಳ ಒಂದು ಭಾಗಲಬ್ಧವು ದೊರೆಯುತ್ತದೆ. ಉದಾಹರಣೆಗೆ,

$\frac{x^3+x^2-x-1}{x^2-4}$ ಎಂಬ ಭಿನ್ನರಾಶಿಯನ್ನು ಪರಿಶೀಲಿಸೋಣ.

ಇದರಲ್ಲಿ ಅಂಶದ ಘಾತವು (3), ಛೇದದ ಘಾತಕ್ಕಿಂತ (2) ಅಧಿಕವಾಗಿದೆ. ಆದ್ದರಿಂದ ಅಂಶವನ್ನು ಛೇದದಿಂದ ಭಾಗಿಸಿ, ಮುಂದಿನಂತೆ ಬರೆಯಬಹುದು.

$$\frac{x^3+x^2-x-1}{x^2-4} = x+1+\frac{3x+5}{x^2-4}.$$

2. ಛೇದದಲ್ಲಿ ಬರುವ ಪ್ರತಿಯೊಂದು $ax+b$ ಎಂಬ ರೂಪದ ಸರಳ ಅಪವರ್ತನಕ್ಕೂ $\frac{A}{ax+b}$ ಎಂಬ ವಿಭಜಿತ ಭಿನ್ನರಾಶಿಯನ್ನು ತೆಗೆದುಕೊಳ್ಳಬೇಕು.

3. ಛೇದದಲ್ಲಿ ಬರುವ ಪ್ರತಿಯೊಂದು $(ax+b)^k$, ($k =$ ಧನ ಪೂರ್ಣಾಂಕ) ಎಂಬ ರೂಪದ ಅಪವರ್ತನಕ್ಕೂ

$$\frac{A_1}{ax+b}+\frac{A_2}{(ax+b)^2}+\frac{A_3}{(ax+b)^3}+\dots\frac{A_1}{(ax+b)^k}$$

ಎಂಬ ವಿಭಜಿತ ಭಿನ್ನರಾಶಿಗಳ ಮೊತ್ತವನ್ನು ತೆಗೆದುಕೊಳ್ಳಬೇಕು.

4. ಛೇದದಲ್ಲಿ ಬರುವ ಪ್ರತಿಯೊಂದು $(ax^2+bx+c)^k$. ($k =$ ಧನ ಪೂರ್ಣಾಂಕ) ರೂಪದ ಅಪವರ್ತಿಸಲಾಗದ ವರ್ಗ ಸಂಬಂಧಕ,

(ax^2+bx+c) ದ ಘಾತಕ್ಕೂ,

$$\frac{C_1x+D_1}{ax^2+bx+c}+\frac{C_2x+D_2}{(ax^2+bx+c)^2}+\dots\dots+\frac{C_kx+D_k}{(ax^2+bx+c)^k}$$ ಎಂಬ

ವಿಭಜಿತ ಭಿನ್ನರಾಶಿಗಳ ಮೊತ್ತವನ್ನು ತೆಗೆದುಕೊಳ್ಳಬೇಕು. ಉದಾಹರಣೆಗೆ,

$$\frac{2x^2+3x+1}{(x^2+x+1)^2(2x+1)} = \frac{A}{2x+1}+\frac{C_1x+D_1}{x^2+x+1}+\frac{C_2x+D_2}{(x^2+x+1)^2}$$

5. ಹೀಗೆ ತೆಗೆದುಕೊಂಡು ವಿಭಜಿತ ಭಿನ್ನರಾಶಿಗಳಲ್ಲಿ ಬರುವ $A, A_1, A_2, \dots, A_k, C_1, D_1, C_2, D_2, \dots$, ಇತ್ಯಾದಿ ಸ್ಥಿರ ಸಂಖ್ಯೆಗಳನ್ನು ಕಂಡುಹಿಡಿಯಲು ಒಪ್ಪಿಕೊಂಡ ಸರ್ವ ಸಮೀಕರಣದಲ್ಲಿ xಗೆ ಯೋಗ್ಯ ಬೆಲೆಗಳನ್ನು ಕೊಟ್ಟು, ಇದರಿಂದ ದೊರಕುವ ಸಮೀಕರಣಗಳನ್ನು ಏಕಕಾಲಿಕ ಸಮೀಕರಣಗಳೆಂದು ತಿಳಿದು ಬಿಡಿಸಬೇಕು.

9.4 **ಉದಾ :** (i) $\dfrac{x+10}{x^2-x-12}$ ಎಂಬುದರ ವಿಭಜಿತ ಭಿನ್ನರಾಶಿಗಳನ್ನು ಪಡೆಯೋಣ. ಅನು. 9.3 ನಿಯಮ 1. (i) ರಿಂದ :

$$\frac{x+10}{x^2-x-12} = \frac{x+10}{(x-4)(x+3)}$$

$$\therefore \frac{x+10}{x^2-x-12} = \frac{A}{x-4} + \frac{B}{x+3}$$ [9·3 ನಿಯಮ 2ರಿಂದ]

ಇದರ ಎರಡು ಬದಿಗಳನ್ನು $(x-4)(x+3)$ರಿಂದ ಗುಣಿಸೋಣ. ಆಗ

$$x+10 \equiv A(x+3)+B(x-4) \quad \dots \quad \dots \quad \dots \quad (9.4.1)$$

ಎಂಬ ಸರ್ವ ಸಮೀಕರಣವು ದೊರೆಯುತ್ತದೆ, ಇದರಲ್ಲಿ.

$x=4$ ಆದಾಗ, $4+10=A(4+3)$ .... [ಏಕೆ?]

$\Rightarrow \quad 14=A7$

$\therefore \quad A=2$

ಮತ್ತು $x=-3$ ಆದಾಗ, $-3+10=B(-3-4)$

$\Rightarrow \quad 7=-7B$

$\therefore \quad B=-1,$

$$\therefore \frac{x+10}{x^2-x-12} = \frac{2}{x-4} - \frac{1}{x+3}$$

(ii) $\dfrac{x^3+3x^2-7x-20}{x^2+3x-10}$ ಎಂಬುದರ ವಿಭಜಿತ ಭಿನ್ನರಾಶಿಗಳನ್ನು

ಪಡೆಯೋಣ. ಇದರಲ್ಲಿ ಅಂಶದ ಘಾತವು ಛೇದದ ಘಾತಕ್ಕಿಂತ ಅಧಿಕ ; ಆದ್ದರಿಂದ ಅಂಶವನ್ನು ಛೇದದಿಂದ ಭಾಗಿಸೋಣ [9.3 ನಿಯಮ 1, (ii) ರಿಂದ],

$$\begin{array}{r|l} x^2+3x-10 & x^3+3x^2-7x-20 \;\left(x+\dfrac{3x-20}{x^2+3x-10}\right. \\ & \underline{x^3+3x^2-10x} \\ & \qquad\quad +3x-20 \\ & \qquad\quad \underline{3x-20} \end{array}$$

$$\therefore \quad \frac{x^3+3x^2-7x-20}{x^2+3x-10} = x+\frac{3x-20}{x^2+3x-10}$$

ಇದರಲ್ಲಿ $\dfrac{3x-20}{x^2+3x-10} = \dfrac{3x-20}{(x+5)(x-2)}$

$= \dfrac{5}{x+5} - \dfrac{16}{7(x-2)}$ ಎಂದು

ಮೇಲಿನ ಲೆಕ್ಕ (i) ರಲ್ಲಿ ಪಾಲಿಸಿದ 9.3 ರ ನಿಯಮಗಳನ್ನು ಅನುಸರಿಸಿ ತೋರಿಸಬಹುದು. ಆದ್ದರಿಂದ,

$$\frac{x^3+3x^2-7x-20}{x^2+3x-10} \; x+\frac{5}{x+5}-\frac{16}{7(x-2)}$$

(iii) $\dfrac{x^2}{(x-1)^3\,(x+1)}$ ಎಂಬುದನ್ನು ವಿಭಜಿತ ಭಿನ್ನರಾಶಿಗಳ ಮೊತ್ತವಾಗಿ ವ್ಯಕ್ತಪಡಿಸೋಣ. ಈಗ,

$$= \frac{1}{2y^3} + \frac{3}{4y^2} + \frac{1}{8y} - \frac{1}{8(2+y)}$$

$$= \frac{1}{2(x-1)^3} + \frac{3}{4(x-1)^2} + \frac{1}{8(x-1)} - \frac{1}{8(x+1)}$$

9.6 ಉದಾ : $\frac{x-4}{(x^2+3)(2x-1)}$ ಎಂಬುದನ್ನು ವಿಭಜಿತ ಭಿನ್ನರಾಶಿಗಳ ಮೊತ್ತವಾಗಿ ಬರೆಯೋಣ. ಈಗ 9.3 ನಿಯಮ 4 ರಿಂದ

$$\frac{x-4}{(x^2+3)(2x-1)} = \frac{A}{2x-1} + \frac{Cx+D}{x^2+3}$$

$$\therefore \quad x-4 = A(x^2+3) + (Cx+D)(2x-1)$$

$x=0$ ಆದಾಗ : $-4=3A-D$ .... (a)

$x=\frac{1}{2}$ ಆದಾಗ : $-4=A(\frac{1}{4}+3)$

$\Rightarrow -\frac{7}{2} = \frac{13A}{4}$, ಅಥವಾ $A = \frac{-14}{13}$ ಈ ಬೆಲೆಯನ್ನು

(a) ನಲ್ಲಿ ಆದೇಶಿಸುವುದರಿಂದ :

$$-4 = 3 \times \frac{-14}{13} - D$$

$$\Rightarrow \quad -52 = -42 - 13D$$

$$\therefore \quad -10 = -13D \text{ ಅಥವಾ, } D = \frac{10}{13}$$

ಈಗ ಸರ್ವ ಸಮೀಕರಣದ ಎರಡೂ ಬದಿ ಬರುವ x^2 ನ ಗುಣಕವನ್ನು ಸಮಗೊಳಿಸುವುದರಿಂದ :

$$0 = A + 2C$$

$$\therefore C = \frac{-A}{2} = \frac{-1}{2}\left(\frac{-14}{13}\right) = \frac{7}{13}$$

ಆದ್ದರಿಂದ : $$\frac{x-4}{(x^2+3)(2x-1)} = \frac{-14}{13(2x-1)} + \frac{7x+10}{13(x^2+3)}$$

ಅಭ್ಯಾಸ 9.1

1. $\dfrac{5x-11}{(x+2)(2x-3)}$

2. $\dfrac{23x-11x^2}{(2x-1)(9-x^2)}$

3. $\dfrac{7x-1}{1-5x+6x^2}$

4. $\dfrac{2x+5}{(x-1)\,(x+2)}$

5. $\dfrac{46+13x}{12x^2-11x-15}$

6. $\dfrac{x+10}{(x+3)\,(x-4)}$

7. $\dfrac{1+3x+2x^2}{(1-2x)\,(1-x^2)}$

8. $\dfrac{3x-20}{(x-2)\,(x+5)}$

9. $\dfrac{2x^3+x^2-x-3}{x(x-1)(2x+3)}$

10. $\dfrac{6x^2-11x+13}{(x-2)^2(x+3)}$

11. $\dfrac{26x^2+208x}{(x^2+1)(x+5)}$

12. $\dfrac{4x}{(x-1)(x+1)^2}$

13. $\dfrac{9x^3-24x^2+48x}{(x-2)^4(x+1)}$

14. $\dfrac{3x-2}{(2x^2+3)(2x+1)}$

15. $\dfrac{3x^2+x-2}{(x-2)^2(1-2x)}$

16. $\dfrac{3x+4}{(x+3)^3}$

17. $\dfrac{6x^3+5x^2-7}{3x^2-2x-1}$

18. $\dfrac{x^3+3x^2-7x-20}{x^2+5x-10}$

19. $\dfrac{7+x}{(1+x)(1+x^2)}$

20. $\dfrac{2x^2-3x-4}{x^2-x-6}$

21. $\dfrac{mx+n}{(x-a)(x-b)}$

22. $\dfrac{x^3}{x^2-1}$

23. $\dfrac{5x^3+6x^2+5x}{(x^2-1)(x+1)^3}$

24. $\dfrac{x-4}{(x^2+5)\,2x}$

25. $\dfrac{1+3x}{1+11x+28x^2}$

26. $\dfrac{3x-8}{2x^2+x-6}$

27. $\dfrac{3+2x-x^2}{(1+x)(1-4x)^2}$

28. $\dfrac{3x+5}{x^2+2x-3}$

29. $\dfrac{4+7x}{(2+3x)\,(1+x)^2}$

30. $\dfrac{x+4}{3x^2-x-2}$

31. $\dfrac{2x+1}{(x-1)\,(x^2+1)}$

32. $\dfrac{5x+6}{(2+x)\,(1-x)}$

33. $\dfrac{2x-5}{(1-x^2)\,(2x+3)}$

34. $\dfrac{4+3x+2x^2}{(1-x)\,(1+x-2x^2}$

10

ಗಣಿತಾನುಮಾನ

ಗಣಿತಶಾಸ್ತ್ರದಲ್ಲಿನ ಕೆಲವು ಪ್ರಮೇಯಗಳಿಗೆ ನೇರ ಸಾಧನೆಗಳನ್ನು ಕೊಡುವ ನಮ್ಮ ಪ್ರಯತ್ನ ಕ್ಲಿಷ್ಟತರವಾಗುವ ಸಂಭವಗಳು ಇದ್ದೇ ಇವೆ. ಇಂತಹ ಕೆಲವು ಸಂದರ್ಭಗಳಲ್ಲಿ **ಗಣಿತಾನುಮಾನ** ಎಂಬ ಪದ್ಧತಿಯಿಂದ ಅಂತಹ ಪ್ರಮೇಯಗಳನ್ನು ಸುಲಭವಾಗಿ ಸಾಧಿಸಬಹುದು. ಇದಕ್ಕಾಗಿ ಕೆಳಗೆ ನಿರೂಪಿಸಿರುವ ಮೂಲತತ್ತ್ವವನ್ನು ಉಪಯೋಗಿಸುತ್ತೇವೆ:

10·1 ಗಣಿತಾನುಮಾನ ತತ್ವ : $1 \in S \subset \{1, 2, 3, 4, \dots\} = N$ **ಮತ್ತು** $p \in S$ **ಆದಾಗ** $p+1 \in S$ **ಎಂದು ಭಾವಿಸೋಣ. ಆಗ** $S = N$ **ಎಂದು ಒಪ್ಪಿಕೊಳ್ಳುತ್ತೇವೆ.**

10·2 **ಟೀಕೆ :** ಗಣಿತಾನುಮಾನ ಪದ್ಧತಿಯನ್ನು ಸಾಮಾನ್ಯವಾಗಿ ಧನ-ಪೂರ್ಣಾಂಕಗಳ ಮೇಲೆ ಅವಲಂಬಿಸಿರುವ ಪ್ರಮೇಯಗಳನ್ನು ಸಾಧಿಸಲು ಉಪಯೋಗಿಸುತ್ತೇವೆ. ಈ ಪದ್ಧತಿಯ ಪ್ರಯೋಗ ಹೇಗೆಂಬುದನ್ನು ಕೆಳಗಿನ ಉದಾಹರಣೆಗಳಲ್ಲಿ ಸ್ಪಷ್ಟಪಡಿಸಿದ್ದೇವೆ.

10·3 **ಉದಾ :** n ಒಂದು ಧನ ಪೂರ್ಣಾಂಕವಾದಾಗ,

$$1+2+3+4+\dots+n = \frac{n(n+1)}{2} \quad \dots (10.3.1)$$

ಎಂದು ಸಾಧಿಸೋಣ.

ಸಾಧನೆ : (10,3,1)ನ್ನು ಯುಕ್ತಗೊಳಿಸುವ ಎಲ್ಲ ಧನಪೂರ್ಣಾಂಕಗಳ ಗಣ S ಆಗಿರಲಿ, $S \subset N$ [ಏಕೆ?].

$$1 = \frac{1\,(1+1)}{2}$$ ಇರುವುದರಿಂದ, $n = 1$ ಆದಾಗ, (10,3,1)

ಸಾಮಂಜಸವಾಗುತ್ತದೆ. ಅಂದರೆ $1 \in S$ ಎಂಬುದನ್ನು ಗಮನಿಸೋಣ.

(i) $\therefore\ 1 \in S \subset N.$

$$1+2+3+\dots+p = \frac{p(p+1)}{2}$$

ಈಗ ಎರಡು ಬದಿಗೂ $(p+1)$ ಸಂಖ್ಯೆಯನ್ನು ಕೂಡುವುದರಿಂದ :

$$1+2+3+\dots+p+(p+1) = \frac{p(p+1)}{2}+(p+1)$$

$$=(p+1)\left(\frac{p}{2}+1\right)$$

$$=\frac{(p+1)(p+2)}{2}$$

$(10\cdot3\cdot1)$ರಲ್ಲಿ $n=p+1$ ಎಂದು ಆದೇಶಿಸಿದರೆ, ಮೇಲಿನ ಸಮೀಕರಣವು ಬರುತ್ತದೆ. ಅಂದರೆ, $P+1 \in S$. ಆದ್ದರಿಂದ,

(ii) $P \in S$ ಆದಾಗ $P+1 \in S$.

(i) ಮತ್ತು (ii) ರಿಂದ $S=N$. [ಏಕೆ ? 'ಗಣಿತಾನುಮಾನ ತತ್ವ' ನೋಡಿರಿ.]

ಅಂದರೆ, n ಯಾವ ಧನಪೂರ್ಣಾಂಕವಾದರೂ $(10\cdot3\cdot1)$ ಯುಕ್ತವಾಗುತ್ತದೆ.

10·4 ಉದಾ : nನ ಎಲ್ಲಾ ಧನಪೂರ್ಣಾಂಕ ಬೆಲೆಗಳಿಗೂ

$$1^2+2^2+3^2+\dots+n^2 = \frac{n(n+1)(2n+1)}{6} \qquad (10\cdot4\cdot1)$$

ಎಂದು ಸಾಧಿಸೋಣ.

ಸಾಧನೆ : (10.4.1)ನ್ನು ಯುಕ್ತಗೊಳಿಸುವ ಎಲ್ಲಾ ಧನ ಪೂರ್ಣಾಂಕಗಳ ಗಣ S ಎನ್ನೋಣ. ಇದರಿಂದ $S \subset N$.

$1^2 = \dfrac{1(1+1)\ (2.1+1)}{6}$ ಇರುವುದರಿಂದ, $n=1$ ಆದಾಗ, (10.4.1) ಸಮಂಜಸವಾಗುತ್ತದೆ. ಅಂದರೆ $1 \in S$ ಎಂಬುದನ್ನು ಗಮನಿಸೋಣ.

(i) $\therefore\ 1 \in S \subset N$.

ಈಗ $P \in S$ ಎಂದು ಭಾವಿಸೋಣ. ಅಂದರೆ,

$$1^2+2^2+3^2+\dots+p^2 = \frac{p(p+1)\ ({}^2p+1)}{6}$$

ಇದರ ಎರಡು ಬದಿಗೂ $(p+1)^2$ ಸಂಖ್ಯೆಯನ್ನು ಕೂಡುವುದರಿಂದ :

$$1^2+2^2+3^2+\dots+p^2(p+1)^2 = \frac{p(p+1)\ (2p+1)}{6}+(p+1)^2$$

$$= \frac{(p+1)}{6}\left\{ p(2p+1)+6(p+1) \right\}$$

$$= \frac{(p+1)}{6}\left\{ 2p^2+7p+6 \right\}$$

$$= \frac{(p+1)\,(p+2)\ (2p+3)}{6}$$

$$= \frac{(p+1)\ \{(p+1)+1\}\{2(p+1)+1\}}{6}$$

(10.4.1) ರಲ್ಲಿ $n = p+1$ ಎಂದು ಆದೇಶಿಸಿದರೆ, ಮೇಲಿನ ಸಮೀಕರಣವು ಬರುತ್ತದೆ. ಅಂದರೆ $p+1 \in S$. ಆದ್ದರಿಂದ,

(ii) $p \in S$ ಆದಾಗ $p+1 \in S$.

(i) ಮತ್ತು (ii) ರಿಂದ $S = N$ ಇದರಿಂದ ಸಾಧನೆಯು ಪೂರ್ಣವಾಗುತ್ತದೆ.

10.5 **ಉದಾ :** n ಒಂದು ಧನಸಂಖ್ಯೆಯಾದಾಗ

$$1^3 + 2^3 + 3^3 + \ldots + n^3 = \frac{n^2(n+1)^2}{4} \quad \ldots \quad \textbf{(10.5.1)}$$

ಎಂದು ಸಾಧಿಸೋಣ.

ಸಾಧನೆ : (10.5.1) ನ್ನು ಯುಕ್ತಗೊಳಿಸುವ ಎಲ್ಲಾ ಧನ ಪೂರ್ಣಾಂಕಗಳ ಗಣ S ಎಂದಿರಲಿ. ಆದ್ದರಿಂದ $S \subset N$.

$1^3 = \frac{1^2(1+1)^2}{4}$ ಇರುವುದರಿಂದ, $n = 1$ ಆದಾಗ (10.5.1) ಸಮಂಜಸವಾಗುತ್ತದೆ. ಅಂದರೆ $1 \in S$

(i) $\therefore\ 1 \in S \subset N$

ಈಗ $p \in S$ ಎಂದು ಭಾವಿಸೋಣ. ಅಂದರೆ,

$$1^3 + 2^3 + 3^3 \ \ldots\ + p^3 = \frac{p^2(p+1)^2}{4}$$

ಇದರ ಎರಡು ಬದಿಗೂ $(p+1)^3$ ಸಂಖ್ಯೆಯನ್ನು ಕೂಡುವುದರಿಂದ :

$$1^3 + 2^3 + 3^3 + \cdots + p^3 + (p+1)^3 = \frac{p^2(p+1)^2}{4} + (p+1)^3$$

$$= \frac{(p+1)^2}{4}\{p^2+4(p+1)\}$$

$$= \frac{(p+1)^2\,(p^2+4p+1)}{4}$$

$$= \frac{(p+1)^2\,(p+2)^2}{4}$$

$$= \frac{(p+1)\,\{(p+1)+1\}^2}{4}$$

(10·5·1) ರಲ್ಲಿ $n=p+1$ ಎಂದು ಆದೇಶಿಸಿದ್ದರೆ, ಮೇಲಿನ ಸಮೀಕರಣವು ದೊರೆಯುತ್ತದೆ. ಅಂದರೆ $p+1 \in S$.

(ii) $\therefore$ $p \in S$ ಆದಾಗ $p+1 \in S$.

(i) ಮತ್ತು (ii) ರಿಂದ $S=N$ ಇದರಿಂದ ಸಾಧನೆ ಪೂರ್ಣವಾಗುತ್ತದೆ.

10·6 **ಉದಾ :** n ಸಂಖ್ಯೆಯು 3ಕ್ಕಿಂತ ಅಧಿಕವಾದ ಯಾವ ಧನ ಸಂಖ್ಯೆಯಾದರೂ $5+7+9+\ldots+(2n-1)=n^2-4$ ... (10.6.1) ಎಂದು ಸಾಧಿಸೋಣ.

ಸಾಧನೆ : $n=1$ ಆದಾಗ (10.6.1) ಸಮಂಜಸವಾಗುವುದಿಲ್ಲ [ಏಕೆ?]. ಆದ್ದರಿಂದ ಈ ಸಮೀಕರಣವನ್ನು ಕೆಳಗಿನಂತೆ ಬರೆಯುತ್ತೇವೆ.

$$(4)+5+9+\ldots+(2n-1)=n^2$$

$$\Rightarrow \quad (1+3)+5+9+\ldots+(2n-1)=n^2$$

ಈಗ $P \in S$ ಎಂದು ಭಾವಿಸೋಣ. ಅಂದರೆ,

ಅಥವಾ, $1+3+5+9+\ldots+(2n-1) = n^2$ . .(10.6.2)

ಈಗ, $1=1^2$ ಇರುವುದರಿಂದ, $n=1$ ಆದಾಗ (10.6.2) ಸಮಂಜಸವಾಗುತ್ತದೆ. ಅಂದರೆ $1 \in S=$(10.6.2)ನ್ನು ಯುಕ್ತಗೊಳಿಸುವ ಎಲ್ಲಾ ಧನಪೂರ್ಣಾಂಕಗಳ ಗಣ $\subset N$. ಈಗ $p \in S$ ಎಂದು ಭಾವಿಸೋಣ. ಅಂದರೆ,

$$1+3+5+9+ \dots +(2p-1)=p^2.$$

ಇವರ ಎರಡು ಬದಿಗೂ $\{2(p+1)-1\}=2p+1$ ಸಂಖ್ಯೆಯನ್ನು ಕೂಡುವುದರಿಂದ :

$$1+3+5+9+ \dots +(2p-1)+(2p+1)=p^2+2p+1$$
$$=(p+1)^2$$

ಈಗ (10.6.2) ರಲ್ಲಿ $n=p+1$ ಎಂದು ಆದೇಶಿಸಿದರೆ, ಮೇಲಿನ ಸಮೀಕರಣವು ಬರುತ್ತದೆ, ಅಂದರೆ $P+1 \in S$.

(ii) $\therefore$ $p \in S$ ಆದಾಗ $p+1 \in S$.

(i) ಮತ್ತು (ii) ರಿಂದ ಸಾಧನೆಯು ಪೂರ್ತಿಯಾಗುತ್ತದೆ.

ಅಭ್ಯಾಸ 10.6

ಗಣಿತಾನುಮಾನವನ್ನು ಪ್ರಯೋಗಿಸಿ, ಕೆಳಗಿನವುಗಳನ್ನು ಸಾಧಿಸಿರಿ ;

1. $3+5+ \dots +(2n-1)=n^2-1$
2. $2+4+6+ \dots +2n=n(n+1)$
3. $2+2^2+2^3+ \dots +2^n=2(2^n-1)$
4. $1+4+4^2+ \dots +4^{n-1}=(4^n-1)/3$
5. $1.2+2.3+3.4+ \dots +n(n+1)=n(n+1)(n+2)/3$
6. $1.5+2.7+3.9+ \dots$ n ಪದಗಳು $=n(n+1)(4n+1)/6$
7. $1^2+3^2+5^2+ \dots +(2n-1)^2=n(2n-1)(2n+1)/3$
8. $1.2^2+2.3^2+3.4^2+ \dots +n(n+1)^2=n(n+1)(n+2)(3n+5)/12$

9. $1.3.4+2.5.6+3.7.8+ \dots +n(2n+1)(2n+2)$
$= n(n+1)^2(n+2$

10. $\frac{1}{1.2}+\frac{1}{2.3}+\frac{1}{3.4}+\dots+\frac{1}{n(n+1)}=\frac{n}{n+1}$

11. $\frac{1}{2}+\frac{1}{2^2}+\frac{1}{2^3}+\dots+\frac{1}{2^n}=1-\frac{1}{2^n}$

12. $1+3+6+\dots$ n ಪದಗಳು $= n(n+1)(n+2)/6$

13. $\frac{1}{1.3}+\frac{1}{3.5}+\frac{1}{5.7}+\dots+\frac{1}{(2n-1)(2n+1)}=\frac{n}{2n+1}$


14. $\frac{1}{1.2.3}+\frac{1}{2.3.4}+\dots$ n ಪದಗಳು $=\frac{n(n+3)}{4(n+1)(n+2)}$

15. $a+(a+d)+(a+2d)+\dots+(a+\overline{n-1}.d) =$
$\frac{n}{2}\{2a+(n-1)d\}$

11

ಕ್ರಮಯೋಜನೆಗಳು ಮತ್ತು ವಿಕಲ್ಪಗಳು

11.1 ಒಂದು ಚಲನಚಿತ್ರಮಂದಿರವನ್ನು ಪ್ರವೇಶಿಸಲು 2 ದ್ವಾರಗಳು ಮತ್ತು ನಿರ್ಗಮಿಸಲು 3 ದ್ವಾರಗಳು ಇವೆ. ಹಾಗಾದರೆ ಈ ಚಲನಚಿತ್ರ ಮಂದಿರವನ್ನು ಎಷ್ಟು ವಿವಿಧ (ಬೇರೆ ಬೇರೆ) ವಿಧಗಳಲ್ಲಿ ಪ್ರವೇಶಿಸಿ ನಿರ್ಗಮಿಸಬಹುದೆಂಬ ಸಮಸ್ಯೆಯನ್ನು ಪರಿಶೀಲಿಸೋಣ. [ಚಿತ್ರ : 11.1.1 ನೋಡಿರಿ].



ಚಿತ್ರ 11.1.1

ಚಿತ್ರ : 11.1.1 ರಲ್ಲಿ ಪ್ರವೇಶ ದ್ವಾರಗಳನ್ನು 1,2 ಎಂಬ ಸಂಕೇತದಿಂದಲೂ ಮತ್ತು ನಿರ್ಗಮನ ದ್ವಾರಗಳನ್ನು A,B ಮತ್ತು C ಎಂಬ ಸಂಕೇತದಿಂದಲೂ ಸೂಚಿಸಿದ್ದೇವೆ. ದ್ವಾರ 1 ರಲ್ಲಿ ಪ್ರವೇಶಿಸಿದ ಪ್ರೇಕ್ಷಕರನ್ನು ಎಷ್ಟು ವಿವಿಧ ರೀತಿಗಳಲ್ಲಿ

ನಿರ್ಗಮಿಸಬಹುದೆಂಬುದನ್ನು ಒಂದು ಬಾಣದ ಗುರ್ತಿನಿಂದ ತೋರಿಸಿದ್ದೇವೆ [ಈ ಗುರ್ತಿನಿಂದ : $\rightarrow$], ಅಂದರೆ A, B ಅಥವಾ C ಈ 3 ದ್ವಾರಗಳ ಪೈಕಿ ಯಾವ ಒಂದು ದ್ವಾರದಿಂದಲಾದರೂ ಚಲನಚಿತ್ರ ಮಂದಿರದಿಂದ ನಿರ್ಗಮಿಸಬಹುದು. ದ್ವಾರ 2ರಲ್ಲಿ ಪ್ರವೇಶಿಸಿದಾಗಲೂ ಸಹ, ಇದೇ ರೀತಿ 3 ವಿವಿಧ ರೀತಿಗಳಲ್ಲಿ ಚಲನಚಿತ್ರಮಂದಿರದಿಂದ ನಿರ್ಗಮಿಸಬಹುದೆಂಬುದನ್ನು ಗಮನಿಸೋಣ. [ಇದನ್ನು $\rightarrow$ ಈ ಗುರ್ತಿನಿಂದ ತೋರಿಸಿದ್ದೇವೆ.] ಆದ್ದರಿಂದ $3+3=6$ ವಿವಿಧ ವಿಧಗಳಲ್ಲಿ ಚಲನಚಿತ್ರ ಮಂದಿರವನ್ನು ಪ್ರವೇಶಿಸಿ ನಿರ್ಗಮಿಸಬಹುದೆಂಬುದು ಸ್ಪಷ್ಟವಾಗುತ್ತದೆ.

ಇದರಿಂದ ಗಮನಿಸಬೇಕಾದ ವಿಷಯ : ಪ್ರವೇಶಿಸಲು 2 ದ್ವಾರಗಳು ಮತ್ತು ನಿರ್ಗಮಿಸಲು 3 ದ್ವಾರಗಳು ಇರುವಾಗ 2×3 ವಿವಿಧ ವಿಧಗಳನ್ನು ಪ್ರವೇಶಿಸಿ ನಿರ್ಗಮಿಸಬಹುದು. ಈ ಅಂಶವನ್ನು ಕೆಳಗಿನ ಮೂಲಸೂತ್ರದಲ್ಲಿ ಸಾಮಾನ್ಯೀಕರಿಸಿದ್ದೇವೆ.

***11.2* ಮೂಲಸೂತ್ರ : ಒಂದು ಕ್ರಿಯೆಯನ್ನು m ವಿವಿಧ ವಿಧಗಳ ಪೈಕಿ ಯಾವುದೇ ಒಂದು ವಿಧದಲ್ಲಿ ಆಚರಿಸಿದ ನಂತರ, ಇದನ್ನು ಅವಲಂಬಿಸಿ ಮತ್ತೊಂದು ಕ್ರಿಯೆಯನ್ನು n ವಿವಿಧ ವಿಧಗಳಲ್ಲಿ ಆಚರಿಸಬಹುದಾದರೆ, ಆಗ ಆ ಎರಡು ಕ್ರಿಯೆಗಳನ್ನು ಒಟ್ಟಾಗಿ $m \times n$ ವಿವಿಧವಿಧಗಳಲ್ಲಿ ಆಚರಿಸಬಹುದು, ಈ ಎರಡು ಕ್ರಿಯೆಗಳನ್ನು $m \times n$ ವಿಧಗಳ ಪೈಕಿ ಮೇಲಿನಂತೆ ಯಾವುದೇ ಒಂದು ವಿಧದಲ್ಲಿ ಆಚರಿಸಿದನಂತರ ಮೂರನೆಯ ಕ್ರಿಯೆಯೊಂದನ್ನು p ವಿಧಗಳಲ್ಲಿ ಆಚರಿಸಬಹುದಾದರೆ, ಆಗ ಈ ಮೂರು ಕ್ರಿಯೆಗಳನ್ನು ಒಟ್ಟಾಗಿ $m \times n \times p$ ವಿವಿಧ ವಿಧಗಳಲ್ಲಿ ಆಚರಿಸಬಹುದು. ಇತ್ಯಾದಿ.**

11.3 **ವ್ಯಾಖ್ಯೆ : ದತ್ತವಸ್ತುಗಳನ್ನು ಅವುಗಳ ಸ್ಥಾನಕ್ಕೆ ಗಮನಕೊಟ್ಟು ಪ್ರಕಾರ ಅಳವಡಿಸಿದಾಗ ದೊರೆಯುವ ಜೋಡಣೆಯನ್ನು ಸರಳ ಕ್ರಮ ಯೋಜನೆಯೆಂದು ಕರೆಯುತ್ತೇವೆ.**

11.4 **ಉದಾ :** 1. a ಮತ್ತು b ಎಂಬ ಎರಡು ಅಕ್ಷರಗಳಿಂದ, ಒಂದು ಸಲಕ್ಕೆ ಎರಡು ಅಕ್ಷರಗಳನ್ನು ಆರಿಸಿದ ಎಲ್ಲಾ ಸರಳ ಕ್ರಮಯೋಜನೆಗಳನ್ನು ಬರೆಯೋಣ.

(i) **ಪುನರಾವರ್ತನೆ ನಿಷಿದ್ಧ : ಇಲ್ಲಿ ಯಾವ ಅಕ್ಷರವನ್ನೂ, ಯಾವುದೇ ಸರಳ ಕ್ರಮಯೋಜನೆಯೊಂದರಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಉಪಯೋಗಿಸಬಾರದೆಂಬ ನಿಬಂಧ ಹಾಕಿಕೊಂಡು, ಅಕ್ಷರಗಳನ್ನು ಅಳವಡಿಸುತ್ತೇವೆ. ಆದ್ದರಿಂದ ಬೇಕಾದ ಸರಳ ಕ್ರಮಯೋಜನೆಗಳು : ab ಮತ್ತು ba.**

(ii) **ಪುನರಾವರ್ತನೆ ಕ್ರಮಬದ್ಧ :** ಇಲ್ಲಿ ಬೇಕಾದ ಕ್ರಮವೊಂದನ್ನು ರಚಿಸುವಾಗ ಯಾವುದೇ ಒಂದು ದತ್ತ ಅಕ್ಷರವನ್ನು ಒಂದಕ್ಕಿಂತ ಹೆಚ್ಚು ಬಾರಿ ಉಪಯೋಗಿಸಬಹುದೆಂದು ಭಾವಿಸುತ್ತೇವೆ. ಆದ್ದರಿಂದ ಬೇಕಾದ ಸರಳ ಕ್ರಮಯೋಜನೆಗಳು : i) ಮೊದಲಕ್ಷರ a ಆದಾಗ : a a, ab

ii) — ,, — b — ,, — : b a, bb.

ಆದ್ದರಿಂದ aa, ab, ba, bb ಎಂಬ ನಾಲ್ಕು ಕ್ರಮಯೋಜನೆಗಳಿವೆ.

2 ಈಗ a, b, c ಎಂಬ ಅಕ್ಷರಗಳಲ್ಲಿ ಒಂದು ಸಲಕ್ಕೆ 2 ಅಕ್ಷರಗಳನ್ನು ಆರಿಸಿ ಕ್ರಮಯೋಜನೆಗಳನ್ನು ರಚಿಸಬಹುದೆಂಬ ಸಮಸ್ಯೆಯನ್ನು ಬಿಡಿಸೋಣ.

(i) **ಪುನರಾವರ್ತನೆ ನಿಷಿದ್ಧ :**

(i) a ದಿಂದ ಶುರುವಾಗುವ ಸರಳ ಕ್ರಮಯೋಜನೆಗಳು : ab, ac

ii) b — ,, — ,, : bc, ba

iii) c — ,, — ,, : ca, cb

∴ ಬೇಕಾದ ಕ್ರಮಯೋಜನೆಗಳು : ab, ac, bc, ba, ca, cb, ಅಂದರೆ ಪುನರಾವರ್ತನೆ ನಿಷಿದ್ಧವಿರುವಾಗ 2 ಅಕ್ಷರದ ಆ ಸರಳಕ್ರಮಯೋಜನೆಗಳನ್ನು 3 ವಿವಿಧ ಅಕ್ಷರಗಳಿಂದ ರಚಿಸಬಹುದು.

(ii) **ಪುನರಾವರ್ತನೆ ಕ್ರಮಬದ್ಧ :**

i) ಮೊದಲಕ್ಷರ a ಆದಾಗ : aa, ab, ac

ii) — ,, — b — ,, : ba, bb, bc

iii) — ,, — c — ,, : ca, cb, cc ಆದ್ದರಿಂದ

ಬೇಕಾದ ಸರಳ ಕ್ರಮಯೋಜನೆಗಳು :

aa, ab, ac, ba, bb, bc, ca, cb, cc .... (11.4.1)

ಅಂದರೆ, ಪುನರಾವರ್ತನೆಗೆ ಕ್ರಮಬದ್ಧವಿರುವಾಗ, 3 ವಿವಿಧ ಅಕ್ಷರಗಳಿಂದ, ಒಂದು ಸಲಕ್ಕೆ 2 ಅಕ್ಷರಗಳನ್ನು ಆರಿಸಿದ 9 ಸರಳ ಕ್ರಮ ಯೋಜನೆಗಳನ್ನು ರಚಿಸಬಹುದು.

11.5 **ಟೀಕೆ : ಇನ್ನು ಮುಂದೆ ಈ ಅಧ್ಯಾಯದುದ್ದಕ್ಕೂ, ಅನುಕೂಲದ ಸಲುವಾಗಿ, 'ಸರಳ ಕ್ರಮಯೋಜನೆ' ಎಂದು ಬರೆಯುವುದರ ಬದಲು**

ಸುಮ್ಮನೆ 'ಕ್ರಮಯೋಜನೆ' ಎಂದು ಬರೆಯುತ್ತೇವೆ. ಅರ್ಥಾತ್ 'ಕ್ರಮಯೋಜನೆ' ಎಂದು ಬರೆದಾಗಲೆಲ್ಲಾ ಸರಳ ಕ್ರಮಯೋಜನೆಯನ್ನು ಕುರಿತು ಹೇಳುತ್ತಿದ್ದೇವೆಂದು ತಿಳಿಯಬೇಕು. (11.4.1) ರಲ್ಲಿ ಪಟ್ಟಿಮಾಡಿರುವ ಯಾವುದೇ ಒಂದು ಕ್ರಮಯೋಜನೆಯಲ್ಲಿ ಬರುವ ಎರಡು ಭಿನ್ನ ಅಕ್ಷರಗಳ ಸ್ಥಾನಗಳನ್ನು ಪರಸ್ಪರ ವಿನಿಮಯ ಮಾಡಿದರೆ, ಆ ಕ್ರಮಯೋಜನೆಗಿಂತ ಭಿನ್ನವಾದ ಮತ್ತೊಂದು ಕ್ರಮಯೋಜನೆಯು ಲಭಿಸುತ್ತದೆಂಬುದನ್ನು ಗಮನಿಸೋಣ [ಏಕೆ ?] ಮೇಲಿನ ಉದಾಹರಣೆಯಲ್ಲಿ ಕೊಟ್ಟಿರುವ ಲೆಕ್ಕ 2 ನ್ನು ಕೆಳಗಿನಂತೆಯೂ ಮಾಡಬಹುದು.

(i) **ಪುನರಾವರ್ತನೆ ನಿಷಿದ್ಧ :** ಚಿತ್ರ : 11.5.1 ರಲ್ಲಿ ಕೊಟ್ಟಿರುವ ಎರಡು ಪೆಟ್ಟಿಗೆಗಳನ್ನು a, b, c ಅಕ್ಷರಗಳಿಂದ ಪ್ರತಿಯೊಂದು ಬಾರಿ ಭರ್ತಿಮಾಡಿದಾಗಲೆಲ್ಲಾ, ಬೇಕಾದ ಕ್ರಮಯೋಜನೆಯೊಂದು ದೊರಕುತ್ತದೆಂಬುದನ್ನು ಗಮನಿಸೋಣ [ಏಕೆ ?].

1	2

ಚಿತ್ರ : 11.5,1

ಈಗ 1ನೇ ಪೆಟ್ಟಿಗೆಯನ್ನು ದತ್ತ 3 ಅಕ್ಷರಗಳಲ್ಲಿ ಯಾವುದೇ ಒಂದು ಅಕ್ಷರದಿಂದ, ಅಂದರೆ 3 ವಿವಿಧ ವಿಧಗಳಲ್ಲಿ ಭರ್ತಿಮಾಡಬಹುದು. ಹೀಗೆ 1ನೇ ಪೆಟ್ಟಿಗೆಯನ್ನು ಒಂದು ಅಕ್ಷರದಿಂದ ಭರ್ತಿಮಾಡಿದ ನಂತರ, ಉಳಿದ 2 ಅಕ್ಷರಗಳಿಂದ, 2ನೇ ಪೆಟ್ಟಿಗೆಯನ್ನು 2 ವಿವಿಧ ವಿಧಗಳಲ್ಲಿ ಭರ್ತಿಮಾಡಬಹುದೆಂಬುದನ್ನು ಗಮನಿಸೋಣ. ಆದ್ದರಿಂದ 11.2 ಮೂಲಸೂತ್ರದ ಪ್ರಕಾರ, 2 ಪೆಟ್ಟಿಗೆಗಳನ್ನು ಒಟ್ಟಿಗೆ $3 \times 2 = 6$ ವಿವಿಧ ವಿಧಗಳಲ್ಲಿ ಭರ್ತಿಮಾಡಬಹುದು. ಅಂದರೆ 3 ವಿವಿಧ ಅಕ್ಷರಗಳನ್ನು ಒಂದು ಸಲಕ್ಕೆ ಯಾವುದೇ ಎರಡಕ್ಷರಗಳನ್ನು ಆರಿಸಿದಾಗ ಬರುವ ಎಲ್ಲಾ ಕ್ರಮಯೋಜನೆಗಳ ಸಂಖ್ಯೆ 6 ಎಂದಾಯಿತು.

(ii) **ಪುನರಾವರ್ತನೆ ಕ್ರಮಬದ್ಧ :** ಚಿತ್ರ : 11.5.1 ರಲ್ಲಿ ಕೊಟ್ಟಿರುವ 1ನೇ ಪೆಟ್ಟಿಗೆಯನ್ನು ಯಾವುದೇ ಒಂದು ಅಕ್ಷರದಿಂದ ತುಂಬಿದ ನಂತರ [ಇದನ್ನು 3 ವಿಧಗಳಲ್ಲಿ ಮಾಡಬಹುದು], 2ನೇ ಪೆಟ್ಟಿಗೆಯನ್ನೂ ಸಹ 3 ವಿಧಗಳಲ್ಲಿ ತುಂಬ

ಬಹುದು ಏಕೆಂದರೆ, 1ನೇ ಪೆಟ್ಟಿಗೆಯಲ್ಲಿ ತುಂಬಿದ ಅಕ್ಷರವನ್ನು ಮತ್ತೆ 2ನೇ ಪೆಟ್ಟಿಗೆಯಲ್ಲಿಯೂ ತುಂಬಬಹುದು. ಆದ್ದರಿಂದ ಎರಡೂ ಪೆಟ್ಟಿಗೆಗಳನ್ನು ಒಟ್ಟಿಗೆ $3 \times 3 = 9$ ವಿವಿಧ ವಿಧಗಳಲ್ಲಿ ತುಂಬಬಹುದು ಅಥವಾ, ಪುನರಾವರ್ತನೆ ಕ್ರಮಬದ್ಧವಿರುವಾಗ, 3 ವಿವಿಧ ಅಕ್ಷರಗಳಿಂದ, ಒಂದು ಸಲಕ್ಕೆ 2 ಅಕ್ಷರಗಳನ್ನು ಆರಿಸಿ ಮಾಡಿದ ಎಲ್ಲಾ ಕ್ರಮಯೋಜನೆಗಳ ಒಟ್ಟು ಸಂಖ್ಯೆ 9.

n ಮತ್ತು r ಧನ ಪೂರ್ಣಾಂಕವಾದಾಗ n ವಿವಿಧ ವಸ್ತುಗಳಿಂದ n ವಸ್ತುಗಳನ್ನು ($r \leqslant n$) ಒಂದು ಸಲಕ್ಕೆ ಆರಿಸಿ ಅಳವಡಿಸಿದಾಗ ದೊರೆಯುವ ಕ್ರಮಯೋಜನೆಗಳ ಸಂಖ್ಯೆಯನ್ನು ಇನ್ನು ಮುಂದೆ $_nP_r$ ಎಂಬ ಸಂಕೇತದಿಂದ ಸೂಚಿಸೋಣ ಪುನರಾವರ್ತನೆ ನಿಷಿದ್ಧವಿರುವಾಗ, $_3P_2 = 6$ ಎಂಬುದನ್ನು ಆಗಲೇ ಕಂಡಿದ್ದೇವೆ.

11.6 ಪ್ರಮೇಯ : **ಪುನರಾವರ್ತನೆ ನಿಷಿದ್ಧವಿರುವಾಗ, n ವಿವಿಧ ವಸ್ತುಗಳಿಂದ ಒಂದು ಸಲಕ್ಕೆ r ವಸ್ತುಗಳನ್ನು ಆರಿಸಿ ಸರಳರೇಖೆಯಲ್ಲಿ ಅಳವಡಿಸಿದಾಗ ದೊರೆಯುವ ಒಟ್ಟು ಕ್ರಮಯೋಜನೆಗಳು.**

$$_nP_r = n(n-1)(n-2)(n-3) \ldots (n-r+1) \quad \cdots \quad (16.6.1)$$

ಸಾಧನೆ : ಸಾಲಾಗಿ ಒಂದರ ಪಕ್ಕದಲ್ಲೊಂದರಂತೆ ಇಟ್ಟಿರುವ r ಖಾಲಿ ಪೆಟ್ಟಿಗೆಗಳನ್ನು ದತ್ತ n ವಸ್ತುಗಳಿಂದ ಒಂದು ಸಲಕ್ಕೆ r ವಿವಿಧ ವಸ್ತುಗಳನ್ನು ಆರಿಸಿ (ಒಂದು ಪೆಟ್ಟಿಗೆಯಲ್ಲಿ ಒಂದೇ ಒಂದು ವಸ್ತುವನ್ನು ಹಾಕಬೇಕು) ತುಂಬಿದಾಗಲೆಲ್ಲಾ ಬೇಕಾದ ಒಂದು ಕ್ರಮಯೋಜನೆಯು ದೊರೆಯುತ್ತದೆಂಬುದನ್ನು ಗಮನಿಸೋಣ ಆದ್ದರಿಂದ ಚಿತ್ರ : 11.6.1 ರಲ್ಲಿರುವ r ಪೆಟ್ಟಿಗೆಗಳನ್ನು ದತ್ತ n ವಸ್ತುಗಳಿಂದ ಮೇಲಿನಂತೆ ಎಷ್ಟು ವಿವಿಧ ವಿಧಗಳಲ್ಲಿ ತುಂಬಬಹುದೆಂಬುದನ್ನು ನಿರ್ಧರಿಸಿ ಸಾಧನೆಯನ್ನು ಪೂರ್ತಿ ಮಾಡುತ್ತೇವೆ.

n	n-1	n-2	n-2	n-4	....	n-(n-2)	n-(r-1)
1	2	3	4	5		r-1	n

ಚಿತ್ರ 11.6.1

1 ನೆಯ ಪೆಟ್ಟಿಗೆಯನ್ನು [ಚಿತ್ರ : 11.6.1 ನೋಡಿ] ದತ್ತ n ವಿವಿಧ ವಸ್ತುಗಳಲ್ಲಿ, ಯಾವ ವಸ್ತುವಿನಿಂದಲಾದರೂ, ಅಂದರೆ n ವಿಧಗಳಲ್ಲಿ ತುಂಬಹುದು. ಹೀಗೆ

1ನೆಯ ಪೆಟ್ಟಿಗೆಯನ್ನು ತುಂಬಿದನಂತರ, 2ನೆಯ ಪೆಟ್ಟಿಗೆಯನ್ನು ಉಳಿದ $(n-1)$ ವಿವಿಧ ವಸ್ತುಗಳಿಂದ $(n-1)$ ವಿಧಗಳಲ್ಲಿ ತುಂಬಬಹುದು. ಆದ್ದರಿಂದ 1 ಮತ್ತು 2ನೆಯ ಪೆಟ್ಟಿಗೆಗಳನ್ನು $n(n-1)$ ವಿವಿಧ ವಿಧಗಳಲ್ಲಿ ತುಂಬಬಹುದು [11.2 ಮೂಲ ಸೂತ್ರನೋಡಿ], 1 ಮತ್ತು 2 ನೆಯ ಪೆಟ್ಟಿಗೆಗಳನ್ನು ಹೀಗೆ ತುಂಬಿದನಂತರ, 3 ನೆಯ ಪೆಟ್ಟಿಗೆಯನ್ನು ತುಂಬಲು $(n-2)$ ವಸ್ತುಗಳು ಉಳಿಯುತ್ತವೆ [ಏಕೆ ?] ; ಅಂದರೆ 3ನೆಯ ಪೆಟ್ಟಿಗೆಯನ್ನು, ಮೊದಲ ಎರಡು ಪೆಟ್ಟಿಗೆಗಳನ್ನು ಯಾವುದೇ ಒಂದು ರೀತಿಯಲ್ಲಿ ತುಂಬಿದನಂತರ, $(n-2)$ ವಿವಿಧ ವಿಧಗಳಲ್ಲಿ ತುಂಬಬಹುದೆಂದಾಯಿತು. ಆದ್ದರಿಂದ 1,2 ಮತ್ತು 3ನೆಯ ಪೆಟ್ಟಿಗೆಗಳನ್ನು ಒಟ್ಟಾಗಿ $n(n-1)(n-2)$ ವಿಧಗಳಲ್ಲಿ ತುಂಬಬಹುದು. ಈ ವಾದಸರಣಿಯನ್ನು ಮುಂದುವರಿಸುವುದರಿಂದ r ಪೆಟ್ಟಿಗೆಗಳನ್ನು ಒಟ್ಟಿಗೆ,

$$\{n(n-1)(n-2) \quad \ldots \quad \ldots \quad r \text{ ಅಪವರ್ತನಗಳು}\}$$

ವಿವಿಧ ವಿಧಗಳಿಂದ ತುಂಬಬಹುದು ಎಂದು ತಿಳಿದುಬರುತ್ತದೆ.

ಅಥವಾ $nPr = n(n-1)(n-2) \ldots (n-r+1) \ldots \qquad (11.6.2)$

11.7 ಅನುಮಿತ : ವಸ್ತುಗಳ ಪುನರಾವರ್ತನೆ ಕ್ರಮಬದ್ಧವಿರುವಾಗ $nPr = n^r$ ಎಂದು ಸಾಧಿಸೋಣ

ಸಾಧನೆ : ಈಗ ಯಾವುದೇ ಒಂದು ವಸ್ತುವು ಏಕಕಾಲಕ್ಕೆ ಎಲ್ಲಾ ಪೆಟ್ಟಿಗೆಗಳಲ್ಲೂ ಬರಬಹುದಾದ್ದರಿಂದ [ಏಕೆ ?], ಪ್ರತಿಯೊಂದು ಪೆಟ್ಟಿಗೆಯನ್ನೂ n ವಿಧಗಳಲ್ಲಿ ತುಂಬಬಹುದು ಎಂಬುದನ್ನು ಗಮನಿಸೋಣ. ಆದ್ದರಿಂದ r ಪೆಟ್ಟಿಗೆಗಳನ್ನು ಒಟ್ಟಿಗೆ $n \times n \times n \times \ldots n$ ಅಪವರ್ತಗಳು $= n^n$ ವಿಧಗಳಲ್ಲಿ ತುಂಬಬಹುದು. ಇದರಿಂದ ಸಾಧನೆ ಪೂರ್ತಿಯಾಗುತ್ತದೆ.

11.8 ಟೀಕೆ : (11·6·1) ಸಮೀಕರಣದ ಬಲಬದಿಯಲ್ಲಿ r ಅಪವರ್ತನ ಮೊದಲನೆಯ ಅಪವರ್ತನ n ; ಎರಡನೆಯ **ಅಥವಾ** ಉಳಿದ ಯಾವ **ಅಪವರ್ತನವೇ ಆಗಲಿ, ಅದು ತನ್ನ ಹಿಂದಿನ ಅಪವರ್ತನಕ್ಕಿಂತ ಒಂದು ಕಡಮೆಯಾಗಿದೆ** [ಅಂದರೆ { ಹಿಂದಿನ ಅಪವರ್ತನ — 1}] ಎಂಬುದನ್ನು **ನೆನಪಿನಲ್ಲಿಡೋಣ. ಈ ಅಂಶಗಳು ಕ್ರಮಯೋಜನೆಯ ಮೇಲಿನ ಲೆಕ್ಕಗಳನ್ನು ಬಿಡಿಸುವ ಸಂದರ್ಭಗಳಲ್ಲಿ ಸಹಕಾರಿಯಾಗುತ್ತವೆ.**

ಉದಾ : ${}_{12}P_7 = 12(12-1)(12-2)\ldots\ldots 7$ ಅಪವರ್ತನಗಳು,

$= 12.11.10.9.8.7.6$

${}_nP_n = n(n-1)(n-2)\ldots\ldots\ldots n$ ಅಪವರ್ತನಗಳು.

$= n(n-1)(n-2)\ldots\ldots\ldots 3.2.1.$

$= \lfloor n$ ಅಥವಾ $n!$ ಎಂದು ಸಂಕೇತದಲ್ಲಿ ಬರೆದು ಸೂಚಿಸುತ್ತೇವೆ,

$\lfloor n = n!$ ಎಂಬುದನ್ನು **'n ಶ್ರೇಣಿಲಬ್ಧ'** ಎಂದು ಓದುತ್ತೇವೆ. ಈಗ,

$\lfloor 5 = 5.4.3.2.1 = 120,$

ಮತ್ತು $3! = 3.2.1 = 6.$

11.9 ಉದಾ : $${}_nP_r = \frac{n!}{(n-r)!}$$ ಎಂದು ಸಾಧಿಸೋಣ.

ಸಾಧನೆ : $${}_nP_r = (n-1)(n-2)\ldots\ldots\ldots(n-r+1)$$

$$= \frac{n(n-1)(n-2)\ldots\ldots(n-r+1)}{1} \cdot \frac{(n-r)(n-r-1)\ldots\ldots 3.2.1}{(n-r)(n-r-1)\ldots\ldots 3.2.1}$$

$$= \frac{n(n-1)(n-2)\ldots\ldots 3.2.1}{(n-r)(n-r-1)\ldots\ldots 3.2.1}$$ = ಬಲಬದಿ [ಏಕೆ?]

$$\therefore \quad {}_nP_r = \frac{n!}{(n-r)!} \quad \ldots\ldots\ldots\ldots\ldots(11.9.1)$$

ಉದಾ : 5 ವಿವಿಧ ಬಣ್ಣಗಳ-ಅಂದರೆ ಕೆಂಪು. ಹಳದಿ, ಬಿಳಿ, ಕಪ್ಪು ಮತ್ತು ಹಸಿರು ಬಣ್ಣದ ಒಂದೊಂದು ಚೆಂಡು ಇದೆ. ಈ 5 ಚೆಂಡುಗಳಿಂದ ಒಂದುಸಲಕ್ಕೆ ಅನುಕ್ರಮವಾಗಿ (i) 3 ಚೆಂಡುಗಳನ್ನಾರಿಸಿದ (ii) 4 ಚೆಂಡುಗಳನ್ನಾರಿಸಿದ ಮತ್ತು (iii) 5 ಚೆಂಡುಗಳನ್ನಾರಿಸಿದ ಎಷ್ಟು ವಿವಿಧಜೋಡಣೆಗಳನ್ನು ಮಾಡಬಹುದು? ಹೇಗೆ (iii)ರಲ್ಲಿ ಛಮಾಡಿದ ಜೋಡಣೆಗಳ ಪೈಕಿ, ಎಷ್ಟು ಜೋಡಣೆಗಳು(a)ಹಸಿರು ಚೆಂಡಿನಿಂದ ಪ್ರಾರಂಭವಾಗುತ್ತವೆ? (b)ಕೆಂಪು ಚೆಂಡಿನಿಂದ ಮುಕ್ತಾಯವಾಗುತ್ತವೆ? (c) ಹಸಿರು ಚೆಂಡಿನಿಂದ

ಪ್ರಾರಂಭವಾಗಿ, ಕೆಂಪು ಚೆಂಡಿನಿಂದ ಮುಕ್ತಾಯವಾಗುತ್ತವೆ.? (d) ಎಷ್ಟು ಜೋಡಣೆಗಳಲ್ಲಿ ಕೆಂಪು ಮತ್ತು ಕಪ್ಪು ಚೆಂಡುಗಳು ಜೊತೆಯಾಗಿ ಬರುತ್ತವೆ.

(i) 5 ಚೆಂಡುಗಳಲ್ಲಿ 3ನ್ನು ಆರಿಸಿದ ಜೋಡಣೆಗಳ (ಕ್ರಮಯೋಜನೆಗಳ)ಸಂಖ್ಯೆ $= {}_5P_3 = 5 \times 4 \times 3 = 60$. ಇದೇರೀತಿ (ii)ಮತ್ತು (iii) ರ ಜೋಡಣೆಗಳ ಸಂಖ್ಯೆಗಳು ಅನುಕ್ರಮವಾಗಿ ${}_5P_4 = 5.4.3.2 = 120$ ಮತ್ತು ${}_5P_5 = 5.4.3.2.1. = 120$.

(a) ಗೆ ಸಂಬಂಧಿಸಿದಂತೆ : ಇಲ್ಲಿ ಜೋಡಣೆಯು ಹಸಿರು ಚೆಂಡಿನಿಂದ ಪ್ರಾರಂಭವಾಗಬೇಕಾಗಿರುವುದರಿಂದ, 1ನೇ ಪೆಟ್ಟಿಗೆಯಲ್ಲಿ [ಚಿತ್ರ: 11.9.1 ನೋಡಿರಿ]ಹಸಿರು ಚೆಂಡನ್ನು ತುಂಬಿ [ಇದನ್ನು ಒಂದು ವಿಧದಲ್ಲಿ ಮಾತ್ರ ತುಂಬಬಹುದು-ಏಕೆ?]ಅನಂತರ ಉಳಿದ 4 ಪೆಟ್ಟಿಗೆಗಳನ್ನು 4 ಚೆಂಡುಗಳಿಂದ ತುಂಬಿದರೆ, ಹಸಿರು ಚೆಂಡಿನಿಂದ ಪ್ರಾರಂಭವಾಗುವ ಒಂದು ಜೋಡಣೆಯು ದೊರೆಯುತ್ತದೆ.ಆದ್ದರಿಂದ ಹಸಿರು ಚೆಂಡಿನಿಂದ ಪ್ರಾರಂಭವಾಗುವ ಜೋಡಣೆಗಳ ಸಂಖ್ಯೆ = ಒಂದನೇ ಪೆಟ್ಟಿಗೆಯನ್ನು ತುಂಬಿಸುವ ಕ್ರಮ × ಉಳಿದ ಪೆಟ್ಟಿಗೆಗಳನ್ನು ತುಂಬಿಸುವ ಕ್ರಮ. $= 1 \times {}_4P_4 = 24$ [ಏಕೆ?].

ಹಸಿರು				ಕೆಂಪು
1	2	3	4	5

ಚಿತ್ರ 11.9.1

(b)ಗೆ ಸಂಬಂಧಿಸಿದಂತೆ: ಇಲ್ಲಿ ಜೋಡಣೆಯು ಕೆಂಪು ಚೆಂಡಿನಿಂದ ಮುಕ್ತಾಯವಾಗಬೇಕಾಗಿರುವುದರಿಂದ, 5ನೇ ಪೆಟ್ಟಿಗೆಯಲ್ಲಿ ಕೆಂಪು ಚೆಂಡನ್ನು ತುಂಬಿ, ನಂತರ ಉಳಿದ 4ಪೆಟ್ಟಿಗೆಗಳನ್ನು ತುಂಬಬೇಕು. ಆದ್ದರಿಂದ ಕೆಂಪು ಚೆಂಡಿನಿಂದ ಮುಕ್ತಾಯವಾಗುವ ಜೋಡಣೆಗಳ ಸಂಖ್ಯೆ = 5ನೇ ಪೆಟ್ಟಿಗೆಯನ್ನು ತುಂಬಿಸುವಕ್ರಮ × ಉಳಿದ ಪೆಟ್ಟಿಗೆಗಳನ್ನು ತುಂಬಿಸುವ ಕ್ರಮ $= 1 \times {}_4P_4 = 24$ [ಏಕೆ?].

(c) ಗೆ ಸಂಬಂಧಿಸಿದಂತೆ : ಜೋಡಣೆಯು ಹಸಿರು ಚೆಂಡಿನಿಂದ ಪ್ರಾರಂಭವಾಗಿ ಕೆಂಪು ಚೆಂಡಿನಿಂದ ಮುಕ್ತಾಯಗೊಳ್ಳುವುದರಿಂದ, ಮೊದಲು ಒಂದನೇ ಮತ್ತು ಐದನೇ ಪೆಟ್ಟಿಗೆಗಳನ್ನು ಅನುಕ್ರಮವಾಗಿ ಹಸಿರು ಮತ್ತುಕೆಂಪು ಚೆಂಡುಗಳಿಂದ ತುಂಬಿ ನಂತರ ಉಳಿದ 3 ಪೆಟ್ಟಿಗೆಗಳನ್ನು ಉಳಿದ 3 ಚೆಂಡಿನಿಂದ ಪ್ರತಿಸಾರಿ ತುಂಬಿದಾಗಲೂ, ಬೇಕಾದ ಒಂದು ಜೋಡಣೆಯು ದೊರೆಯುತ್ತದೆ. ಆದ್ದರಿಂದ ಒಟ್ಟು ಜೋಡಣೆಗಳ ಸಂಖ್ಯೆ $= 1 \times 1 \times {}_3P_3 = 6$.

(d) ಗೆ ಸಂಬಂಧಿಸಿದಂತೆ : ಈಗ ಕಪ್ಪು ಮತ್ತು ಕೆಂಪು ಚೆಂಡುಗಳು ಜೊತೆಯಾಗಿ ಬರಬೇಕಾಗಿರುವುದರಿಂದ, ಅವೆರಡನ್ನು ಒಂದು ಚೆಂಡೆಂದು ಭಾವಿಸೋಣ. ವಾಸ್ತವವಾಗಿ 5 ಚೆಂಡುಗಳಿದ್ದರೂ 4 ಚೆಂಡುಗಳೆಂದು ತಿಳಿದು ಎಲ್ಲಾ ಚೆಂಡುಗಳನ್ನು ಅಳವಡಿಸುವುದರಿಂದ ಕೆಂಪು ಮತ್ತು ಕಪ್ಪು ಚೆಂಡುಗಳು ಜೊತೆಯಾಗಿ ಬರುವಂತಹ $|_4P_4 = 4.3.2.1 = 24$ ಕ್ರಮಯೋಜನೆಗಳು ದೊರಕುತ್ತವೆ. ಇವುಗಳ ಪೈಕಿ ಯಾವುದೇ ಒಂದು ಕ್ರಮಯೋಜನೆಯಲ್ಲಿ ಕೆಂಪು ಮತ್ತು ಕಪ್ಪು ಚೆಂಡುಗಳ ಜೊತೆ ಮುರಿಯದಂತೆ, ಅವುಗಳನ್ನು $|_2P_2 = 2$ ವಿಧಗಳಲ್ಲಿ ಅಳವಡಿಸಬಹುದು. ಆದ್ದರಿಂದ ಕೆಂಪು ಮತ್ತು ಕಪ್ಪು ಚೆಂಡುಗಳು ಜೊತೆಯಾಗಿ ಬರುವ ಒಟ್ಟು ವಿವಿಧ ಜೋಡಣೆಗಳ ಸಂಖ್ಯೆ $= 24 \times 2 = 48$.

11.10 ಉದಾ : 1,2,3 ಮತ್ತು 4 ಎಂಬ ಅಂಕೆಗಳನ್ನು ಕೊಟ್ಟಿದೆ. ಈ ಅಂಕೆಗಳನ್ನು ಉಪಯೋಗಿಸಿ ಪುನರಾವರ್ತನೆ ಕ್ರಮಬದ್ಧವಿರುವಾಗ,

(i) ಒಂದು ಅಂಕೆಯ ಎಷ್ಟು ವಿವಿಧಸಂಖ್ಯೆಗಳನ್ನು ರಚಿಸಬಹುದು?
(ii) ಎರಡು ಅಂಕೆಗಳ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಬಹುದು?
(iii) ಮೂರು ಅಂಕೆಗಳ ಎಷ್ಟು ವಿವಿಧಸಂಖ್ಯೆಗಳನ್ನು ರಚಿಸಬಹುದು?
(iv) ನಾಲ್ಕು ಅಂಕೆಗಳ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಬಹುದು?
(v) ಮೇಲೆ (iii) ರಚಿಸಬಲ್ಲ ಎಲ್ಲಾ ಸಂಖ್ಯೆಗಳ ಮೊತ್ತವೆಷ್ಟು ?
(vi) 4321 ಕ್ಕಿಂತ ಕಡಮೆಯಿರುವ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಬಹುದು? ಎಂಬ ಸಮಸ್ಯೆಯನ್ನು ಬಿಡಿಸೋಣ

ಉತ್ತರ : (i) 4 ಸಂಖ್ಯೆಗಳನ್ನು ರಚಿಸಬಹುದು. ಅವು 1, 2, 3 ಮತ್ತು 4 ಎಂಬುವುದು ಸುಲಭವಾಗಿ ಗೊತ್ತಾಗುತ್ತದೆ.

(ii) ಚಿತ್ರ: 11.5.1 ರಲ್ಲಿ ಕೊಟ್ಟಿರುವ ಪೆಟ್ಟಿಗೆಗಳನ್ನು ದತ್ತ ಸಂಖ್ಯೆಗಳಿಂದ ಎಷ್ಟು ವಿಧಗಳಲ್ಲಿ ತುಂಬಬಹುದು ಎಂಬ ಸಮಸ್ಯೆಯನ್ನು ಬಿಡಿಸೋಣ. ಒಂದನೇ ಪೆಟ್ಟಿಗೆಯನ್ನು ದತ್ತ 4 ಸಂಖ್ಯೆಗಳ ಪೈಕಿ ಯಾವುದೇ ಒಂದು ಸಂಖ್ಯೆಯಿಂದ ತುಂಬಬಹುದು. ಅಂದರೆ, 4 ವಿಧಗಳಲ್ಲಿ ತುಂಬಬಹುದು ಹೀಗೆ ಒಂದನೇ ಪೆಟ್ಟಿಗೆಯನ್ನು ಯಾವುದೇ ಒಂದು ವಿಧದಲ್ಲಿ ತುಂಬಿದನಂತರ ಎರಡನೇ ಪೆಟ್ಟಿಗೆಯನ್ನು ಸಹಾ 4 ವಿಧಗಳಲ್ಲಿ ತುಂಬಬಹುದು; ಏಕೆಂದರೆ ಯಾವುದೇ ಒಂದು ಅಂಕೆಯಲ್ಲಿ ಏಕಕಾಲಿಕ್ಕೆ ಎಲ್ಲಾ ಪೆಟ್ಟಿಗೆಗಳಲ್ಲೂ ಬರಬಹುದು. ಆದ್ದರಿಂದ, ಎರಡು ಪೆಟ್ಟಿಗೆಗಳನ್ನು ಒಟ್ಟಿಗೆ $4 \times 4 = 4^2$

ವಿವಿಧ ವಿಧಗಳಲ್ಲಿ ತುಂಬಬಹುದು. ಪಶ್ಚಾತ್, ದತ್ತ ಅಂಕೆಗಳಿಂದ 2 ಅಂಕೆಗಳುಳ್ಳ 4^2 ವಿವಿಧ ಸಂಖ್ಯೆಗಳನ್ನು ರಚಿಸಬಹುದು.

(iii) ಚಿತ್ರ : 11.10.1 ರಲ್ಲಿ ಕೊಟ್ಟಿರುವ 3 ಪೆಟ್ಟಿಗೆಗಳನ್ನು ಮೇಲಿನ ವಾದಸರಣಿಯನ್ನು 3ನೆಯ ಪೆಟ್ಟಿಗೆಗೂ ಮುಂದುವರಿಸುವುದರಿಂದ $4\times4\times4=4^3$

1	2	3

ಚಿತ್ರ 11.10.1

ವಿಧಗಳಲ್ಲಿ ದತ್ತ ಅಂಕಗಳಿಂದ ತುಂಬಬಹುದು ಎಂಬುದು ಸುಲಭವಾಗಿ ಗೊತ್ತಾಗುತ್ತದೆ. ಆದ್ದರಿಂದ ಮೂರು ಅಂಕೆಗಳ 4^3 ಸಂಖ್ಯೆಗಳನ್ನು ರಚಿಸಬಹುದು.

(iv) ಮೇಲಿನ ವಾದಸರಣಿಯ ಅವಲೋಕನೆಯಿಂದ, 4 ಅಂಕೆಗಳುಳ್ಳ $4\times4\times4\times4=4^4$ ವಿವಿಧ ಸಂಖ್ಯೆಗಳನ್ನು ರಚಿಸಬಹುದೆಂಬುದು ಸುಲಭವಾಗಿ ಗೊತ್ತಾಗುತ್ತದೆ.

(v) ಮೂರು ಅಂಕೆಗಳ 64 ಸಂಖ್ಯೆಗಳನ್ನು ರಚಿಸಬಹುದೆಂಬುದನ್ನು ಈಗಲೇ ಕಂಡಿದ್ದೇವೆ. ಈ 64 ಸಂಖ್ಯೆಗಳಲ್ಲಿ ಏಕಸ್ಥಾನದಲ್ಲಿ 1 ಇರುವ ಎಷ್ಟು ಸಂಖ್ಯೆಗಳಿವೆಯೆಂಬುದನ್ನು ಪರಿಶೀಲಿಸೋಣ. ಚಿತ್ರ : 11.10.1 ರಲ್ಲಿ 1ನೇ ಪೆಟ್ಟಿಗೆಯಲ್ಲಿ 1ನ್ನು ತುಂಬಿ, ಅನಂತರ 2ನೇ ಪೆಟ್ಟಿಗೆಯನ್ನು 4 ವಿಧಗಳಲ್ಲಿ ತುಂಬಬಹುದು ; 2ನೆಯ ಪೆಟ್ಟಿಗೆಯನ್ನು ಈ 4 ವಿಧಗಳ ಪೈಕಿ ಯಾವುದೇ ಒಂದು ವಿಧದಲ್ಲಿ ತುಂಬಿದನಂತರ, 3ನೆಯ ಪೆಟ್ಟಿಗೆಯನ್ನು ಮತ್ತೆ 4 ವಿಧಗಳಲ್ಲಿ ತುಂಬಬಹುದು. ಆದ್ದರಿಂದ ಏಕಸ್ಥಾನದಲ್ಲಿ 1 ಇರುವ $1\times4\times4=16$ ಸಂಖ್ಯೆಗಳಿರುತ್ತವೆಯೆಂದಾಯಿತು. ಅಥವಾ 64 ಸಂಖ್ಯೆಗಳ ಪೈಕಿ, 16 ಸಂಖ್ಯೆಗಳು ಏಕಸ್ಥಾನದಲ್ಲಿ 1ನ್ನು ಹೊಂದಿರುತ್ತವೆ. ಇದೇ ರೀತಿ 2, 3, 4 ಅಂಕೆಗಳಲ್ಲಿ ಪ್ರತಿಯೊಂದು ಅಂಕೆಯೂ ಏಕಸ್ಥಾನದಲ್ಲಿ 16 ವಿವಿಧ ಸಂಖ್ಯೆಗಳಲ್ಲಿ ಬರುತ್ತದೆಯೆಂದು ತೋರಿಸಬಹುದು. ಅಂದರೆ 64 ಸಂಖ್ಯೆಗಳ ಪೈಕಿ,

16 ಸಂಖ್ಯೆಗಳ ಏಕಸ್ಥಾನದಲ್ಲಿ 1 ಬರುತ್ತದೆ;
16 —,,— 2 —,,—
16 —,,— 3 —,,—, ಮತ್ತು
16 —,,— 4 —,,— ಎಂದಾಯಿತು.

ಆದ್ದರಿಂದ ಏಕಸ್ಥಾನದಲ್ಲಿ ಬರುವ ಎಲ್ಲಾ ಅಂಕೆಗಳ ಮೊತ್ತ $= 16\times 1+16\times 2+16\times 3+16\times 4=160$ ಎಂದಾಯಿತು. ಇದೇ ರೀತಿ ದಶಕ ಮತ್ತು ಶತಕ ಸ್ಥಾನಗಳಲ್ಲಿ ಬರುವ ಎಲ್ಲಾ ಅಂಕೆಗಳ ಮೊತ್ತ ಅನುಕ್ರಮವಾಗಿ 160 ಮತ್ತು 160 ಎಂದು, ಮೇಲಿನ ವಾದಸರಣಿಯ ಪುನರಾವರ್ತನೆಯಿಂದ ತೋರಿಸಬಹುದು. ಆದ್ದರಿಂದ, ಬೇಕಾದ ಮೊತ್ತ $=160\times 10^2+160\times 10+160\times 10^0=17760$ ಎಂದಾಯಿತು. [ಏಕೆ? $324=3\times 10^2+2\times 10+4\times 10^0$ ಎಂಬುವದನ್ನು ಗಮನಿಸಿರಿ.]

(vi) ಈಗ 4321 ಕ್ಕಿಂತ ಕಡಮೆಯಿರುವ ಎಷ್ಟು ನಾಲ್ಕು ಅಂಕೆಗಳ ಸಂಖ್ಯೆಗಳನ್ನು ರಚಿಸಬಹುದೆಂಬುದನ್ನು ಮೊದಲು ಪರಿಶೀಲಿಸೋಣ. ಇದಕ್ಕಾಗಿ ಕೆಳಗಿನ ಪಟ್ಟಿಯನ್ನು ರಚಿಸೋಣ.

	ಸಾವಿರ ಸ್ಥಾನ	ಶತಕ ಸ್ಥಾನ	ದಶಕ ಸ್ಥಾನ	ಏಕ ಸ್ಥಾನ
a) ತುಂಬಲು ಯೋಗ್ಯ ಅಂಕೆಗಳು	3,2,1 (3 ವಿಧಗಳು)	1,2,3,4 (4 ವಿಧಗಳು)	1,2,3,4 (4 ವಿಧಗಳು)	1,2,3,4 (4 ವಿಧಗಳು)
b) ತುಂಬಲು ಯೋಗ್ಯ ಅಂಕೆಗಳು	4 (1 ವಿಧ)	3 (1) ವಿಧ	1 (1 ವಿಧ)	1,2,3,4 (4 ವಿಧಗಳು)
c) ತುಂಬಲು ಯೋಗ್ಯ ಅಂಕೆಗಳು	4 (1 ವಿಧ)	2,1 (2 ವಿಧಗಳು)	1,2,3,4 (4 ವಿಧಗಳು)	1,2,3,4 (4 ವಿಧಗಳು)

(a) ನಲ್ಲಿ ಕೊಟ್ಟಿರುವ ವಿವರಗಳಿಂದ : $3\times 4\times 4\times 4=192$ ಸಂಖ್ಯೆಗಳು.

(b) —,,— : $1\times 1\times 1\times 4=4$ —,,—

(c) —,,— : $1\times 2\times 4\times 4=32$ —,,—

∴ 4321 ಕ್ಕಿಂತ ಕಡಮೆಯಿರುವ ನಾಲ್ಕು ಅಂಕೆಗಳ ಒಟ್ಟು ಸಂಖ್ಯೆಗಳು. } = 228

ಆದ್ದರಿಂದ, ಬೇಕಾದ ಸಂಖ್ಯೆ = 1 ಅಂಕೆಯುಳ್ಳ ಸಂಖ್ಯೆಗಳು + 2 ಅಂಕೆಗಳುಳ್ಳ ಸಂಖ್ಯೆಗಳು + 3 ಅಂಕೆಗಳುಳ್ಳ ಸಂಖ್ಯೆಗಳು + 4 ಅಂಕೆಗಳುಳ್ಳ ಸಂಖ್ಯೆಗಳು $4+4^2+4^3+228$

$= 312.$

11.11 **ಉದಾ :** 2,4,5,0,6 ಎಂಬ ಅಂಕೆಗಳನ್ನು ಕೊಟ್ಟಿದೆ. ಇವುಗಳನ್ನು ಉಪಯೋಗಿಸಿ 3 ಅಂಕೆಗಳ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಬಹುದು ? ಇವುಗಳಲ್ಲಿ (i) ಎಷ್ಟು ಸಮ ಸಂಖ್ಯೆಗಳಿವೆ ? (ii) ಎಷ್ಟು ಬೆಸ ಸಂಖ್ಯೆಗಳಿವೆ ? (iii) ಎಷ್ಟು ಸಂಖ್ಯೆಗಳು 425ಕ್ಕಿಂತ ಅಧಿಕವಾಗಿವೆ ? (iv) ಎಲ್ಲಾ ಸಂಖ್ಯೆಗಳ ಮೊತ್ತವೆಷ್ಟು ?

ಉತ್ತರ : ಈ ಲೆಕ್ಕವನ್ನು ಪುನರಾವರ್ತನೆ ನಿಷಿದ್ಧ ಎಂದು ಪರಿಗಣಿಸಿ ಬಿಡಿಸೋಣ. ಶತಕ ಸ್ಥಾನದಲ್ಲಿ ಸೊನ್ನೆ ಬರುವಂತಿಲ್ಲ. [ಏಕೆ?]. ಆದ್ದರಿಂದ ಕೆಳಗಿನಂತೆ ಪಟ್ಟಿಯನ್ನು ರಚಿಸೋಣ.

ಸೂಚನೆ : ಈ ಪಟ್ಟಿಯಲ್ಲಿ ಯಾವ ಸ್ಥಾನವನ್ನು ಮೊದಲು ತುಂಬಬೇಕೆಂಬುದನ್ನು 'I' ಎಂಬ ಸಂಕೇತ ಸೂಚಿಸುತ್ತದೆ. ಇದೇ ರೀತಿ 'II' ಎಂಬ ಸಂಕೇತ ಯಾವ ಸ್ಥಾನವನ್ನು ನಂತರ ತುಂಬಬೇಕೆಂಬುದನ್ನು ಸೂಚಿಸುತ್ತದೆ, ಇತ್ಯಾದಿ. * ಈ ಚಿಹ್ನೆಯು ಸೂಚಿಸುವ ಅಂಕೆಯನ್ನು ಆ ಸ್ಥಾನದಲ್ಲಿ ಭರ್ತಿಮಾಡಿದ ನಂತರ ಅಂಕೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಉಳಿದ ಸ್ಥಾನಗಳಲ್ಲಿ ತುಂಬಬಹುದಾದ ಯೋಗ್ಯ ಅಂಕೆಗಳನ್ನು ನಿರ್ಧರಿಸಲಾಗಿದೆ.

	ಶತಕ ಸ್ಥಾನ	ದಶಕ ಸ್ಥಾನ	ಏಕ ಸ್ಥಾನ
(a) ತುಂಬಲು ಯೋಗ್ಯ ಅಂಕೆಗಳು	*2,4,5,6 : (I)	*4,5,6,0 : (II)	5,6,0 : (III)

(b) (i)ಕ್ಕೆ ಸಂಬಂಧಿಸಿದಂತೆ	*4,6,5 : (II)	5,6,0 : (III)	*2,4,6 : (I)
	4,5,6 : (III)	*2,4,5,6 : (II)	*0 : (I)
(c) (ii) ಕ್ಕೆ ಸಂಬಂಧಿಸಿದಂತೆ	*2,4,6 : (II)	4,6,0 : (III)	*5 : (I)
(d) (iii) ಕ್ಕೆ ಸಂಬಂಧಿಸಿದಂತೆ	*4 ; (I)	*2 : (II)	6 ; (III)
	*4 : (I)	*5,6 : (II)	6,0,2 : (III)
	*6 : (I)	6,*0,2,4 : (II)	6,2,4 ; (III)

(a) **ಭಾಗದ ವಿವರಣೆ :** ಶೂನ್ಯವು ಶತಕ ಸ್ಥಾನದಲ್ಲಿ ಬರುವಂತಿಲ್ಲ. [ಏಕೆ ? ಬಂದರೆ ನಿಮಗೆ 3 ಅಂಕಗಳ ಒಂದು ಸಂಖ್ಯೆ ಸಿಕ್ಕುತ್ತದೆಯೆ ?] ಆದ್ದರಿಂದ ಈ ಸ್ಥಾನವನ್ನು ಮೊದಲು ಭರ್ತಿ ಮಾಡಿ, ಅನಂತರ ಉಳಿದ ಸ್ಥಾನಗಳನ್ನು ಭರ್ತಿಮಾಡಬೇಕು. ಈ ಸ್ಥಾನವನ್ನು ದತ್ತ ಅಂಕೆಗಳ ಪೈಕಿ 2, 4, 5, 6— ಇವುಗಳಲ್ಲಿ ಯಾವೊಂದರಿಂದಲಾದರೂ [2ರಿಂದ ಅಂಬೋಣ]— ಅಂದರೆ 4 ವಿಧಗಳಲ್ಲಿ ತುಂಬಬಹುದು. ಇದನ್ನು ತುಂಬಿದನಂತರ, ದಶಕ ಸ್ಥಾನವನ್ನು ಉಳಿದ 4, 5, 6, 0 ಸಂಖ್ಯೆಗಳಲ್ಲಿ ಯಾವೊಂದರಿಂದಲಾದರೂ [4ರಿಂದ ಅಂಬೋಣ]— ಅಂದರೆ 4 ವಿಧಗಳಲ್ಲಿ ತುಂಬಬಹುದು. ಮೊದಲ ಎರಡು ಸ್ಥಾನಗಳನ್ನು ಈ ರೀತಿ ತುಂಬಿದನಂತರ, ಏಕಸ್ಥಾನವನ್ನು ಉಳಿದ 5, 6, 0 — ಈ ಸಂಖ್ಯೆಗಳಿಂದ 3 ವಿಧಗಳಲ್ಲಿ ತುಂಬಬಹುದು. ಆದ್ದರಿಂದ 3 ಅಂಕೆಗಳ $4 \times 4 \times 3 = 48$ ವಿವಿಧ ಸಂಖ್ಯೆಗಳನ್ನು ರಚಿಸಬಹುದು.

(b) **ಭಾಗದ ವಿವರಣೆ :** ಈಗ ಸಂಖ್ಯೆಯ ಏಕಸ್ಥಾನದಲ್ಲಿ 2, 4, 6

ಅಥವಾ ಶೂನ್ಯ ಇರಬೇಕೆಂಬುದನ್ನು ಗಮನಿಸೋಣ [ಏಕೆ ? ಸಮರ್ಥಿಸಿರಿ]. ಆದ್ದರಿಂದ : $3 \times 3 \times 3 + 1 \times 4 \times 3 = 39$ ಸಮ ಸಂಖ್ಯೆಗಳನ್ನು ರಚಿಸಬಹುದು.

(c) **ಭಾಗದ ವಿವರಣೆ :** ಸಂಖ್ಯೆಯು ಏಕಸ್ಥಾನದಲ್ಲಿ 5 ಬಂದಾಗ ಮಾತ್ರ ಸಂಖ್ಯೆ ಬೆಸ ಸಂಖ್ಯೆಯಾಗುವುದರಿಂದ, ಏಕಸ್ಥಾನದಲ್ಲಿ 5ನ್ನು ತುಂಬಿದ ನಂತರ, ಶತಕ ಮತ್ತು ದಶಕ ಸ್ಥಾನಗಳನ್ನು ತುಂಬುತ್ತೇವೆ. ಆದ್ದರಿಂದ : $1 \times 3 \times 3 = 9$ ಬೆಸ ಸಂಖ್ಯೆಗಳನ್ನು ರಚಿಸಬಹುದು.

(d) **ಭಾಗದ ವಿವರಣೆ :** ಶತಕ ಸ್ಥಾನದಲ್ಲಿ 4 ಮತ್ತು ದಶಕ ಸ್ಥಾನದಲ್ಲಿ 2 ಬಂದಾಗ ಏಕಸ್ಥಾನದಲ್ಲಿ 6ರ ವಿನಃ ಬೇರೆ ಯಾವ ಅಂಕೆಯೂ ಬರುವಂತಿಲ್ಲ. [ಏಕೆ ? ಸಮರ್ಥಿಸಿರಿ], ಇತ್ಯಾದಿ. ಆದ್ದರಿಂದ 425ಕ್ಕಿಂತ ಅಧಿಕವಿರುವ $1 \times 1 \times 1 + 1 \times 2 \times 3 + 2 \times 4 \times 3 = 31$ ಸಂಖ್ಯೆಗಳನ್ನು ರಚಿಸಬಹುದು.

(iv) ಇದಕ್ಕಾಗಿ ಪ್ರತಿಯೊಂದು ಸ್ಥಾನದಲ್ಲಿ ಬರುವ ಎಲ್ಲಾ ಅಂಕೆಗಳ ಮೊತ್ತವನ್ನು ಬೇರೆ ಬೇರೆಯಾಗಿ ಕಂಡುಹಿಡಿಯೋಣ. ದಶಕ ಸ್ಥಾನದಲ್ಲಿ 5 ಎಂಬ ಅಂಕೆ ಯಾವುದೇ ಒಂದು ಸಂಖ್ಯೆಯಲ್ಲಿ ಬಂದರೆ, ಬೇಕಾದ ಮೊತ್ತಕ್ಕೆ ಈ ಅಂಕೆಯು ಕೊಡುಗೆ $5 \times 10 = 50$ ಎಂಬುದನ್ನು ಗಮನಿಸೋಣ. ಇದೇ ರೀತಿ ಶತಕ ಸ್ಥಾನದಲ್ಲಿ ಬರುವ 4 ಎಂಬ ಅಂಕೆಯು ಕೊಡುಗೆ $4 \times 10^2 = 400$ ಆಗುತ್ತದೆ.

(a) ಈಗ ಶತಕ ಸ್ಥಾನದಲ್ಲಿ 5 ಎಂಬ ಅಂಕೆಯು ಎಷ್ಟು ಸಂಖ್ಯೆಗಳಲ್ಲಿ ಬರುತ್ತದೆಂಬುದನ್ನು ಕಂಡುಹಿಡಿಯೋಣ. ಶತಕ ಸ್ಥಾನದಲ್ಲಿ 5 ಬಂದಾಗ, ಉಳಿದ ಸ್ಥಾನಗಳನ್ನು $4 \times 3 = 12$ ವಿಧಗಳಲ್ಲಿ ತುಂಬಬಹುದು. [ಏಕೆ? ಸಮರ್ಥಿಸಿರಿ]. ಆದ್ದರಿಂದ 12 ಸಂಖ್ಯೆಗಳ ಶತಕ ಸ್ಥಾನಗಳಲ್ಲಿ 5 ಬರುತ್ತದೆ. ಇದೇ ರೀತಿ 2, 4, 6 ಅಂಕೆಗಳಲ್ಲಿ ಪ್ರತಿಯೊಂದೂ 12 ಬೇರೆ ಬೇರೆ ಅಂಕೆಗಳಲ್ಲಿ ಶತಕ ಸ್ಥಾನದಲ್ಲಿ ಬರುತ್ತದೆಂಬುದನ್ನು ಕಂಡುಕೊಳ್ಳಬಹುದು. ಆದ್ದರಿಂದ ಶತಕ ಸ್ಥಾನದ ಮೊತ್ತ $= (5 \times 10^2 + 2 \times 10^2 + 4 \times 10^2 + 6 \times 10^2) \times 12 = 20400$.

(b) ಈಗ 2 ಎಂಬ ಅಂಕೆಯು ಏಕಸ್ಥಾನದಲ್ಲಿ ಎಷ್ಟು ವಿವಿಧ ಸಂಖ್ಯೆಗಳಲ್ಲಿ ಬರುತ್ತದೆಂಬುದನ್ನು ಪರಿಶೀಲಿಸೋಣ. ಇದಕ್ಕಾಗಿ, ಬೇರೆ ಬೇರೆ ಸ್ಥಾನಗಳಲ್ಲಿ

ಬರಬಹುದಾದ ಸಂಖ್ಯೆಗಳನ್ನು ಪಟ್ಟಿ ಮಾಡಿದರೆ ಅವು :– ಏಕ ; *2 : ಶತಕ : *4, 5, 6 : ದಶಕ : 5, 0, 6 ಆಗುತ್ತವೆ. ಆದ್ದರಿಂದ, $1 \times 3 \times 3 = 9$ ವಿವಿಧ ಸಂಖ್ಯೆಗಳು ಏಕಸ್ಥಾನದಲ್ಲಿ 2ನ್ನು ಹೊಂದಿರುತ್ತವೆ. ಇದೇ ರೀತಿ 4,5,6 ಎಂಬ ಅಂಕೆಗಳಲ್ಲಿ ಪ್ರತಿಯೊಂದೂ 9 ವಿವಿಧ ಸಂಖ್ಯೆಗಳ ಏಕಸ್ಥಾನದಲ್ಲಿ ಆವರ್ತಿಸುತ್ತವೆಂಬುದನ್ನು ತೋರಿಸಬಹುದು. ಅಂದರೆ $9+9+9+9=36$ ವಿವಿಧ ಸಂಖ್ಯೆಗಳ ಏಕಸ್ಥಾನದಲ್ಲಿ ಬರುವ ಅಂಕೆಗಳನ್ನು ಮಾತ್ರ ಗುರುತಿಸಿದಂತಾಯಿತು. ಉಳಿದ 12 [$=48-36$] ಸಂಖ್ಯೆಗಳ ಏಕಸ್ಥಾನದಲ್ಲಿ ಯಾವ ಅಂಕೆಯು ಬರುತ್ತವೆ ? ಅದು ಸೊನ್ನೆಕ್ಕಿಂತ ಭಿನ್ನವಾಗಿರಲು ಸಾಧ್ಯವಿಲ್ಲ. [ಏಕೆ ? ಸಮರ್ಥಿಸಿರಿ]. ಆದ್ದರಿಂದ, ಏಕಸ್ಥಾನದ ಎಲ್ಲಾ ಅಂಕೆಗಳ ಮೊತ್ತ $=(2+4+5+6) \times 9 = 153$ ಎಂದಾಯಿತು.

(c) ದಶಕ ಸ್ಥಾನದಲ್ಲಿ ಬರುವ ಎಲ್ಲಾ ಅಂಕೆಗಳ ಮೊತ್ತ $=(2 \times 10 + 4 \times 10 + 5 \times 10 + 6 \times 10) \times 9 = 1530$ ಎಂದು, ಮೇಲಿನ ವಾದಸರಣಿಯಲ್ಲಿ 'ಏಕ' ಎಂದಿರುವ ಕಡೆಗಳಲ್ಲೆಲ್ಲಾ ದಶಕ ಎಂದು ಓದಿಕೊಳ್ಳುವುದರಿಂದ ಗೊತ್ತಾಗುತ್ತದೆ. ಆದ್ದರಿಂದ ಬೇಕಾದ ಮೊತ್ತ $= 20400 + 153 + 1530 = 220583$.

11.12 **ಉದಾ :** 1, 2, 2, 3, 5, ಈ ಅಂಕೆಗಳನ್ನು ಪ್ರಯೋಗಿಸಿ 5 ಅಂಕೆಗಳಿರುವ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಲು ಸಾಧ್ಯ ? ಎಂಬ ಸಮಸ್ಯೆಯನ್ನು ಬಿಡಿಸೋಣ.

ದತ್ತ ಸಂಖ್ಯೆಗಳನ್ನು ಪ್ರಯೋಗಿಸಿ ಪಡೆದ 13252 ಎಂಬ ಒಂದು ಕ್ರಮಯೋಜನೆಯನ್ನು ಪರಿಶೀಲಿಸೋಣ. ಈ ಸಂಖ್ಯೆಯಲ್ಲಿ ಏಕ ಮತ್ತು ಶತಕಸ್ಥಾನಗಳಲ್ಲಿ ಬರುವ ಅಂಕೆಗಳನ್ನು [2] ಪರಸ್ಪರ ವಿನಿಮಯ ಮಾಡಿದರೆ, ಮತ್ತೆ 13252 ಎಂಬ ಸಂಖ್ಯೆಯೇ ಬರುತ್ತದೆ [ಏಕೆ ?]. ಇದು ನಾವು ಮೊದಲು ಪರಿಶೀಲನೆಗೆ ತೆಗೆದುಕೊಂಡ ಕ್ರಮಯೋಜನೆಯೇ ಆಗಿದೆ. ಆದ್ದರಿಂದ ನಮಗೆ ಬೇಕಾಗಿರುವ ಕ್ರಮಯೋಜನೆಗಳ ಸಂಖ್ಯೆ P ಆದರೆ, ಅದು 5 ವಿವಿಧ ಅಂಕೆಗಳಿಂದ ಒಂದು ಸಲಕ್ಕೆ ಎಲ್ಲಾ ಅಂಕೆಗಳನ್ನು ಆರಿಸಿ ಅಳವಡಿಸಿದಾಗ ಬರುವ ಕ್ರಮಯೋಜನೆಗಳ ಸಂಖ್ಯೆ ಯಾದ $5P_5$ ಗಿಂತ ಕಡಮೆಯಾಗಿರಲೇಬೇಕು. ಈಗ 13252 ಎಂಬ ಸಂಖ್ಯೆಯಲ್ಲಿ ಬರುವ 1, 3, 5 ಎಂಬ ಅಂಕೆಗಳನ್ನು ಸ್ಥಿರವಾಗಿಟ್ಟು, ಉಳಿದ 2, 2 ಅಂಕೆಗಳ ಬದಲು ಬೇರೆ ಬೇರೆ ಅಂಕೆಗಳನ್ನು, ಉದಾಹರಣೆಗೆ a, b ಗಳನ್ನು ಆದೇಶಿಸಿ ಅಳವಡಿಸಿದರೆ 13a 5b

* 11.11 ಉದಾ : ದಲ್ಲಿ ಬರುವ ಸೂಚನೆಯನ್ನು ನೋಡಿರಿ.

ಮತ್ತು 13b 5a ಎಂಬ $_2P_2$ ವಿವಿಧ ಕ್ರಮಯೋಜನೆಗಳು ದೊರೆಕುತ್ತವೆ. ಆದ್ದರಿಂದ P ಕ್ರಮಯೋಜನೆಗಳಲ್ಲಿನ ಪ್ರತಿಯೊಂದರಲ್ಲಿ ಬರುವ 2, 2 ಎಂಬ ಅಂಕೆಗಳನ್ನು ಬೇರೆ ಬೇರೆಯೆಂದು ಪರಿಗಣಿಸಿ ಅಳವಡಿಸಿದರೆ, ಎಲ್ಲ ಅಂಕೆಗಳೂ ಭಿನ್ನವಿರುವ 5 ಅಂಕೆಗಳ $P \times {_2P_2} = P \times (2!)$ ವಿವಿಧ ಸಂಖ್ಯೆಗಳನ್ನು ಪಡೆಯಬಹುದು. ಅಂದರೆ $_5P_5 = P \times \lfloor 2$ ಎಂದಾಗುತ್ತದೆ.

$$\therefore P = \frac{5!}{2!}$$

ಇದೇ ರೀತಿ ಕೆಳಗಿನ ಪ್ರಮೇಯವನ್ನು ಸಾಧಿಸಬಹುದು.

11.13 ಪ್ರಮೇಯ : n ವಸ್ತುಗಳ ಪೈಕಿ p ವಸ್ತುಗಳು 1ನೆಯ ರೀತಿಯವು, q ವಸ್ತುಗಳು 2ನೆಯ ರೀತಿಯವು ಮತ್ತು r ವಸ್ತುಗಳು 3ನೆಯ ರೀತಿಯವು,.... ...., ಮತ್ತು ಉಳಿದ ವಸ್ತುಗಳು ಭಿನ್ನವಿರುವಾಗ್ಯ ಎಲ್ಲಾ ವಸ್ತುಗಳನ್ನು ಒಂದು ಸಲಕ್ಕೆ ಅರಿಸಿದ ಕ್ರಮಯೋಜನೆಗಳ ಸಂಖ್ಯೆ P ಆದರೆ,

$$P = \frac{n!}{p!\,q!\,r!} \qquad (11\cdot13\cdot1)$$

ಉದಾ : AGRICULTURE ಎಂಬ ಪದದ ಎಲ್ಲಾ ಅಕ್ಷರಗಳನ್ನು ಏಕಕಾಲಕ್ಕೆ ಆರಿಸಿದ ಕ್ರಮಯೋಜನೆಗಳ ಸಂಖ್ಯೆಯನ್ನು ಕಂಡುಹಿಡಿಯೋಣ.

ವತ್ತ ಪದದಲ್ಲಿ 11 ಅಕ್ಷರಗಳಿವೆ. ಇವುಗಳ ಪೈಕಿ ಪುನರಾವರ್ತಿಸುವ ಅಕ್ಷರಗಳೆಂದರೆ : R, ಎರಡುಸಾರಿ ; U, ಎರಡುಸಾರಿ : ಉಳಿದವು ಭಿನ್ನ. ಆದ್ದರಿಂದ ಬೇಕಾದ ಕ್ರಮಯೋಜನೆಗಳ ಸಂಖ್ಯೆ : $\lfloor 11 / \lfloor 2 \times \lfloor 2$.

11.13 **ವರ್ತುಳೀಯ ಕ್ರಮಯೋಜನೆಗಳು :** ಒಂದು ದುಂಡು ಮೇಜಿನ ಸುತ್ತಲೂ 6 ಕುರ್ಚಿಗಳಿವೆ ; ಈ ಕುರ್ಚಿಗಳಲ್ಲಿ 6 ಹುಡುಗರನ್ನು ಎಷ್ಟು ವಿವಿಧ ರೀತಿಯಲ್ಲಿ ಕೂಡಿಸಬಹುದು ಎಂಬ ಸಮಸ್ಯೆಯನ್ನು ಈಗ ಬಿಡಿಸೋಣ. ಯಾವುದೇ ಒಬ್ಬ ಹುಡುಗನನ್ನು, ಒಂದು ಕುರ್ಚಿಯಲ್ಲಿ ಸ್ಥಿರವಾಗಿ ಕೂಡಿಸಿ, ಉಳಿದ ಹುಡುಗರನ್ನು ಉಳಿದ 5 ಕುರ್ಚಿಗಳಲ್ಲಿ $5P_5 = 5!$ ವಿವಿಧ ರೀತಿಗಳಲ್ಲಿ ಕೂಡಿಸಬಹುದು. ಈ 5!

ಏರ್ಪಾಟುಗಳಲ್ಲದೇ, ಬೇರೆ ಯಾವ ಏರ್ಪಾಟು ಸಾಧ್ಯವಾಗುವುದಿಲ್ಲ– [ಏಕೆಂದರೆ, ದುಂಡು ಮೇಜಿನ ಸುತ್ತ ಕುರ್ಚಿಗಳು ಇರುವುದರಿಂದ, ಅವುಗಳಲ್ಲಿ ಮೊದಲಿನ ಕುರ್ಚಿ ಯಾವುದು? ಕೊನೆಯ ಕುರ್ಚಿ ಯಾವುದು? ಎಂಬ ಪ್ರಶ್ನೆ ಅಸಮಂಜಸ].

ಸಾಮಾನ್ಯವಾಗಿ n ಬೇರೆ ವಸ್ತುಗಳನ್ನು ಒಂದು ವೃತ್ತಾಕಾರದಲ್ಲಿ $|\underline{n-1}$ ವಿವಿಧ ರೀತಿಗಳಲ್ಲಿ ಅಳವಡಿಸಬಹುದು. ಅಂದರೆ n ವಿವಿಧ ವಸ್ತುಗಳ ವರ್ತುಳೀಯ ಕ್ರಮಯೋಜನೆಗಳ ಒಟ್ಟು ಸಂಖ್ಯೆ $|\underline{n-1}$.

ಈ $|\underline{n-1}$ ಕ್ರಮಯೋಜನೆಗಳಲ್ಲಿ ಬರುವ ಪ್ರದಕ್ಷಿಣೆ ಮತ್ತು ಅಪ್ರದಕ್ಷಿಣೆ ಜೋಡಣೆಗಳನ್ನು ಬೇರೆ ಬೇರೆಯೆಂದು ಪರಿಗಣಿಸಿದ್ದೇವೆ. ಪ್ರದಕ್ಷಿಣೆ ಮತ್ತು ಅಪ್ರದಕ್ಷಿಣೆಗಳ ಜೋಡಣೆಗಳು ಭಿನ್ನವೆಂದು ಪರಿಗಣಿಸದಿದ್ದಾಗ r ವಿವಿಧ ವಸ್ತುಗಳ ವರ್ತುಳೀಯ ಕ್ರಮಯೋಜನೆಗಳ ಒಟ್ಟು ಸಂಖ್ಯೆ $\frac{1}{2}|\underline{n-1}$ ಆಗುತ್ತದೆ [ಏಕೆ]. ಆದ್ದರಿಂದ 10 ಬೇರೆ ಬೇರೆ ಮಣಿಗಳಿಂದ $\frac{1}{2}|\underline{10-1} = \frac{1}{2} \times |\underline{9}$ ವಿವಿಧ ಹಾರಗಳನ್ನು ಮಾಡಬಹುದು.

ಅಭ್ಯಾಸ 11.1

1. (i) ಇವುಗಳಲ್ಲಿ ಪ್ರತಿಯೊಂದರ ಬೆಲೆಯನ್ನು ಕಂಡುಹಿಡಿಯಿರಿ:

$_{12}P_5$, $_6P_2$, $_{10}P_1$, $_{60}P_5$, $_{25}P_6$.

(ii) ಇದರ ಬೆಲೆಯನ್ನು ಕಂಡುಹಿಡಿಯಿರಿ: $_4P_1 + {}_4P_2 + {}_4P_3 + {}_4P_4$

2. 5, 4, 2, 7, 1 ಎಂಬ ಅಂಕೆಗಳನ್ನು ಪ್ರಯೋಗಿಸಿ, ಪುನರಾವರ್ತನೆ ಕ್ರಮ ಬಿಟ್ಟಿರುವಾಗ 4 ಅಂಕೆಗಳಿರುವ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಬಲ್ಲಿರಿ? ಹೀಗೆ ರಚಿಸಿದ ಸಂಖ್ಯೆಗಳ ಪೈಕಿ, ನಾಲ್ಕು ಅಂಕೆಗಳೂ ಭಿನ್ನವಾಗಿರುವ (i) ಎಷ್ಟು ಸಂಖ್ಯೆಗಳಿವೆ? (ii) ಎಷ್ಟು ಸಮಸಂಖ್ಯೆಗಳಿವೆ? (iii) ಎಷ್ಟು ಬೆಸಸಂಖ್ಯೆಗಳಿವೆ? (iv) ಎಷ್ಟು ಸಂಖ್ಯೆಗಳು 5ನ್ನು ಅಪವರ್ತನವಾಗಿ ಪಡೆದಿವೆ? (v) ಎಷ್ಟು ಸಂಖ್ಯೆಗಳು 421ಕ್ಕಿಂತ ಕಡಮೆ ಇವೆ? (vi) ಎಷ್ಟು ಸಂಖ್ಯೆಗಳು 421ಕ್ಕಿಂತ ಅಧಿಕ ಇವೆ? (vii) ಎಲ್ಲಾ ಸಂಖ್ಯೆಗಳ ಮೊತ್ತವೆಷ್ಟು?

3. ಮೇಲಿನ ಲೆಕ್ಕವನ್ನು 7ರ ಬದಲು 0ಯನ್ನು ತೆಗೆದುಕೊಂಡು–ಅಂದರೆ 5, 4, 2, 0, 1 ಅಂಕೆಗಳನ್ನು ಪ್ರಯೋಗಿಸಿ ಬಿಡಿಸಿ.

4. FATIGUE ಪದದ ಎಲ್ಲಾ ಅಕ್ಷರಗಳನ್ನು ಏಕಕಾಲಕ್ಕೆ ಆರಿಸಿದಂತಹ ಎಷ್ಟು ಕ್ರಮಯೋಜನೆಗಳಿವೆ ? ಇದರಲ್ಲಿ F ಅಕ್ಷರದಿಂದ ಪ್ರಾರಂಭವಾಗುವ ಕ್ರಮಯೋಜನೆಗಳು ಎಷ್ಟಿವೆ ? E ಅಕ್ಷರದಿಂದ ಮುಕ್ತಾಯವಾಗುವ ಕ್ರಮಯೋಜನೆಗಳ ಸಂಖ್ಯೆಯೆಷ್ಟು ? I ಅಕ್ಷರದಿಂದ ಪ್ರಾರಂಭವಾಗಿ T ಅಕ್ಷರದಿಂದ ಮುಕ್ತಾಯವಾಗುವ ಕ್ರಮಯೋಜನೆಗಳೆಷ್ಟು ?

5. 3, 2, 7, 9, 8 ಎಂಬ ಅಂಕೆಗಳನ್ನು ಉಪಯೋಗಿಸಿ 4 ಅಂಕೆಗಳ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಬಲ್ಲಿರಿ ? ಹೀಗೆ ರಚಿಸಿದ ಎಷ್ಟು ಸಂಖ್ಯೆಗಳಲ್ಲಿ 3 ಏಕಸ್ಥಾನದಲ್ಲಿ ಬರುತ್ತದೆ ? ಇದರಿಂದ, ಮೇಲಿನಂತೆ ರಚಿಸಿದ ಎಲ್ಲಾ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಿರಿ.

6. ಮೇಲಿನ ಲೆಕ್ಕವನ್ನು 9ರ ಬದಲು ಶೂನ್ಯವನ್ನು ತೆಗೆದುಕೊಂಡು ಬಿಡಿಸಿರಿ.

7. ಸಾಲಾಗಿ 6 ಆಸನಗಳಿವೆ. ಒಬ್ಬ ಹುಡುಗ ಮತ್ತು 5 ಹುಡುಗಿಯರನ್ನು ಕೂಡಿಸಬೇಕಾಗಿದೆ. ಈ ಹುಡುಗಿಯರ ಪೈಕಿ ಒಬ್ಬ ಗೊತ್ತಾದ ಹುಡುಗಿಯು ತಾನು ಹುಡುಗನ ಪಕ್ಕದಲ್ಲೇ ಕುಳಿತುಕೊಳ್ಳಬೇಕೆಂದು ಪಟ್ಟು ಹಿಡಿದರೆ, ಅವರನ್ನು ಎಷ್ಟು ವಿವಿಧ ರೀತಿಗಳಲ್ಲಿ ಕೂಡಿಸಬಲ್ಲಿರಿ ?

8. ಒಂದು ದುಂಡು ಮೇಜಿನ ಸುತ್ತ 10 ಕುರ್ಚಿಗಳಿವೆ. ಈ ಕುರ್ಚಿಗಳಲ್ಲಿ 10 ಹುಡುಗರನ್ನು ಎಷ್ಟು ಬೇರೆ ಬೇರೆ ವಿಧಗಳಲ್ಲಿ ಕೂಡಿಸಬಲ್ಲಿರಿ ? ಇವರ ಪೈಕಿ ಇಬ್ಬರು ಹುಡುಗರು ಯಾವಾಗಲೂ ಜೊತೆಯಾಗಿ ಕುಳಿತುಕೊಳ್ಳಬೇಕೆಂದು ಹಟ ಹಿಡಿದರೆ, ಆಗ ದುಂಡು ಮೇಜಿನ ಸುತ್ತ ಎಲ್ಲಾ ಹುಡುಗರನ್ನು ಎಷ್ಟು ವಿಧಗಳಲ್ಲಿ ಕೂಡಿಸಬಲ್ಲಿರಿ ?

9. 2, 5, 1, 1, 1, 4 ಅಂಕಗಳನ್ನು ಉಪಯೋಗಿಸಿ 6 ಅಂಕೆಗಳುಳ್ಳ ಎಷ್ಟು ವಿವಿಧ ಸಂಖ್ಯೆಗಳನ್ನು ರಚಿಸಬಲ್ಲಿರಿ ?

10. EXCELLENT ಎಂಬ ಪದದ ಅಕ್ಷರಗಳೆಲ್ಲವನ್ನೂ ಒಂದು ಸಲಕ್ಕೆ ಆರಿಸಿ ಎಷ್ಟು ವಿವಿಧ ಕ್ರಮಯೋಜನೆಗಳನ್ನು ರಚಿಸಬಲ್ಲಿರಿ ?

11. ಆಂಗ್ಲ ವರ್ಣಮಾಲೆಯ ಯಾವುದೇ 3 ಅಕ್ಷರಗಳನ್ನು ಮೊದಲ 3 ಸ್ಥಾನಗಳಿಗೆ ಆರಿಸಿ, ಅನಂತರದ 4 ಸ್ಥಾನಗಳಿಗೆ 4 ಅಂಕೆಗಳನ್ನು [ಶೂನ್ಯವನ್ನು ಬಿಟ್ಟು] ಆರಿಸಿ ಎಷ್ಟು ಲೈಸೆನ್ಸ್ ಪಟ್ಟಿಗಳನ್ನು ರಚಿಸಬಲ್ಲಿರಿ ?

12. ಸಾಲಾಗಿ ಇಟ್ಟಿರುವ 10 ಆಸನಗಳಲ್ಲಿ 10 ಜನರನ್ನು ಕೂಡಿಸಬೇಕಾಗಿದೆ. ಇವರ ಪೈಕಿ 3 ಜನರು ಯಾವಾಗಲೂ ಒಟ್ಟಾಗಿ ಕುಳಿತುಕೊಳ್ಳಬೇಕೆಂದು ಪಟ್ಟು ಹಿಡಿದರೆ, ಎಲ್ಲರನ್ನು ಎಷ್ಟು ವಿವಿಧ ರೀತಿಗಳಲ್ಲಿ ಕೂಡಿಸಬಲ್ಲಿರಿ ?

13. ಮೇಲೆ 11ನೇ ಲೆಕ್ಕದಲ್ಲಿ ಕೊಟ್ಟಿರುವ ಅಕ್ಷರ ಮತ್ತು ಅಂಕೆಗಳಲ್ಲಿ ಪುನರಾವರ್ತನೆ ಕ್ರಮಬದ್ಧ ಎಂದು ಭಾವಿಸಿ, ಲೆಕ್ಕವನ್ನು ಬಿಡಿಸಿರಿ.

14. ಮುಂದೆ ಕೊಟ್ಟಿರುವ ಪದಗಳಲ್ಲಿ, ಎಲ್ಲಾ ಅಕ್ಷರಗಳನ್ನು ಏಕಕಾಲಕ್ಕೆ ಆರಿಸಿ, ಪ್ರತಿಯೊಂದು ಪದದಿಂದ ಎಷ್ಟು ವಿವಿಧ ಕ್ರಮಯೋಜನೆಗಳನ್ನು ಮಾಡಬಹುದೆಂಬುದನ್ನು ಕಂಡುಹಿಡಿಯಿರಿ, (i) BEAUTIFUL (ii) MATHEMATICS (iii) COLLEGE.

15. ಒಬ್ಬ ವಿದ್ಯಾರ್ಥಿಯು ತನ್ನ ಬಳಿಯಿರುವ ಪುಸ್ತಕಗಳನ್ನು ಸಾಲಾಗಿ ಇಡಬಯಸುತ್ತಾನೆ. ಅವನ ಬಳಿ ರಸಾಯನಶಾಸ್ತ್ರ, ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರದ ಪುಸ್ತಕಗಳು ಅನುಕ್ರಮವಾಗಿ 3, 5 ಮತ್ತು 4 ಇದ್ದರೆ, ಗಣಿತಶಾಸ್ತ್ರದ ಪುಸ್ತಕಗಳು ಒಟ್ಟಾಗಿ ಬರುವಂತೆ ಎಷ್ಟು ವಿವಿಧ ಜೋಡಣೆಗಳು ಸಾಧ್ಯ.

ವಿಕಲ್ಪಗಳು

11.14 **ವ್ಯಾಖ್ಯೆ :** ದತ್ತವಸ್ತುಗಳ ಕ್ರಮಯೋಜನೆಯನ್ನು ರಚಿಸುವಾಗ, ಪ್ರತಿಯೊಂದು ವಸ್ತುವು 'ಯಾವ ಸ್ಥಾನದಲ್ಲಿ ಬರುತ್ತದೆ ?' ಎಂಬುದಕ್ಕೆ ವಿಶೇಷ ಗಮನ ಕೊಡುತ್ತೇವೆ. ಕ್ರಮಯೋಜನೆಯೊಂದರಲ್ಲಿ ಬರುವ ಭಿನ್ನವಾದ ಯಾವುದೇ ಎರಡು ವಸ್ತುಗಳನ್ನು ಪರಸ್ಪರ ವಿನಿಮಯ ಮಾಡಿದಾಗ, ದತ್ತ ಕ್ರಮಯೋಜನೆಗಿಂತ ಭಿನ್ನವಾದ ಕ್ರಮಯೋಜನೆಯೊಂದು ದೊರೆಯುತ್ತದೆಂಬುದನ್ನು ಆಗಲೇ ಕಂಡಿದ್ದೇವೆ. [11.5 ಟೀಕೆ ನೋಡಿರಿ]. **ವಸ್ತುಗಳ ಸ್ಥಾನಕ್ಕೆ ಗಮನಕೊಡದೆ ಆರಿಸುವ ಕ್ರಮಕ್ಕೆ ವಿಕಲ್ಪ ಎಂದು ಹೆಸರು.**

ಉದಾಹರಣೆಗೆ, a, b, c, d ಎಂಬ ವಿದ್ಯಾರ್ಥಿಗಳಿಂದ, 3 ವಿದ್ಯಾರ್ಥಿಗಳ ಎಷ್ಟು ವಿವಿಧ ಸಮಿತಿಗಳನ್ನು ರಚಿಸಬಹುದು? ಎಂಬ ಸಮಸ್ಯೆಯನ್ನು ಬಿಡಿಸೋಣ. a, b ಮತ್ತು c ವಿದ್ಯಾರ್ಥಿಗಳಿರುವ ಒಂದು ಸಮಿತಿಯನ್ನು ಪರಿಶೀಲಿಸೋಣ. ಈ ಸಮಿತಿಯನ್ನು ರಚಿಸಲು, ವಿದ್ಯಾರ್ಥಿಗಳನ್ನು ಆರಿಸುವ ಕ್ರಮ ಅಮುಖ್ಯ. ಅರ್ಥಾತ್ ವಿದ್ಯಾರ್ಥಿಗಳನ್ನು a,b,c ಅಥವಾ c,b,a ಅಥವಾ c,a,b ಎನ್ನುವ ಯಾವ

ಕ್ರಮದಲ್ಲಿ ಆರಿಸಿದರೂ, ಅಂತಹ ಆಯ್ಕೆ ಒಂದೇ ಒಂದು ಗೊತ್ತಾದ ಸಮಿತಿಯನ್ನು ನಿರ್ಧರಿಸುತ್ತದೆ. ಆದ್ದರಿಂದ ರಚಿಸಬಹುದಾದ 3 ವಿದ್ಯಾರ್ಥಿಗಳ ವಿವಿಧ ಸಮಿತಿಗಳು : (a, b, c) ; (a, b, d) ; (a, c, d) ಮತ್ತು (b, c, d) ಗಳಾಗಿವೆ. ಅಂದರೆ 4 ವಿದ್ಯಾರ್ಥಿಗಳಿಂದ ಒಂದು ಸಲಕ್ಕೆ 3 ವಿದ್ಯಾರ್ಥಿಗಳನ್ನು ಆರಿಸಿದ 4 ಸಮಿತಿಗಳನ್ನು ರಚಿಸಬಹುದು ಎಂದಾಯ್ತು. ಅರ್ಥಾತ್ 4 ವಿವಿಧ ವಸ್ತುಗಳಿಂದ ಒಂದು ಸಲಕ್ಕೆ 3 ವಸ್ತುಗಳನ್ನು ಆರಿಸಿದ ಒಟ್ಟು ವಿಕಲ್ಪಗಳ ಸಂಖ್ಯೆ 4. ಇದನ್ನು ಸಂಕೇತದಲ್ಲಿ $4C_3 = 4$ ಎಂದು ಬರೆಯುತ್ತೇವೆ. ಇದೇ ರೀತಿ,

n ವಿವಿಧ ವಸ್ತುಗಳಿಂದ ಒಂದು ಸಲಕ್ಕೆ r, $(r \leq n)$ ವಸ್ತುಗಳನ್ನು ಆರಿಸಿದಾಗ ಲಭಿಸುವ ಒಟ್ಟು ವಿಕಲ್ಪಗಳ ಸಂಖ್ಯೆಯನ್ನು ${}_nC_r$ ಎಂಬ ಸಂಕೇತದಿಂದ ಸೂಚಿಸುತ್ತೇವೆ.

11.15 **ಪ್ರಮೇಯ :** $${}_nC_r = \frac{{}_nP_r}{r!} = \frac{n!}{(n-r)!\,r!} \quad 11.15,1$$

ಸಾಧನೆ : n ವಿವಿಧ ವಸ್ತುಗಳಿಂದ r ವಸ್ತುಗಳನ್ನು ಆರಿಸಿದ ಒಂದು ವಿಕಲ್ಪವನ್ನು ಪರಿಶೀಲಿಸೋಣ. ಈ ವಿಕಲ್ಪದಲ್ಲಿ ಬರುವ r ವಸ್ತುಗಳನ್ನು ತಮ್ಮ ತಮ್ಮಲ್ಲೇ ಎಲ್ಲಾ ಸಾಧ್ಯವಾಗುವ ರೀತಿಗಳಲ್ಲಿ ಅಳವಡಿಸಿದಾಗ ${}_nP_r$ ಭಿನ್ನ ಕ್ರಮಯೋಜನೆಗಳು ದೊರೆಯುತ್ತವೆ. ಆದ್ದರಿಂದ ${}_nC_r$ ವಿಕಲ್ಪಗಳ ಪೈಕಿ ಪ್ರತಿಯೊಂದರಿಂದಲೂ, ನಮಗೆ n ವಿವಿಧ ವಸ್ತುಗಳಿಂದ ಒಂದು ಸಲಕ್ಕೆ n ವಿವಿಧ ವಸ್ತುಗಳನ್ನು ಆರಿಸಿದ r ! ಕ್ರಮಯೋಜನೆಗಳು ದೊರೆಯುತ್ತವೆ. ಇದರಿಂದ ${}_nC_r$ ವಿಕಲ್ಪಗಳಿಂದ ನಮಗೆ ಇಂತಹ ${}_nC_r \times (r!)$ ವಿವಿಧ ಕ್ರಮ ಯೋಜನೆಗಳು ದೊರೆಯುತ್ತವೆಯೆಂದಾಯಿತು ಆದರೆ ಇದು n ವಿವಿಧ ವಸ್ತುಗಳಿಂದ ಒಂದು ಸಲಕ್ಕೆ r ವಸ್ತುಗಳನ್ನು ಆರಿಸಿದ ಒಟ್ಟು ಕ್ರಮಯೋಜನೆಗಳ ಸಂಖ್ಯೆಯೂ ಆಗಿದೆ [ಏಕೆ ?] ಆದ್ದರಿಂದ :

$${}_nC_r \times (r!) = {}_nP_r$$

$$\therefore \; {}_nC_r = \frac{{}_nP_r}{r!} = \frac{n!}{r!\,(n-r)!}$$

11.16 **ಟೀಕೆ : ದತ್ತ n ವಸ್ತುಗಳಲ್ಲಿ ಪ್ರತಿಯೊಂದು ಸಲ r ವಸ್ತುಗಳನ್ನು**

ಆರಿಸಿದಾಗ, (n–r) ವಸ್ತುಗಳು ಆರಿಸದೇ ಹಾಗೇ ಉಳಿಯುತ್ತವೆ. ಇದೇ ರೀತಿ ಪ್ರತಿಯೊಂದು ಸಾರಿ (n–r) ವಸ್ತುಗಳನ್ನು n ವಸ್ತುಗಳಿಂದ ಆರಿಸಿದಾಗ r ವಸ್ತುಗಳು ಆರಿಸದೇ ಉಳಿಯುತ್ತವೆ. ಅಂದರೆ n ವಸ್ತುಗಳಿಂದ r ವಸ್ತುಗಳನ್ನು ಎಷ್ಟು ವಿಧಗಳಲ್ಲಿ ಆರಿಸಬಹುದೋ ಅಷ್ಟೇ ವಿಧಗಳಲ್ಲಿ (n–r) ವಸ್ತುಗಳನ್ನು n ವಸ್ತುಗಳಿಂದ ಆರಿಸಬಹುದು ಎನ್ನುವುದು ಸ್ಪಷ್ಟವಾಯಿತು.
[ಅ–112.3 ನೋಡಿ]

$$\therefore \; {}_nC_r = {}_nC_{n-r} \quad .... \quad (11.16.1)$$

ಇದರಲ್ಲಿ $r = n$ ಎಂದು ಆದೇಶಿಸುವುದರಿಂದ: ${}_nC_n = {}_nC_0$
ಇದರಲ್ಲಿ ಎಡಬದಿ $= 1$ ಇರುವುದರಿಂದ ${}_nC_0 = 1$ ಎಂದು ಒಪ್ಪಿಕೊಳ್ಳೋಣ.

11.17 ಪ್ರಮೇಯ: $${}_{n+1}C_r = {}_nC_r + {}_nC_{r-1} \quad .... \quad (11.17.1)$$

ಸಾಧನೆ: ದತ್ತ $n+1$ ವಸ್ತುಗಳನ್ನು a, b, c, d, e.... ಎಂಬ ಅಕ್ಷರಗಳಿಂದ ಸೂಚಿಸೋಣ. ಈ ಅಕ್ಷರಗಳಿಂದ, r ಬೇರೆ ಬೇರೆ ಅಕ್ಷರಗಳಿರುವಂತಹ ಒಟ್ಟು ${}_{n+1}C_r$ ವಿಕಲ್ಪಗಳನ್ನು ಪಡೆಯಬಹುದು. ಆದ್ದರಿಂದ a ಎಂಬ ಅಕ್ಷರವು, ${}_{n+1}C_r$ ವಿಕಲ್ಪಗಳ ಪೈಕಿ, ಯಾವುದೇ ಒಂದು ವಿಕಲ್ಪವನ್ನು ತೆಗೆದುಕೊಂಡರೆ ಅದರಲ್ಲಿ ಬರಬಹುದು ಅಥವಾ ಬರದೇ ಇರಬಹುದು. ಆದ್ದರಿಂದ :

(o) ${}_{n+1}C_r$ = (a ಅಕ್ಷರವಿರುವ ವಿಕಲ್ಪಗಳ ಸಂಖ್ಯೆ) + (a ಅಕ್ಷರವಿಲ್ಲದಿರುವ ವಿಕಲ್ಪಗಳ ಸಂಖ್ಯೆ)

(i) ದತ್ತ (n+1) ಅಕ್ಷರಗಳಿಂದ, a ಅಕ್ಷರವನ್ನು ವಿಸರ್ಜಿಸಿ ಉಳಿದ n ಅಕ್ಷರಗಳಿಂದ, r ಅಕ್ಷರಗಳನ್ನು ${}_nC_r$ ವಿವಿಧ ರೀತಿಗಳಲ್ಲಿ ಆರಿಸಬಹುದು. ಆದ್ದರಿಂದ ${}_{n+1}C_r$ ವಿಕಲ್ಪಗಳ ಪೈಕಿ a ಅಕ್ಷರವಿಲ್ಲದಿರುವ ವಿಕಲ್ಪಗಳ ಒಟ್ಟು ಸಂಖ್ಯೆ ${}_nC_r$ ಆಗುತ್ತವೆ.

(ii) ದತ್ತ (n+1) ಅಕ್ಷರಗಳಿಂದ a ಅಕ್ಷರವನ್ನು ವಿಸರ್ಜಿಸಿ, ಉಳಿದ r ಅಕ್ಷರಗಳಿಂದ, (r–1) ಅಕ್ಷರಗಳನ್ನು ${}_nC_{r-1}$ ವಿವಿಧ ರೀತಿಗಳಲ್ಲಿ ಆರಿಸಬಹುದು. ಹೀಗೆ ದೊರೆಯುವ (r–1) ಅಕ್ಷರಗಳುಳ್ಳ ಪ್ರತಿಯೊಂದು ವಿಕಲ್ಪದೊಡನೆ a ಅಕ್ಷರವನ್ನು ಕೂಡಿಸಿದರೆ, ನಮಗೆ (n+1) ಅಕ್ಷರಗಳಿಂದ ಆರಿಸಲ್ಪಟ್ಟ r ಅಕ್ಷರದ a

ಅಕ್ಷರವನ್ನೊಳಗೊಂಡ ಒಂದು ವಿಕಲ್ಪವು ದೊರೆಯುತ್ತದೆ. ಆದ್ದರಿಂದ $_{n+1}C_r$ ವಿಕಲ್ಪಗಳ ಪೈಕಿ, a ಅಕ್ಷರವನ್ನೊಳಗೊಂಡ ಒಟ್ಟು ವಿಕಲ್ಪಗಳ ಸಂಖ್ಯೆ $_nC_{r-1}$ ಆಗುತ್ತದೆ. ಈಗ ಸಮೀಕರಣ (o)ದ ಬಲಬದಿಯಲ್ಲಿ ಮೇಲೆ (i)ಮತ್ತು (ii)ರಲ್ಲಿ ಪಡೆದ ಸಂಖ್ಯೆಗಳನ್ನು ಆದೇಶಿಸುವುದರಿಂದ :

$$_{n+1}C_r = {}_nC_r + {}_nC_{r-1}.$$

ಈ ಪ್ರಮೇಯದ ಮತ್ತೊಂದು ಸಾಧನೆಗೆ ಅ–11.2.3 ನೋಡಿರಿ.

11.18 **ಉದಾ :** (i) $_7C_4$, $_{12}C_8$, $_{101}C_{99}$—ಇವುಗಳ ಬೆಲೆಗಳನ್ನು ಕಂಡುಹಿಡಿಯೋಣ.

ಈಗ, $_7C_4 = {}_7C_{7-4}$ .... [(11.16.1)ರಂತೆ]

$$= {}_7C_3 = \frac{7P_3}{3!} = \frac{7.6.5}{1.2.3} = 35$$

$$_{12}C_8 = {}_{12}C_4 = \frac{12.11.10.9}{1.2.3.4} = 495.$$

$$_{101}C_{99} = {}_{101}C_2 = \frac{101 \cdot 100}{1 \times 2} = 5050.$$

(ii) $_nC_6 = {}_nC_{10}$ ಆದಾಗ $_nC_{11}$ನ ಬೆಲೆಯನ್ನು ಕಂಡುಹಿಡಿಯೋಣ.

$$_nC_6 = {}_nC_{n-6} = {}_nC_{10} \quad .... \quad [\text{ದತ್ತ}]$$

$\therefore$ $n-6=10$ ಅಥವಾ $n=16$

$$\therefore {}_nC_{11} = {}_{16}C_{11} = {}_{16}C_5 = \frac{16.15.14.13.12}{1.2.3.4.5} = 4368.$$

(iii) $_{10}C_{r+2} = {}_{10}C_{2r-3}$ ಆದರೆ, r ನ ಬೆಲೆಯನ್ನು ಕಂಡು ಹಿಡಿಯೋಣ.

$_nC_{r_1} = {}_nC_{r_2}$ ಆದರೆ $r_1 = r_2$ ಅಥವಾ $r_1 = n - r_2$ ಎಂಬುದನ್ನು ಗಮನಿಸೋಣ. ದತ್ತ ಲೆಕ್ಕದಲ್ಲಿ ಇದನ್ನು ಉಪಯೋಗಿಸುವುದರಿಂದ:

$r + 2 = 2r - 3$ ಅಥವಾ $r + 2 = 10 - (2r - 3)$

$\Rightarrow \quad 5 = r \qquad ,, \quad r + 2 = 10 - 2r + 3$

$\Rightarrow \quad 3r = 11$

$\Rightarrow \quad r = \frac{11}{3}$

ಇದು ಅಶಕ್ಯ

$\therefore \quad r = 5$

11.19 ಉದಾ : (i) 20 ಹುಡುಗರು ಮತ್ತು 15 ಹುಡುಗಿಯರು ಇರುವ ಒಂದು ಸಾಂಸ್ಕೃತಿಕ ಸಂಘವನ್ನು ಒಂದು ಶಾಲೆಯ ವಿದ್ಯಾರ್ಥಿಗಳು ರಚಿಸಿದ್ದಾರೆ. ಈ ಸಂಘದಿಂದ 4 ಹುಡುಗಿಯರು ಮತ್ತು 5 ಹುಡುಗರು ಇರುವ ಎಷ್ಟು ವಿವಿಧ ತಂಡಗಳನ್ನು ಒಂದು ಕಾರ್ಯಕ್ರಮ ನಡೆಸಲು ಆರಿಸಬಹುದು ?

4 ಹುಡುಗಿಯರನ್ನು 15 ಹುಡುಗಿಯರಿಂದ $_{15}C_4$ ವಿಧಗಳಲ್ಲಿ ಆರಿಸಬಹುದು. ಹೀಗೆ 4 ಹುಡುಗಿಯರನ್ನು ಪ್ರತಿಯೊಂದು ಸಾರಿ ಆಯ್ಕೆಮಾಡಿದನಂತರ, 5 ಹುಡುಗರನ್ನು 20 ಹುಡುಗರಿಂದ $_{20}C_5$ ವಿಧಗಳಲ್ಲಿ ಆರಿಸಬಹುದು. ಆದ್ದರಿಂದ 11.2 ಮೂಲ ಸೂತ್ರದ ಪ್ರಕಾರ 4 ಹುಡುಗಿಯರು ಮತ್ತು 5 ಹುಡುಗರು ಇರುವ,

$$_{15}C_4 \times {}_{20}C_5 = \frac{15!}{11! \times 4!} \times \frac{20!}{15! \times 5!}$$

$$= \frac{20!}{11! \times 4! \times 5!}$$

ವಿವಿಧ ಸಾಂಸ್ಕೃತಿಕ ತಂಡಗಳನ್ನು ರಚಿಸಬಹುದು.

(ii) 4 ಪ್ರಾಧ್ಯಾಪಕರು ಮತ್ತು 8 ವಿದ್ಯಾರ್ಥಿಗಳು ಇರುವ ಒಂದು ಸಮಿತಿಯಿಂದ, ಕಡೇ ಪಕ್ಷ ಒಬ್ಬ ಪ್ರಾಧ್ಯಾಪಕನಾದರೂ ಇರುವಂತಹ 4 ಜನರ ಎಷ್ಟು ಉಪಸಮಿತಿಗಳನ್ನು ರಚಿಸಬಹುದು ?

ಈಗ ಬೇಕಾದ ಉಪಸಮಿತಿಯೊಂದನ್ನು ರಚಿಸಲು ಆಯ್ಕೆಮಾಡಬಹುದಾದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿ ಪಟ್ಟಿಯನ್ನು ನೋಡೋಣ :

ಪ್ರಾಧ್ಯಾಪಕರ ಸಂಖ್ಯೆ	ಹುಡುಗರು ಸಂಖ್ಯೆ	ರಚಿಸಬಲ್ಲ ಉಪಸಮಿತಿಗಳ ಸಂಖ್ಯೆ
1	3	${}_4C_1 \times {}_8C_3 = 4 \times 56$
2	2	${}_4C_2 \times {}_9C_2 = 6 \times 28$
3	1	${}_4C_3 \times {}_8C_1 = 4 \times 8$
4	—	${}_4C_4 = 4$

∴ ಬೇಕಾದ ಸಂಖ್ಯೆ $= 224 + 168 + 32 + 4 = 428$.

ಅಭ್ಯಾಸ 11.2

1. ಇವುಗಳ ಬೆಲೆಗಳನ್ನು ಕಂಡು ಹಿಡಿಯಿರಿ : ${}_4C_2$, ${}_{12}C_4$, ${}_{12}C_8$, ${}_{16}C_{11}$, ${}_{101}C_2$, ${}_nC_n$

2. (i) ${}_5C_1 + {}_5C_2 + {}_5C_3 + {}_5C_4 + {}_5C_5 = 2^5 - 1$ ಎಂದೂ ಮತ್ತು
   (ii) ${}_nC_1 + {}_nC_2 + {}_nC_3 + \dots + {}_nC_{n-1} + {}_nC_r = 2^n - 1$
   ಎಂದೂ ಸಾಧಿಸಿರಿ.

3. (11.16.1) ಮತ್ತು (11.17.1), ಇವುಗಳನ್ನು 11.15 ಪ್ರಮೇಯ ಉಪಯೋಗಿಸಿ ಸಾಧಿಸಿರಿ.

4. $_nC_{12} = {}_nC_8$ ಆದರೆ, $_nC_{17} = 1140$ ಎಂದೂ ಮತ್ತು $_{22}C_n = 231$ ಎಂದೂ ಸಾಧಿಸಿರಿ.

5. $_{18}C_r = {}_{18}C_{r+2}$ ಆದರೆ $_rC_5 = 56$ ಎಂದು ಸಾಧಿಸಿರಿ.

6. $_nC_6 = {}_nC_{10}$ ಆದರೆ $_nC_{11} = 4368$ ಎಂದು ತೋರಿಸಿರಿ.

7. $_{20}C_{r+2} = {}_{20}C_{2r-3}$ ಆದಾಗ $r^2 - 12r + 75 = 0$ ಎಂದು ಸಾಧಿಸಿರಿ.

8. $\dfrac{_{28}C_{2r}}{_{24}C_{2r-4}} = \dfrac{225}{11}$ ಆದಾಗ $r = 7$ ಎಂದು ತೋರಿಸಿರಿ.

9. $\dfrac{2\ {}_nC_3}{_nC_2} = \dfrac{44}{3}$ ಆದರೆ $n = 6$ ಎಂದು ತೋರಿಸಿರಿ

10. $r \times {}_nC_r = n \times {}_{n-1}C_{r-1}$ ಎಂದು ಸಾಧಿಸಿರಿ.

11. $_nC_r = \dfrac{n-r+1}{r}\ {}_nC_{r-1}$ ಎಂದು ಸಾಧಿಸಿರಿ ಮತ್ತು ತನ್ಮೂಲಕ 11.15 ಪ್ರಮೇಯವನ್ನು ಸಾಧಿಸಿರಿ.

12. a, b, c....ಎಂಬ n ವಿವಿಧ ಅಕ್ಷರಗಳಿಂದ ಒಂದು ಸಲಕ್ಕೆ r ಅಕ್ಷರಗಳನ್ನು ಆರಿಸಿದ ಒಟ್ಟು ವಿಕಲ್ಪಗಳ ಪೈಕಿ,

(i) ಎಷ್ಟು ವಿಕಲ್ಪಗಳಲ್ಲಿ a ಮತ್ತು b ಎರಡೂ ಅಕ್ಷರಗಳು ಬರುತ್ತವೆ ?

(ii) a ಅಕ್ಷರವು ಬಂದು b ಅಕ್ಷರವು ಬರದೇ ಇರುವಂತಹ ಎಷ್ಟು ವಿಕಲ್ಪಗಳಿವೆ ?

(iii) a ಮತ್ತು b, ಈ ಎರಡೂ ಅಕ್ಷರಗಳು ಬರದೇ ಇರುವ ವಿಕಲ್ಪಗಳು ಎಷ್ಟಿವೆ ಎಂಬ ಸಮಸ್ಯೆಗಳನ್ನು ಬಿಡಿಸಿರಿ ಮತ್ತು ತನ್ಮೂಲಕ,

$$_nC_r = {}_{n-2}C_{r-2} + 2\times {}_{n-2}C_{r-1} + {}_{n-2}C_r$$

ಎಂದು ಸಾಧಿಸಿರಿ.

13. ಕೆಳಗಿನವು ಯುಕ್ತವಾದಾಗ nನ ಬೆಲೆಯನ್ನು ಕಂಡುಹಿಡಿಯಿರಿ.

(i) $_nC_5 = 5\,{}_nP_3$, (ii) $_nC_{n-4} = 35$.

14. $_nP_r = 24 \times {}_nC_r$ ಆದಾಗ $r = 4$ ಎಂದೂ ಮತ್ತು $_{15}C_{r+1} = {}_{15}C_{3r-1}$ ಆದಾಗ, $r = 3$ ಎಂದೂ ಸಾಧಿಸಿರಿ.

15. 60 ವಿದ್ಯಾರ್ಥಿಗಳಿರುವ ಒಂದು ತರಗತಿಯಿಂದ, 6 ವಿದ್ಯಾರ್ಥಿಗಳಿರುವ ಒಂದು ತಂಡವನ್ನು ಎಷ್ಟು ವಿಧಗಳಲ್ಲಿ ಆರಿಸಬಲ್ಲಿರಿ ?

16 ಒಂದು ಶಾಲೆಯಲ್ಲಿರುವ ಒಟ್ಟು 60 ವಿದ್ಯಾರ್ಥಿಗಳ ಪೈಕಿ 40 ಹುಡುಗರು ಮತ್ತು 20 ಹುಡುಗಿಯರು ಇದ್ದಾರೆ. ಇವರಿಂದ ಕನಿಷ್ಠಪಕ್ಷ 15 ಹುಡುಗಿಯರನ್ನೊಳಗೊಂಡ, 30 ವಿದ್ಯಾರ್ಥಿಗಳ ಎಷ್ಟು ವಿವಿಧ ತಂಡಗಳನ್ನು ರಚಿಸಬಲ್ಲಿರಿ ?

17. ಒಂದು ಗಣಿತದ ಪ್ರಶ್ನೆ ಪತ್ರಿಕೆಯಲ್ಲಿ A, B, C ಎಂಬ 3 ಭಾಗಗಳಿವೆ : ಈ ಭಾಗಗಳಲ್ಲಿ ಅನುಕ್ರಮವಾಗಿ 5, 6, 6 ಪ್ರಶ್ನೆಗಳಿವೆ, ಪ್ರತಿಯೊಬ್ಬ ವಿದ್ಯಾರ್ಥಿಯೂ 10 ಪ್ರಶ್ನೆಗಳನ್ನು ಉತ್ತರಿಸಲೇಬೇಕು. ಹೀಗೆ ಉತ್ತರಿಸುವಾಗ A ಭಾಗದಿಂದ ಕನಿಷ್ಠಪಕ್ಷ 2 ಪ್ರಶ್ನೆಗಳನ್ನು ಮತ್ತು B ಭಾಗದಿಂದ ಕನಿಷ್ಠಪಕ್ಷ 3 ಪ್ರಶ್ನೆಗಳನ್ನು ಬಿಡಿಸಲೇಬೇಕು ಎಂಬ ನಿರ್ಬಂಧವಿದ್ದರೆ, ಯಾವುದೇ ಒಬ್ಬ ವಿದ್ಯಾರ್ಥಿಯು ಎಷ್ಟು ವಿವಿಧ ವಿಧಗಳಲ್ಲಿ ಪ್ರಶ್ನೆಪತ್ರಿಕೆಯನ್ನು ಬಿಡಿಸಬಲ್ಲನು ?

18. 16 ಆಟಗಾರರಿರುವ ಒಂದು ಕ್ರಿಕೆಟ್ ಗೋಷ್ಠಿಯಲ್ಲಿ 6 ಬೌಲರ್‌ಗಳು ಮತ್ತು 4 ವಿಕೆಟ್ ಕೀಪರ್‌ಗಳೂ ಇರುವಂತಹ ಹನ್ನೊಂದು ಜನರ ಎಷ್ಟು ಕ್ರಿಕೆಟ್ ತಂಡಗಳನ್ನು ಆರಿಸಬಲ್ಲಿರಿ ?

19. ಒಂದು ಕಾಗದದ ಮೇಲಿರುವ 12 ಬಿಂದುಗಳ ಪೈಕಿ ಯಾವ 3 ಬಿಂದುಗಳೂ ಒಂದು ಸರಳ ರೇಖೆಯಲ್ಲಿಲ್ಲ. ಹಾಗಾದರೆ, ಈ ಬಿಂದುಗಳನ್ನು ಸೇರಿಸಿ, ಎಷ್ಟು ತ್ರಿಕೋಣಗಳನ್ನು ರಚಿಸಬಲ್ಲಿರಿ ?

20. 20 ಜನ ಯಾತ್ರಿಕರು ಮತ್ತು 2 ದೋಣಿಗಳು ಇವೆ. ಚಿಕ್ಕದೋಣಿಯಲ್ಲಿ 10 ಜನರು ಮತ್ತು ದೊಡ್ಡ ದೋಣಿಯಲ್ಲಿ 15 ಜನರು ಕೂಡಲು ಸ್ಥಳಾವಕಾಶವಿದೆ. ದೊಡ್ಡದೋಣಿಯಲ್ಲಿ ಕನಿಷ್ಠಪಕ್ಷ 10 ಜನ ಯಾತ್ರಿಕರು ಕೂಡಲೇಬೇಕೆಂಬ ನಿರ್ಬಂಧವಿರುವಾಗ, ಎಲ್ಲಾ ಯಾತ್ರಿಕರು ಎಷ್ಟು ವಿಧಗಳಲ್ಲಿ ಹೊಳೆಯನ್ನು ದಾಟಬಲ್ಲರು ?

12

ದ್ವಿಪದ ಪ್ರಮೇಯ

12.1 ಎರಡು ಪದಗಳ ಮೊತ್ತ ಅಥವಾ ವ್ಯತ್ಯಾಸವನ್ನು **ದ್ವಿಪದ**ವೆಂದು ಕರೆಯುತ್ತೇವೆ. ಉದಾಹರಣೆಗೆ $a+b$, $2x^2y-3pq$ ಇವುಗಳಲ್ಲಿ ಪ್ರತಿಯೊಂದೂ, ಒಂದೊಂದು ದ್ವಿಪದವನ್ನು ನಿರ್ಧರಿಸುತ್ತವೆ. ಇವುಗಳ ಘಾತಗಳನ್ನು **ದ್ವಿಪದ-ಘಾತ**ಗಳೆಂದು ಕರೆಯುತ್ತೇವೆ. ಒಂದು ದ್ವಿಪದದ ಘಾತ ಧನಪೂರ್ಣಾಂಕವಾದಾಗ ಅದರ ವಿಸ್ತರಣೆಯನ್ನು ಪಡೆಯುವ ಕ್ರಮವನ್ನು ಮುಂದೆ ವಿವರಿಸುತ್ತೇವೆ. ಇದಕ್ಕಾಗಿ ಕೆಳಗೆ ಕೊಟ್ಟಿರುವ ಕೆಲವು ದ್ವಿಪದ- ಘಾತಗಳನ್ನು ಸೂಕ್ಷ್ಮವಾಗಿ ಅವಲೋಕಿಸೋಣ.

(i) $(a+b)^1 = a+b$

$$= 1a^{1-0}b^0 + 1a^0b^1$$

$$= {}_1C_0a^{1-0}b^0 + {}_1C_1a^{1-1}b^1$$

$$= \sum_{r=0}^{1} {}_1C_r\; a^{1-r}\; b^r \quad \ldots\ldots \qquad [\text{ಏಕೆ?}]$$

(ii) $(a+b)^2 = a^2 + 2ab + b^2$

$$= 1a^{2-0}b^0 + 2a^{2-1}b^1 + 1a^{2-2}b^2$$

$$= {}_2C_0a^{2-0}b^0 + {}_2C_1a^{2-1}b^1 + {}_2C_2a^{2-2}b^2$$

$$= \sum_{r=0}^{2}{}^{2}{}_2C_r\; a^{2-r}b_r$$

(iii) $(a+b)^3 = a^3 + 3a^2b + 3ab^2 + b^3$

$$= {}_3C_0a^{3-0}b^0 + {}_3C_1a^{3-1}b^1 + {}_3C_2a^{3-2}b^2 + {}_3C_3\; a^{3-3}b^3$$

$$= \sum_{r=0}^{3} {}_3C_r\; a^{3-r}\; b^r$$

(iv) $(a+b)^4 = (a^3+3a^2b+3ab^2+b^3)(a+b)$ [ಏಕೆ?]

$$= a^4+4a^3b+6a^2b^2+4ab^3+b^4$$

$$= {}_4C_0a^{4-0}b^0+{}_4C_1a^{4-1}b^1+{}_4C_2a^{4-2}b^2+{}_4C_3a^{4-3}b^3+{}_4C_4b^4$$

$$= \sum_{r=0}^{4} {}_4C_r\ a^{4-r}\ b^r$$

ಈ ದ್ವಿಪದದ ಘಾತಗಳ ವಿಸ್ತರಣೆಯ ಅವಲೋಕನೆಯಿಂದ ತಿಳಿಯುವ ವಿಷಯ : $(a+b)$ ದ್ವಿಪದದ nನೆಯ ಘಾತ, n ಧನ ಪೂರ್ಣಾಂಕವಾದಾಗ, ಕೆಳಗಿನಂತೆ ವಿಸ್ತರಣೆಯನ್ನು ಪಡೆದಿರಬಹುದು—

$$(a+b)^n = {}_nC_0a^{n-0}b^0+{}_nC_1a^{n-1}b^1+{}_nC_2a^{n-2}b^2+\dots\dots+{}_nC_r\ a^{n-r}b^r+\dots+{}_nC_{n-1}\ a^{n-(n-1)}b^{n-1}+{}_nC_n\ a^{n-n}b^n$$

$$= \sum_{n=0}^{n} {}_nC_r\ a^{n-r}b^r$$

ಈ ನಮ್ಮ ಊಹೆ ಸಮಂಜಸವೆಂಬುದನ್ನು ಕೆಳಗಿನ ಪ್ರಮೇಯದಲ್ಲಿ ಸಾಧಿಸುತ್ತೇವೆ.

12.2 ಪ್ರಮೇಯ : n ಒಂದು ಧನ ಪೂರ್ಣಾಂಕವಾದಾಗ,

$$(a+b)^n = {}_nC_0a^{n-0}b^0+{}_nC_1a^{n-1}b^1+{}_nC_2a^{n-2}b^2+\dots+{}_nC_r\ a^{n-r}b^r+\dots+{}_nC_{n-1}a^{n-(n-1)}b^{n-1}+{}_nC_r\ a^{n-n}b^n \quad \dots (12.2.1)$$

ಸಾಧನೆ : ಪ್ರಥಮ ವಿಧಾನ : ಮೊದಲು $(a+b)^n = (a+b)(a+b)(a+b)\dots n$ ಆವರಣಗಳು, ಎಂಬುದನ್ನು ಗಮನಿಸೋಣ. ಈ ಘಾತದಲ್ಲಿ

ಬರುವ ಯಾವುದೇ ಒಂದು ಪದವನ್ನು ಪಡೆಯಲು ಬಲಬದಿಯಲ್ಲಿರುವ ಪ್ರತಿಯೊಂದು ಆವರಣದಿಂದ a ಅಥವಾ b ಅಕ್ಷರಗಳಲ್ಲಿ ಒಂದೇ ಒಂದನ್ನು ಆರಿಸಿ ಗುಣಿಸಬೇಕೆಂಬುದನ್ನು ಗಮನಿಸೋಣ. ಪ್ರತಿಸಾರಿ r ಆವರಣಗಳಿಂದ b ಯನ್ನು ಆರಿಸಿ, ಉಳಿದ (n-r) ಆವರಣಗಳಿಂದ aಯನ್ನು ಆರಿಸಿ ಗುಣಿಸಿದಾಗ $b^r a^{n-r}$ ಎಂಬ ಗುಣಲಬ್ಧವು ಲಭಿಸುತ್ತದೆ. ಈ ಗುಣಲಬ್ಧವನ್ನು ಮೇಲೆ ಹೇಳಿದ ರೀತಿ ಎಷ್ಟು ವಿವಿಧ ರೀತಿಗಳಲ್ಲಿ ಪಡೆಯಬಹುದು ಎಂಬುದು ಒಂದು ವಿಕಲ್ಪದ ಸಮಸ್ಯೆಯಾಗುತ್ತದೆ. r bಗಳನ್ನು n ಆವರಣಗಳಿಂದ ${}_nC_r$ ವಿವಿಧ ರೀತಿಗಳಲ್ಲಿ ಆರಿಸಬಹುದೆಂಬುದು ಸರಿಯಷ್ಟೆ; ಈ ರೀತಿ bಯನ್ನು ಯಾವುದೇ r ಆವರಣಗಳಿಂದ ಆರಿಸಿ, ಇದನ್ನವಲಂಬಿಸಿದಂತೆ ಉಳಿದ n-r ಆವರಣಗಳಿಂದ aಯನ್ನು ಒಂದೇ ಒಂದು ವಿಧದಲ್ಲಿ ಆರಿಸಬಹುದು. ಆದ್ದರಿಂದ 11.2 ಮೂಲಸೂತ್ರದ ಪ್ರಕಾರ $b^r a^{n-r}$ ಅಥವಾ $a^{n-r}b^n$ ಎಂಬ ಗುಣಲಬ್ಧವನ್ನು ${}_nC_r \times 1 = {}_nC_r$ ವಿವಿಧ ರೀತಿಗಳಲ್ಲಿ ಪಡೆಯಬಹುದು. ಅಂದರೆ,

$$ {}_nC_r \; a^{n-r}b^r \qquad \ldots \qquad (12.2.2) $$

ಎಂಬ ಪದವು $(a+b)^n$ ಘಾತದ ವಿಸ್ತರಣೆಯಲ್ಲಿ ಬರುತ್ತದೆಂದಾಯ್ತು. ಇದು ವಾಸ್ತವವಾಗಿ (12.2.1)ರ ಬಲಬದಿಯಲ್ಲಿ ಬರುವ $(r+1)$ನೆಯ ಪದವೆಂಬುದನ್ನು ಗಮನಿಸೋಣ. (12.2.2)ರಲ್ಲಿ r ಪಡೆಯಬಹುದಾದ ಎಲ್ಲಾ ಪೂರ್ಣಾಂಕ ಬೆಲೆಗಳೆಂದರೆ, ಅವು $0,1,2,3,\ldots,n$ ಆಗಿವೆ. ಈ ಬೆಲೆಗಳನ್ನು rಗೆ ಕ್ರಮಾನುಗತವಾಗಿ ಕೊಡುವುದರಿಂದ, ${}_nC_0 a^{n-0}b^0$, ${}_nC_1 a^{n-1}b^1$, ${}_nC_2 a^{n-2}b^2$, ${}_nC_3 a^{n-3}b^3, \ldots, {}_nC_r \; a^{n-n}b^r$ ಎಂಬ ಪದಗಳು, ಅಂದರೆ (12.2.1)ರ ಬಲಬದಿಯಲ್ಲಿರುವ ಪದಗಳು ದೊರೆಯುತ್ತವೆ. ಇದರಿಂದ ಪ್ರಮೇಯದ ಸಾಧನೆಯು ಮುಕ್ತಾಯವಾಗುತ್ತದೆ.

ದ್ವಿತೀಯ ವಿಧಾನ : (12.2.1)ನ್ನು $\sum$ಸಂಕೇತ ಉಪಯೋಗಿಸಿ,

$$ (a+b)^n = \sum_{r=0}^{n} {}_nC_r \; a^{n-r}b^r \qquad \ldots \qquad (12.2.1) $$

ಎಂದು ಬರೆಯೋಣ. ಈ ಸಮೀಕರಣವು n ಯಾವ ಧನ ಪೂರ್ಣಾಂಕವಾದರೂ

ಯುಕ್ತವಾಗುತ್ತದೆಂದು ಗಣಿತಾನುಗಮನ ರೀತಿ ಸಾಧಿಸಿ ಪ್ರಮೇಯದ ಸಾಧನೆಯನ್ನು ಪೂರ್ತಿಮಾಡುತ್ತೇನೆ. $n=1$ ಆದಾಗ, (12.2.1¹)ರಲ್ಲಿ ಬಲಬದಿ –

$$\sum_{r=0}^{1} {}_1C_r a^{1-r} b^r = {}_1C_0 a^{1-0} b^0 + {}_1C_1 a^{1-1} b^1 = 1 \cdot a^1 \cdot 1 + 1 \cdot 1 \cdot b^1 =$$

$a+b=(a+b)^1=$ ಎಡಬದಿ. ಅಂದರೆ $n=1$ ಆದಾಗ, (12.2.1¹) ಸಮಂಜಸವೇ ಆಯಿತು. ಇದರಿಂದ (12.2.1¹)ನ್ನು ಯುಕ್ತಗೊಳಿಸುವ ಎಲ್ಲಾ ಪೂರ್ಣಾಂಕಗಳ ಗಣ S ಎಂದರೆ, $1 \in S$ ಎಂದಾಯಿತು. ಈಗ ಎಲ್ಲಾ ಪೂರ್ಣಾಂಕಗಳ ಗಣವನ್ನು N ಎಂಬ ಸಂಕೇತದಿಂದ ಸೂಚಿಸಿದರೆ :

(i) $1 \in S \subset N$

ಈಗ $p \in S$ ಎಂದು ಭಾವಿಸುವುದರಿಂದ :

(ii) $$(a+b)^p = \sum_{r=0}^{p} {}_pC_r \, a^{p-r} b^r$$

$a \times$ (ii): ಇದರಿಂದ : $$a(a+b)^p = a\sum_{r=0}^{p} {}_pC_r \, a^{p-r} b^r$$

$$= \sum_{r=0}^{p} a \cdot {}_pC_r \, a^{p-r} b^r$$

$$= \sum_{r=0}^{p} {}_pC_r \, a^{p-r+1} \, b^r$$

(iii) $$\therefore \quad a(a+b)^p = \sum_{r=1}^{p} {}_pC_r \, a^{p-r+1} \, b^r + {}_pC_0 a^{p+1}$$

$b \times$ (ii) ; ಇದರಿಂದ : $$b(a+b)^p = b\sum_{r=0}^{p} {}_pC_r \, a^{p-r} \, b^r$$

$$= \sum_{r=0}^{p} {}_pC_r \, a^{p-r} b \cdot b_r \qquad = \sum_{r=0}^{p} C^r \, a^{p-r} b^{r+1}$$

$$= \sum_{r=1}^{p+1} {}_pC_{r-1} a^{p-(r-1)} b^r$$ ....[ಅ–8.5.3 ನೋಡಿರಿ.]

(iv) $\therefore \quad b(a+b)^p = \sum_{r=1}^{p} {}_pC_{r-1} a^{p-r+1} b^r + {}_pC_p\ a^0 b^{p+1}$

(iii)+(iv): ಇದರಿಂದ: $a(a+b)^p + b(a+b)^p$

$$= \sum_{r=1}^{p} {}_pC_r\ a^{p-r+1} b^r + {}_pC_0 a^{p+1} + \sum_{r=1}^{p} {}_pC_{r-1}\ a^{p-r+1} b^r + {}_pC_p\ a^0 b^{p+1}$$

$$= \sum_{r=1}^{p} \{ {}_pC_r a^{p-r+1} b^r + {}_pC_{r-1} a^{p-r+1} b^r \} + {}_pC_0 a^{p+1} + {}_pC_p\ b^{p+1}$$

$$= \sum_{r=1}^{p} ({}_pC_r + {}_pC_{r-1}) a^{p-r+1} b^r + {}_{p+1}C_0 a^{p+1} + {}_{p+1}C_{p+1}\ b^{p+1}$$

$$= \sum_{r=1} {}_{p+1}C_r\ a^{p+1-r} b^r + {}_{p+1}C_0 a^{p+1-0} b^0 + {}_{p+1}C_{p+1}\ a^0\ b^{p+1}$$

[ಏಕೆ ? (11.17 1) ನೋಡಿರಿ]

$$= \sum_{r=0}^{p+1} {}_{p+1}C_r\ a^{p+1-r}\ b^r \qquad \text{[ಏಕೆ?]}$$

ಈಗ $n = p+1$ ಎಂದು (12.2.1)ರಲ್ಲಿ ಆದೇಶಿಸಿದರೆ, ಮೇಲಿನ ಸಮೀಕರಣವು ಬರುತ್ತದೆ. ಆದ್ದರಿಂದ

(v) $p \in S$ ಆದಾಗ $p+1 \in S$, ಎಂದಾಗುತ್ತದೆ.

(i) ಮತ್ತು (v) ರಿಂದ $S = N$.[ಏಕೆ ? 10.1 ನೋಡಿರಿ.]

ಅಂದರೆ n ಯಾವ ಧನ ಪೂರ್ಣಾಂಕವಾದರೂ. (12.2.1) ಯುಕ್ತವಾಗುತ್ತದೆ ಎಂದು ಸಾಧಿಸಿದಂತಾಯಿತು. ಇದರಿಂದ ಸಾಧನೆಯು ಪೂರ್ತಿಯಾಗುತ್ತದೆ.

12.3 **ಟೀಕೆ :** (12.2.1) ರಲ್ಲಿರುವ ವಿಸ್ತರಣೆಯ ಪರಿಶೀಲನೆಯಿಂದ ತಿಳಿಯುವ ಅಂಶಗಳನ್ನು ಈಗ ಪಟ್ಟಿ ಮಾಡೋಣ:

(i) $(a+b)^n$ **ಘಾತದ ವಿಸ್ತರಣೆಯಲ್ಲಿ** $(n+1)$ **ಪದಗಳಿವೆ; ಅಂದರೆ ಘಾತಾಂಕದ ಸಂಖ್ಯೆಗಿಂತ ಒಂದು ಅಧಿಕ.**

(ii) **ಯಾವುದೇ ಪದದಲ್ಲಿ ಬರುವ a ಮತ್ತು b ಗಳ ಘಾತಾಂಕಗಳ ಮೊತ್ತ n.**

(iii) **ವಿಸ್ತರಣೆಯ rನೆಯ ಪದವನ್ನು** t_r **ಎಂಬ ಸಂಕೇತದಿಂದ ಸೂಚಿಸಿದರೆ,** $(r+1)$ **ನೆಯ ಪದವು**

$$t_{r+1} = {}_nC_r \ a^{n-r} \ b^r \quad \ldots \qquad (12.3.1)$$

ಆಗಿದೆ. ಈ ಪದದಲ್ಲಿ, ಅಂದರೆ $(n+1)$**ನೆಯ ಪದದಲ್ಲಿ ಬರುವ ಸಂಖ್ಯಾತ್ಮಕ ಗುಣಕ, aಯ ಘಾತಾಂಕ ಮತ್ತು bಯ ಘಾತಾಂಕಗಳು ಅನುಕ್ರಮವಾಗಿ** ${}_nC_r$ $n-r$ **ಮತ್ತು r ಎಂಬುವನ್ನು ನೆನಪಿನಲ್ಲಿಡೋಣ.**

(iv) ${}_nC_r = {}_nC_{n-r}$ **ಇರುವುದರಿಂದ, ವಿಸ್ತರಣೆಯಲ್ಲಿ ಬರುವ ಪದಗಳ ಸಂಖ್ಯಾತ್ಮಕ ಗುಣಕಗಳು ಶುರುವಿನಿಂದ ಮತ್ತು ಕೊನೆಯಿಂದ ಒಂದೇ ಆಗಿವೆ.**

12.4 **ಟೀಕೆ:**

$$(a-b)^n = \{a+(-b)\}^n$$

$$= \sum_{r=0}^{n} {}_nC_r \ a^{n-r}(-b)^r$$

$$= \sum_{r=0}^{n} {}_nC_r \ a^{n-r}(-1 \cdot b)^r$$

$$= \sum_{r=0}^{n} (-1)^r \ {}_nC_r \ a^{n-r} b^r$$

$\therefore \quad (a-b)^n = (-1)^0 \; {}_nC_0 a^{n-0} b^0 + (-1)^1 \; {}_nC_1 a^{n-1} b^1 + (-1)^2$
${}_rC_2 a^{n-2} b^2 + (-1)^3 C_3 a^{n-3} b^3 + (-1)^4 \; {}_nC_4 a^{n-4} b^4 + \ldots$
$= {}_nC_o \; a^{n-0} b^o - {}_nC_1 \; a^{n-1} \; b^1 + {}_nC_2 \; a^{n-2} \; b^2$
$- {}_nC_3 \; a^{n-3} \; b^3 + {}^nC_4 a^{n-4} b^4 - \ldots\ldots (n+1)$

ಪದಗಳು, ಇದರಿಂದ ತಿಳಿಯುವ ವಿಷಯ ; $(a-b)^n$ ಘಾತದ ವಿಸ್ತರಣೆಯಲ್ಲಿ ಬರುವ ಪದಗಳ ಚಿಹ್ನೆಯು ಪರ್ಯಾಯವಾಗಿ ಧನ ಮತ್ತು ಋಣ ಆಗುತ್ತದೆ ಮತ್ತು ಮೊದಲ ಪದದ ಚಿಹ್ನೆ ಧನವೆಂಬುದನ್ನು ನೆನಪಿನಲ್ಲಿಡೋಣ.

12.5 **ಉದಾ :** ದ್ವಿಪದ ಪ್ರಮೇಯವನ್ನು ಪ್ರಯೋಗಿಸಿ ಕೆಳಗಿನವುಗಳನ್ನು ವಿಸ್ತರಿಸೋಣ. *(i)* $(x+2y)^6$ *(ii)* $(2a-x)^6$

(i) ಈಗ $(x+2y)^6 = \{x+(2y)\}^6$, ಇರುವುದರಿಂದ, ಇದನ್ನು (12.2.1) ರೊಡನೆ ಹೋಲಿಸಿದರೆ, $a=x$, $b=2y$ ಮತ್ತು $n=6$ ಆಗುತ್ತದೆ. ಆದ್ದರಿಂದ :

$$(x+2y)^6 = {}_6C_0(x)^0(2y)^6 + {}_6C_1(x)^{6-1}(2y)^1 + {}_6C_2(x)^{6-2}(2y)^2 + {}_6C_3(x)^{6-3}(2y)^3 + {}_6C_4(x)^{6-4}(2y)^4 + {}_6C_5(x)^{6-5}(2y)^5 + {}_6C_6(x)^{6-6}(2y)^6.$$

ಆದರೆ, ${}_6C_0 = {}_6C_6 = 1$, ${}_6C_1 = {}_6C_5 = {}_6C_2 = {}_6C_4 = 15$ ಮತ್ತು ${}_6C_3 = 20$ ಎಂದಿರುವುದರಿಂದ,

$$(x+2y)^6 = 1.x^6.1 + 6x^5(2y) + 15x^4(2y)^2 + 20x^3(2y)^3 + 15x^2(2y)^4 + 6x\,(2y)^5 + 1.1.(2y)^6.$$
$$= x^6 + 12x^5y + 60x^4y^2 + 160x^3y^3 + 240x^2y^4 + 192xy^5 + 64y^6.$$

(ii) ಈಗ $(2a-x) = -1 \cdot (x-2a)$ ಇರುವುದರಿಂದ,
$(2a-x)^6 = \{-1 \cdot (x-2a)\}^6 = (-1)^6 (x-2a)^6$

12.4 **ಟೀಕೆಯಿಂದ :** $= (x-2a)^6.$

$$(x-2a)^6 = {}_6C_0(x)^{6-0}(2a)^0 - {}_6C_1(x)^{6-1}(2a)^1 + {}_6C_2(x)^{6-2}$$

$(2a)^2 - {}_6C_3(x)^{6-3}(2a)^3 + {}_6C_4(x)^{6-4}(2a)^4 - {}_6C_5(x)^{6-5}(2a)^5 + {}_6C_6(x)^{6-6}(2a)^6$

ಮೇಲಿನ ಲೆಕ್ಕದಲ್ಲಿ ಸಂಕ್ಷೇಪಿಸಿರುವಂತೆ ಸಂಕ್ಷೇಪಿಸುವುದರಿಂದ ;

$$(x-2a)^6 = x^6 - 12x^5a + 60x^4a^2 - 160x^3a^3 + 240x^2a^4 - 192\,xa^5 + 64a^6$$

12.6 ಉದಾ : $(\sqrt{2}+1)^5 - (\sqrt{2}-1)^5 = 82$ ಎಂದು ಸಾಧಿಸೋಣ.

ಈಗ, $(\sqrt{2}+1)^5 = {}_5C_1\sqrt{2}^{5-1}1^1 + {}_5C_2\sqrt{2}^{5-2} + {}_5C_3\sqrt{2}^{5-3}1^3 + {}_5C_4\sqrt{2}^{5-4}1^2 + {}_5C_5\sqrt{2}^{5-5}1^5$

$\therefore\ (\sqrt{2}+1)^5 = \sqrt{2}^5 + {}_5C_1\sqrt{2}^4 + {}_5C_2\sqrt{2}^3 + {}_5C_3\sqrt{2}^2 + {}_5C_4\sqrt{2}^2 + {}_5C_5 - 1$

$\therefore\ (\sqrt{2}-1)^5 - = \sqrt{2}^5 - {}_5C_1\sqrt{2}^4 + {}_5C_2\sqrt{2}^3 - {}_5C_3\sqrt{2}^2 + {}_5C_4\sqrt{2} - {}_5C_5 \cdot 1$

$\therefore\ (\sqrt{2}+1)^5 - (\sqrt{2}-1)^5 = 2 \cdot {}_5C_1\sqrt{2}^4 + 2 \cdot {}_5C_3\sqrt{2}^2 + 2 \cdot {}_5C_5 \cdot 1 = 2.5.2^2 + \frac{2.5.4.3.2}{1.2.3} + 2.1.1$

$= 40 + 40 + 2 = 82$

12.7 ಉದಾ : ದ್ವಿಪದ ಪ್ರಮೇಯವನ್ನು ಪಯೋಗಿಸಿ $(1.08)^4$ದ ಬೆಲೆಯನ್ನು 4 ದಶಮಾಂಶ ಸ್ಥಾನಗಳಿಗೆ ಕಂಡುಹಿಡಿಯೋಣ.

ಈಗ $1.08 = 1 + .08$ ಎಂಬುದನ್ನು ಗಮನಿಸೋಣ.

$\therefore (1.08)^4 = (1 + .08)^4$

$= 1 + {}_4C_1 \times 1x^{4-1}(0.08))^1 + {}_4C_2 \times 1^{4-2} \times (0.08)^{4-2} + {}_4C_3 \times 1^{4-3} \times (0.08)^3 + {}_4C_4 \times 1^{4-4} \times (0.08)^4$

$= 1 + 4 \times 0.08 + 6 \times (0.08)^2 + 4 \times (0.08)^3 + \ldots\ \ldots$

$\doteq 1+0.32+0.0384+0.000256$

$\doteq 1.358656$

$\doteq 1.3587.$

12.8 ಉದಾ: $\left(4x^3- \frac{1}{2x}\right)^{12}$

ಘಾತದ ವಿಸ್ತರಣೆಯಲ್ಲಿನ 8 ನೆಯ ಪದವನ್ನು ಬರೆಯೋಣ.

ಇಲ್ಲಿ, $a=4x^3$, $-b = -\frac{1}{2x}$, $n=12$

$t_{r+1} = (-1)^r \ {}_nC_r \ a^{n-r} b^r$ [12.4 ಟೀಕೆಯಿಂದ]

$= (-1)^r \ {}_{12}C_r \ (4x^3)^{12-r} \left(\frac{1}{2x}\right) = (r+1)$ ನೇ ಪದ.

ಇದರಲ್ಲಿ $r=7$ ಎಂದು ಆದೇಶಿಸಿದರೆ, 8 ನೇ ಪದ ದೊರೆಯುತ್ತದೆ,

$\therefore \quad t_8 = t_7+_1 = (-1)^7 \ 12C_7 \ (4x^3)^{12-7} \left(\frac{1}{2x}\right)^7$

$= -\ {}_{12}C_5 . 4^5 . x^{15} \ \frac{1}{2^7, \ x^7}$

$= - \ \frac{12.11.10.9.8.}{1.2.3.4.5.} \ \frac{x^{15-7}}{2^7}$

$= -\ 6336 \ x^8.$

12.9 ಉದಾ: ಮೇಲಿನ ಲೆಕ್ಕದಲ್ಲಿ x— ರಹಿತವಾದ ಪದವನ್ನು ಕಂಡು ಹಿಡಿಯೋಣ.

$(r+1)$ ನೆಯ ಪದ $= t_{r+1}$

$= (-1)^r \ {}_{12}C_r \ (4x^3)^{12-r} \left(\frac{1}{2x}\right)^r$

$$= (-1)^r \ {}_{12}C_r \ 4^{12-r} \ x^{3(12-r)} \ \frac{1}{2^r x^r}$$

$$= \left\{ (-1)^r \ {}^{12}C_r \ \frac{4^{12-r}}{2^r} \right\} x^{36-3r-r}$$

ಇಲ್ಲಿ ಪುಸ್ತಾವರಣದಲ್ಲಿರುವ ಪದವು ಸ್ಥಿರ ಸಂಖ್ಯೆಯೆಂಬುದನ್ನು ಗಮನಿಸೋಣ. ಆದ್ದರಿಂದ, $(r+1)$ ನೆಯ ಪದವು x— ರಹಿತವಾಗಬೇಕಾದರೆ, $x^{36-3r-r} = 1$ ಆಗಲೇ ಬೇಕು, ಅಂದರೆ $36-3r-r = 0$ ಅಥವಾ $36 = 4r \Rightarrow r = 9$ ಆಗಲೇಬೇಕು. ಆದ್ದರಿಂದ $t_{9+1} = t_{10} =$ 10ನೇಯ ಪದವು x ರಹಿತ ವಾಗಿರುತ್ತದೆ. ಆ ಪದ $= (-1)^9 \ {}_{12}C_9 \ 4^{12-9} = 27.5.$

12.10 **ಉದಾ :** $\left(x^4 - \frac{1}{x^4}\right)^{15}$ ಎಂಬ ವಿಸ್ತರಣೆಯಲ್ಲಿ x^{32} ಇರುವ ಪದವು ಬರುತ್ತದೆಯೇ ? ಹಾಗಾದರೆ, ಅದರ ಗುಣಕವನ್ನು ಕಂಡುಹಿಡಿಯೋಣ.

$$\text{ಇಲ್ಲಿ, } t_{r+1} = (-1)^r \ {}_{15}C_r \ (x^4)^{15-r} \left(\frac{1}{x^3}\right)^r$$

$$= (-1)^r \ {}_{15}C_r \ \frac{x^{60-4r}}{x^{3r}}$$

$$= (-1)^r \ {}_{15}C_r \ x^{60-7r}$$

ಇದರಲ್ಲಿ x ನ ಘಾತಾಂಕ $= 60-7r = 32$ ಆದಾಗ, $(r+1)$ ನೇಯ ಪದದಲ್ಲಿ x^{32} ಬರುತ್ತದೆ. ಅಂದರೆ $60 - 32 = 7r$ ಅಥವಾ $28 = 7r$. $\therefore \ r = 4 \Rightarrow t_{r+1} =$ 5ನೇ ಪದ. ಆದ್ದರಿಂದ x^{32} ಇರುವ ಪದದ ಗುಣಕ $= (-1)^4 \ {}_{15}C_4 = 1365.$

12.11 **ಉದಾ :** $\left(1 - \frac{x^2}{2}\right)^{14}$ ಎಂಬ ವಿಸ್ತರಣೆಯ ಮಧ್ಯ ಪದವನ್ನು ಪಡೆಯೋಣ. ಇದರಲ್ಲಿ $14+1 = 15$ ಪದಗಳಿರುತ್ತವೆ. ಮತ್ತು $7+1+7 = 15$ ಎಂಬುದನ್ನು ಗಮನಿಸೋಣ. ಆದ್ದರಿಂದ ವಿಸ್ತರಣೆಯಲ್ಲಿ 8ನೆಯ ಪದವು ಮಧ್ಯ ಪದವೆಂಬುದು ತಿಳಿಯುತ್ತದೆ. ಆದ್ದರಿಂದ, ಎಂಟನೆಯ ಪದ,

$$t_8 = t_{7+1} = (-1)^7 \cdot {}_{14}C_7 \ (1)^{14-1} \left(\frac{x^2}{2}\right)^{7}$$

$$= \quad - {}_{14}C_7 \ \frac{x^{14}}{2^7} = - \frac{429}{16} x^{14}$$

ಅಭ್ಯಾಸ 12.1

1. ದ್ವಿಪದ ಪ್ರಮೇಯವನ್ನು ಪ್ರಯೋಗಿಸಿ ವಿಸ್ತರಿಸಿರಿ:

(i) $(1+x)^7$. (ii) $(x+a)^6$. (iii) $(x-3)^5$

(iv) $(3x+2y)^4$ (v) $(2x+y)^6$ (vi) $(2x-3y)^5$

(vii) $(a^{-1}+b^{2})^6$ (viii) $\left(\frac{a}{2b} - \frac{2b}{a}\right)^6$

(ix) $\left(\frac{x}{2} + \frac{y}{3}\right)^4$ (x) $\left(2x - \frac{1}{2}y\right)^5$

(xi) $(1-x)^n$.

2. ಸೂಚಿಸಿರುವ ಪದಗಳನ್ನು ಅತ್ಯಂತ ಸುಲಭರೂಪದಲ್ಲಿಡಿರಿ:

(i) $\left(\frac{x}{x} - \frac{y}{y}\right)^7$ ಇದರಲ್ಲಿ ಮಧ್ಯಪದಗಳು; (ii) $\left(x^2 - \frac{1}{2}\right)^{01}$, ಇದರಲ್ಲಿ ಮಧ್ಯಪದ :

(iii) $(x^2-x)^{23}$, ಇದರಲ್ಲಿ 21 ನೆಯ ಪದ, (iv) $(y-2)^7$, ಇದರಲ್ಲಿ ಮಧ್ಯಪದಗಳು;

(v) $\left(1 - \frac{1}{2}x^2\right)^{14}$, ಇದರಲ್ಲಿ ಮಧ್ಯ ಪದ;

(vi) $(2x-3)^{16}$, ಇದರಲ್ಲಿ 11 ನೆ ಪದ;

(vii) $\left(2x+\frac{1}{x}\right)^{11}$, ಇದರಲ್ಲಿ x^7 ಇರುವ ಪದ;

(viii) $\left(3+\frac{2}{x}\right)^{10}$, ಇದರಲ್ಲಿ ಮಧ್ಯಪದ;

(ix) $\left(2x-\frac{1}{x}\right)^{7}$, ಇದರಲ್ಲಿ x^5 ಇರುವ ಪದ;

(x) $\left(x-\frac{1}{x}\right)^{10}$, ಇದರಲ್ಲಿ x^{10} ಇರುವ ಪದ;

3. ಕೆಳಗಿನ ವಿಸ್ತರಣೆಗಳಲ್ಲಿ x ರಹಿತ ಪದಗಳನ್ನು ಕಂಡುಹಿಡಿಯಿರಿ :

(i) $\left(x-\frac{5}{x^3}\right)^8$. (ii) $\left(\sqrt{x}-\frac{2}{x^2}\right)^{10}$.

(iii) $\left(2x^2-\frac{1}{x^2}\right)^8$ (iv) $\left(x^2-\frac{1}{x}\right)^9$

(v) $(2x-2x^{-2})^{12}$.

(vi) $\left(x^2-\frac{2}{x}\right)^6$ (vii) $\left(x-\frac{2}{x}\right)^{2n}$

(viii) $\left(\frac{3}{2}x^2-\frac{1}{3x}\right)^9$ (ix) $\left(9x-\frac{1}{3\sqrt{x}}\right)^{18}$

4. ಕೆಳಗಿನ ವಿಸ್ತರಣೆಗಳಲ್ಲಿ ಸೂಚಿಸಿರುವ ಘಾತಗಳ ಗುಣಕಗಳನ್ನು ಬರೆಯಿರಿ :

(i) $(3x-2)^{15}$ ದಲ್ಲಿ x^9.

(ii) $\left(x^4-\frac{1}{x^3}\right)^{15}$ ದಲ್ಲಿ x^{32} ಮತ್ತು x^{-17}.

(iii) $(2+x)^{12}$ ದಲ್ಲಿ x^7.   (iv) $(x-2y)^{13}$ ದಲ್ಲಿ x^{11}.

(v) $(ax^4-bx)^9$ ದಲ್ಲಿ x^{18}.   (vi) $\left(2x-\frac{1}{2}\right)^7$ ದಲ್ಲಿ x^3.

(vii) $(2x^2-x)^{10}$ ದಲ್ಲಿ x^{16}.

(viii) $\left(y^2+\frac{C^3}{y}\right)$ ದಲ್ಲಿ y.

5. $(1-0.01)^5$, ಇದನ್ನು ವಿಸ್ತರಿಸಿರಿ ; ತನ್ಮೂಲಕ $(0.99)^5$ ಘಾತದ ಬೆಲೆಯನ್ನು ಮೂರು ದಶಮಾಂಶ ಸ್ಥಾನಗಳಿಗೆ ಸರಿಯಾಗಿ ಕಂಡುಹಿಡಿಯಿರಿ.

6. ದ್ವಿಪದ ಪ್ರಮೇಯವನ್ನು ಪಯೋಗಿಸಿ $(101)^3 = 10, 30, 301$ ಎಂದು ತೋರಿಸಿರಿ.

7. ದ್ವಿಪದ ಪ್ರಮೇಯದಿಂದ $(1.01)^4$ ಮತ್ತು $(1.03)^8$ ಎಂಬ ಘಾತಗಳ ಬೆಲೆಗಳನ್ನು 4 ದಶಮಾಂಶ ಸ್ಥಾನಗಳಿಗೆ ಸರಿಯಾಗಿ ಕಂಡುಹಿಡಿಯಿರಿ.

[ಸೂಚನೆ : 5ನೇ ಪ್ರಶ್ನೆಯನ್ನು ನೋಡಿರಿ.]

8. $(\sqrt{5}+1)^5-(\sqrt{5}-1)^5 = 352$ ಎಂದು ಸಾಧಿಸಿರಿ.

9. $(2+\sqrt{3})^7-(2-\sqrt{3})^7 = 10084$ ಎಂದು ಸಾಧಿಸಿರಿ.

10. $\frac{1.3.5.7...(2n-1)}{n!}$ ಎಂಬ ಪದವು $(x+\frac{1}{x})^{2n}$ ಘಾತದ ವಿಸ್ತರಣೆಯಲ್ಲಿ ಬರುತ್ತದೆಂದು ಸಾಧಿಸಿರಿ.

11. $n\left(y^2 - \frac{y^3}{x}\right)^{10}$ ಎಂಬ ವಿಸ್ತರಣೆಯಲ್ಲಿ x^{12} ಇರುವ ಪದವು ಇರುವುದೇ ಅಥವಾ ಇಲ್ಲವೇ ನಿರ್ಧರಿಸಿರಿ.

12. $(1+x)^n$ ಎಂಬ ವಿಸ್ತರಣೆಯಲ್ಲಿನ ಮೂರು ಪದಗಳಲ್ಲಿನ ಗುಣಕಗಳು A. P. ಯಲ್ಲಿರುವಾಗ $(n-2)$ ಒಂದು ಪೂರ್ಣವರ್ಗವೆಂದು ಸಾಧಿಸಿರಿ.

13. $\left(x + \frac{1}{x}\right)^n$ ದಲ್ಲಿ x^r ನ ಗುಣಕ $\dfrac{n!}{\{\frac{1}{2}(n-r)\}!\,\{\frac{1}{2}(n+r)\}!}$ ಎಂದು ಸಾಧಿಸಿರಿ.

12.12 n ಧನ ಪೂರ್ಣಾಂಕವಾದಾಗ $(1+x)^n$ ನಲ್ಲಿ ಬರುವ ಗರಿಷ್ಠ ಪದವನ್ನು ಕಂಡುಹಿಡಿಯುವ ಕ್ರಮ :

$$(1+x)^n = \sum_{r=0}^{n} {}_nC_r \, (1)^{n-r} x^r = \sum_{r=0}^{n} {}_nC_r \, x^r$$

$$= {}_nC_0 x^0 + {}_nC_1 x + \dots + {}_nC_r \, x^r + \dots + {}_nC_n \, x^n \qquad (12.12.1)$$

ಮೇಲಿನ ವಿಸ್ತರಣೆಯ ಬಲಬದಿಯಲ್ಲಿ ಬರುವ ${}_nC_0$, ${}_nC_1$, ${}_nC_2$, ${}_nC_r$,…. , ${}_nC_r$, ……. ಗಳನ್ನು **n ನೇ ಪ್ರಮಾಣದ ದ್ವಿಪದ ಗುಣಕಗಳೆಂದು** ಕರೆಯುತ್ತೇವೆ. ಇವುಗಳನ್ನು ಇನ್ನು ಮುಂದೆ C_0, C_1, C_2……. C_r ….,C_n ಎಂಬ ಸಂಕೇತಗಳಿಂದ ಸೂಚಿಸುತ್ತೇವೆ. ವಿಸ್ತರಣೆಯ r ನೆಯ ಪದವನ್ನು t_r ಎಂದು ಸೂಚಿಸಿದರೆ,

$$\frac{t_{r+1}}{t_r} = \frac{{}_nC_r \, x^r}{{}_nC_{r-1} x^{r-1}} = \frac{{}_nC_r}{{}_nC_{r-8}} . x$$

$$= \frac{(-r+1)}{r} . \frac{{}_nC_{r-1}}{{}_nC_{r-1}} . x \quad \text{[ಅ-11.2.11ನೋಡಿರಿ]}$$

$$= \frac{n-r+1}{r} \cdot x$$

$$\therefore \quad \frac{t_{r+1}}{t_r} \gtreqless 1, \text{ ಆ ಆ ಮಾತ್ರ}, \quad \frac{n-r+1}{r} . x \gtreqless 1 \ldots (12.2.2)$$

x ಒಂದು ನಿರ್ದಿಷ್ಟ ಸಂಖ್ಯೆಯಾದಾಗ, (12. 12. 2)ರ ಸಹಾಯದಿಂದ, (12. 12. 1)ರ ಗರಿಷ್ಠ ಪದವನ್ನು ಕಂಡುಹಿಡಿಯಬಹುದು.

12·13 **ಉದಾ** : $(3+2x)^8$ ವಿಸ್ತರಣೆಯಲ್ಲಿ $x = \frac{1}{2}$ ಆದಾಗ, ಗರಿಷ್ಠ ಪದವನ್ನು ಕಂಡುಹಿಡಿಯೋಣ.

ಈಗ $(3+2x)^8 = \{ 3(1+\frac{2}{3}x) \}^8$

$= 3^8 (1+\frac{2}{3}x)^8$

$= 3^8 (1+y)^8$, ಇಲ್ಲಿ $y = \frac{2}{3}x$

$x = \frac{1}{2}$ ಆದಾಗ, $y = \frac{2}{3} \cdot \frac{1}{2} = \frac{1}{3}$

ಈಗ $(1+y)^8$ನಲ್ಲಿ ಬರುವ ಗರಿಷ್ಠ ಪದವನ್ನು ಕಂಡುಹಿಡಿಯೋಣ. ಇದರ ವಿಸ್ತರಣೆಯಲ್ಲಿ ಬರುವ rನೆಯ ಪದವನ್ನು t_r ಎಂದು ಕರೆದರೆ,

$$\therefore \frac{t_{r+1}}{t_r} \gtreqless 1, \text{ ಆ ಆ ಮಾತ್ರ}, \quad \frac{8-r+1}{r} y \gtreqless 1$$

$$\Rightarrow \quad ,, \quad - \quad ,, \quad - \quad \frac{9-r}{r} \cdot \frac{1}{3} \gtreqless 1$$

$$\Rightarrow \quad ,, \quad - \quad ,, \quad - \quad 9-r \gtreqless 3r$$

$$\Rightarrow \quad ,, \quad - \quad ,, \quad - \quad 9 \lesseqgtr 4r$$

$$\therefore \quad \frac{t_{r+1}}{t_r} \Leftrightarrow \frac{9}{4} = 2\frac{1}{4} \gtreqless r.$$

$$\therefore \quad r=1 \text{ ಆದಾಗ, } 2\frac{1}{4} > 1 \Rightarrow t_2 > t_1$$

$$r=2 \quad ,, \quad 2\frac{1}{4} > 2 \Rightarrow t_3 > t_2$$

$$r=3 \quad ,, \quad 2\frac{1}{4} < 3 \Rightarrow t_4 < t_3$$

$$r=4 \quad ,, \quad 2\frac{1}{4} < 4 \Rightarrow t_5 < t_4$$

$$\therefore \quad \dots\dots t_5 < t_4 < t_3 > t_2 > t_1.$$

ಆದ್ದರಿಂದ t_3 ಅರ್ಥಾತ್ ಮೂರನೆಯ ಪದವು ಗರಿಷ್ಠ ಪದವೆಂಬುದು ಗೊತ್ತಾಗುತ್ತದೆ. ಈ ಪದದ ಬೆಲೆ :

$$t_{2+1} = {}_8C_2\, y^2 = \frac{8.7}{1.2}\,\frac{1}{3^2}$$

$$\text{ಆದ್ದರಿಂದ ಬೇಕಾದ ಗರಿಷ್ಠಪದ} = \frac{3^8 \times 8 \times 7}{1 \times 2} \times \frac{1}{3^2} = 20412.$$

12.14 nನೇ ಪ್ರಮಾಣದ ದ್ವಿಪದ ಗುಣಕಗಳೊಡನೆ ಇರುವ ಸಂಬಂಧಗಳು :

$(1+x)^n = C_0 + C_1x + C_2x^2 + C_3x^3 + \dots + C_nx^n \dots (12.14.1)$ ಎಂಬುದನ್ನು 12.12 ರಲ್ಲಿ ಕಂಡಿದ್ದೇವೆ. ಇದರಲ್ಲಿ ಕ್ರಮಾನುಗತವಾಗಿ, $x=1, -1$ ಎಂದು ಆದೇಶಿಸೋಣ ಇದರಿಂದ :

$$(1+1)^n = 2^n = C_0 + C_1 + C_2 + \dots + C_n \quad \dots (12.14.2)$$

$$(1-1)^n = 0^n = C_0 - C_1 + C_2 - C_3 + \dots + (-1)^n C_n$$

$$\therefore \quad C_0+C_2+C_4+.... = C_1+C_3+C_5+ ....$$

ಎರಡು ಬದಿಗೂ $C_0+C_2+C_4+ ....$ ಎಂಬುದನ್ನು ಕೂಡುವುದರಿಂದ :

$$2C_0+2C_2+2C_4+ .... = C_0+C_1+C_2+C_3+C_4+ C_5+ .... = 2^n \quad [(12.14.2)\text{ರಿಂದ}]$$

$$\therefore \ 2(C_0+C_2+C_4+ ....) = 2^n$$

$$\Rightarrow \ C_0+C_2+C_4+ .... = \frac{2n}{2} = 2^{n-1}$$

$$\therefore \ C_0+C_2+C_4+ .... = C_1+C_3+C_5+ ... = 2^{n-1}$$

12.15 **ಉದಾ :** $C_0^2+C_1^2+C_2^2+ .... + C_n^2 = \dfrac{(2n)!}{n!n!}$ ಎಂದು ಸಾಧಿಸೋಣ.

$$(1+x)^n = C_0+C_1x+C_2x^2+ \cdot\cdot +C_{n-1}x^{n-1}+C_nx^n,$$

ಮತ್ತು $(x+1)^n = C_0x^n+C_1x^{n-1}+C_2x^{n-2}+ .... +C_{n-1}x+C_n.$

ಮೇಲಿನ ಸಮೀಕರಣಗಳಲ್ಲಿ ಅನುಗತ ಬದಿಗಳನ್ನು ಗುಣಿಸಿ ಸಮಗೊಳಿಸುವುದರಿಂದ :

$$(1+x)^n(x+1)^n = (C_0+C_1x+ .... +C_nx^n)(C_0x^n + C_1x^{n-1} + ... +C_0)$$

ಎರಡು ಬದಿಯಲ್ಲಿನ x^n ಇರುವ ಪದದ ಗುಣಕಗಳನ್ನು ಸಮಗೊಳಿಸೋಣ.

ಈಗ ಎಡಬದಿ $= (1+x)^n(1+x)^n = (1+x)^{n+n} = (1+x)^{2n},$

ಎಂಬುವನ್ನು ಗಮನಿಸೋಣ. ಇದರಲ್ಲಿ x^n ದ ಗುಣಕ =

$$_{2n}C_n = \frac{(2n)!}{n!(2n-n)!} = \frac{(2n)!}{n!\,n!} \quad .... \quad [ಏಕೆ?]$$

ಬಲಬದಿಯಲ್ಲಿ x^n ದ ಗುಣಕ $= C_0^2 + C_1^2 + C_2^2 + \ .... \ + C_n^2$

$$\therefore \ C_0^2 + C_1^2 + C_2^2 + \ .... \ + C_n^2 = \frac{(2n)!}{n!\,n!}$$

12.16 ಉದಾ : $C_0 - 2 \cdot C_1 + 3 \cdot C_2 - \ .... \ + (-1)^n (n+1) \cdot C_n$ $= 0$ ಎಂದು ಸಾಧಿಸೋಣ.

ಎಡಬದಿ $= C_0 - (C_1 + 1 \cdot C_1) + (C_2 + 2 \cdot C_2) - (C_3 + 3 \cdot C_3) + ... + (-1)^n (C_n + n \cdot C_n)$

$$= \{ C_0 - C_1 + C_2 - C_3 + \ .... \ + (-1)^n C_n \} - 1 \cdot C_1 + 2 \cdot C_2 - 3 \cdot C_3 + \ .... \ + (-1)^n \ n \cdot C_n$$

$$= \{(1-1)^n\} - \{ C_1 - 2 \cdot C_2 + 3 \cdot C_3 - \ .... \ (-1)^{n-1} \ {}_nC_n \}$$

$$= -\left\{ \frac{n - 2n(n-1)}{1 \cdot 2} + \frac{3n(n-1)(n-2)}{1 \cdot 2 \cdot 3} - \ .... \ + (-1)^{n-1} \cdot n \right\}$$

$$= -n \left\{ 1 - \frac{(n-1)}{1} + \frac{(n-1)(n-2)}{1 \cdot 2} - \ .... \ + (-1)^{n-1} \right\}$$

$= -n \{ (1-1)^{n-1} \} = 0 =$ ಬಲಬದಿ.

12·17 ಉದಾ : $C_0+2\cdot C_1+3\cdot C_2+ \ldots +(n+1)\cdot C_n =$ $(n+2)2^{n-1}$ ಎಂದು ಸಾಧಿಸೋಣ.

$$S = C_0+2\cdot C_1+3\cdot C_2+\ldots+(n+1)C_n$$ ಅಂದುಕೊಳ್ಳೋಣ.

$C_r = C_{n-r}$ ಎಂಬುದನ್ನು ಉಪಯೋಗಿಸಿ, ಬಲಬದಿಯನ್ನು ಹಿಮ್ಮುಖವಾಗಿ ಬರೆಯುವುದರಿಂದ :

$$S = (n+1)\cdot C_0+n\cdot C_1+(n-1)\cdot C_2+\ldots+C_n$$ ಮೇಲಿನ ಎರಡು ಸಮೀಕರಣಗಳ ಅನುಗತ ಬದಿಗಳನ್ನು ಕೂಡುವುದರಿಂದ :

$$2S = (n+2)\cdot C_0 + (n+2)\cdot C_1 + (n+2)\cdot C_2 + \ldots + (n+2)\cdot C_r$$

$$= (n+2)(C_0 + C_1 + C_2 + \ldots + C_n$$

$$= (n+2)\cdot 2^n$$ [ಏಕೆ ?]

$$S = (n+2)\cdot\frac{2^n}{2} = (n+2)\cdot 2^{n-1}$$

12.18 ಉದಾ : $C_0 C_r + C_1 C_{r+1} + \ldots + C_{n-r} C_n$

$$= \frac{(2n)!}{(n-r)!\,(n+r)!}$$ ಎಂದು ಸಾಧಿಸೋಣ.

(i) $${}_{2n}C_{n+r} = \frac{(2n)!}{(n+r)!\,(2n-n-r)!}$$

$$= \frac{(2n)!}{(n+r)!\,(n-r)!}$$ ಮತ್ತು

(ii) $(1+x)^{2n}$ ದಲ್ಲಿ x^{n+r} ಪದದ ಗುಣಕ ${}_{2n}C_{n+r}$ ಎಂಬು ವುಗಳನ್ನು ಗಮನಿಸೋಣ. ಈಗ

$$(1+x)^n = C_0 + C_1x + C_2x^2 + \dots + C_r\, x^r + C_{n+1}\, x^{r+1} + \dots + C_n\, x^n .$$

$$(x+1)^n = C_0\, x^n + C_1\, x^{n-1} + \dots + C_{n-r}\, x^r + C_n$$

ಮೇಲಿನ ಸಮೀಕರಣಗಳ ಎಡಬದಿಗಳನ್ನು ಗುಣಿಸಿದರೆ $(1+x)^{2n}$ ಬರುತ್ತದೆ. ಆದ್ದರಿಂದ ಅನುಗತ ಬದಿಗಳನ್ನು ಗುಣಿಸಿ, ಅವುಗಳಲ್ಲಿ ಬರುವ x^{n+r} ಪದದ ಗುಣಕಗಳನ್ನು ಸಮಗೊಳಿಸೋಣ.

$${}_{2n}C_{n+r} = C_0\, C_r + C_1\, C_{r+1} + \dots + C_{n-r}\, C_n .$$

ಅಭ್ಯಾಸ 12.2

1. ಇವುಗಳ ವಿಸ್ತರಣೆಯಲ್ಲಿ ಬರುವ ಸಂಖ್ಯಾತ್ಮಕ ಗರಿಷ್ಠ ಪದ ಅಥವಾ ಪದಗಳನ್ನು ಕಂಡುಹಿಡಿಯಿರಿ.

(i) $(1+x)^{12}$ ಮತ್ತು $x = \frac{5}{4}$.

(ii) $(4+3y)^{25}$ ಮತ್ತು $y=4$.

(iii) $\left(\frac{3x}{4} - \frac{2y}{3}\right)^{19}$ ಮತ್ತು $x=1$, $y=3$.

(iv) $(1-x)^{11}$ ಮತ್ತು $x = \frac{1}{3}$.

ಸೂಚನೆ : $C_0, C_1, C_2, \ldots, C_n$ ಗಳು nನೇ ಪ್ರಮಾಣದ ದ್ವಿಪದ ಗುಣಕಗಳನ್ನು ಸೂಚಿಸಿದರೆ, ಕೆಳಗಿನವುಗಳನ್ನು ಸಾಧಿಸಿ:

2. $C_1+3C_2+2C_3+\ldots+nC_n = n.2^{n-1}$

3. $C_0+\frac{C_1}{2}+\frac{C_2}{3}+\ldots+\frac{C_n}{n+1}=\frac{2^{n+1}-1}{n+1}$.

4. $C_0-\frac{C_1}{2}+\frac{C_2}{3}-\ldots+(-1)^n\frac{C_n}{n+1}=\frac{1}{n+1}$

5. $\frac{C_1}{C_0}+\frac{2C_2}{C_1}+\frac{3C_3}{C_2}+\ldots+\frac{nC_n}{C_{n-1}}=\frac{n(n+1)}{2}$.

6. $(C_0+C_1)(C_1+C_2)(C_2+C_3)\ldots(C_{n-1}+C_n)$

$$=\frac{(n+1)^n}{n!}C_1C_2C_3\ldots C_n$$

7. $C_0C_1+C_1C_2+C_2C_3+\ldots+C_{n-1}C_n$

$$=\frac{(2n)!}{(n+1)!(n-1)!}$$

8. $(1+C_1+C_2+\ldots+C_n)^2 = 1+{}_{2n}C_1 + {}_{2n}C_2+\ldots+{}_{2n}C_n$

9. $\frac{C_0}{1}+\frac{C_2}{3}+\frac{C_4}{5}+\ldots=\frac{2^n}{n+1}$

10. $\frac{C_1}{2}+\frac{C_3}{4}+\frac{C_5}{6}+\ldots=\frac{2^n-1}{n+1}$

11. $C_0+3C_1+5C_2+\dots+(2n+1)C_n = (n+1)2^n$

12. $2C_0+6C_1+10C_2+14C_3+\dots+(4n+2)C_n$
$$= (n+1)2^{n+1}$$

13. $2C_0+5C_1+8C_2+\dots+(3n+2)C_n$
$$= (3n+4)2^{n-1}$$

14. $C_1-2C_2+3C_3-\dots+n(-1)^{n-1}C_n = 0$

15. $C_0C_2+C_1C_3+C_2C_4+\dots C_{n-2}\,C_n$
$$= \frac{(2n)!}{(n+2)!\ n-2)!}$$

16. n ಕ್ರಮಾನುಗತವಾಗಿ ಸಮಸಂಖ್ಯೆ ಅಥವಾ ಬೆಸಸಂಖ್ಯೆಯಾದಾಗ
$C_0^2-C_1^2+C_2^2-\dots+(-1)^n\ C^2_n$

$= \dfrac{(-1)^{n/2}\times n!}{\left(\frac{n}{2}\right)!\ \left(\frac{n}{2}\right)!}$ ಅಥವಾ 0 ಎಂದು ಸಾಧಿಸಿರಿ.

13

ಮಂಡಲಗಳು ಮತ್ತು ನಿರ್ಧಾರಕಗಳು

13.1 **ವ್ಯಾಖ್ಯೆ :** a_{ij} , $i = 1,2,3, \ldots\ldots, m$ ಮತ್ತು $j = 1,2,3, \ldots\ldots, n$ ಎಂಬ $m \times n$ ಸಂಖ್ಯೆಗಳನ್ನು m ಅಡ್ಡಸಾಲು ಮತ್ತು n ನೀಟ ಸಾಲುಗಳಲ್ಲಿ (13.1.1) ರಲ್ಲಿರುವಂತೆ ಅಳವಡಿಸಿದಾಗ ದೊರೆಯುವ ವಿನ್ಯಾಸವನ್ನು $m \times n$ ವಿಧದ ಮಂಡಲನೆಂದು ಕರೆಯುತ್ತೇವೆ.

$$\begin{bmatrix} a_{11} & a_{12} & a_{13} & \cdots & a_{1j} & \cdots & a_{1n} \\ a_{21} & a_{22} & a_{23} & \cdots & a_{2j} & \cdots & a_{2n} \\ \cdot & \cdot & \cdot & & \cdot & & \cdot \\ \cdot & \cdot & \cdot & & \cdot & & \cdot \\ a_{i1} & a_{i2} & a_{i3} & \cdots & a_{ij} & \cdots & a_{in} \\ \cdot & \cdot & \cdot & & \cdot & & \cdot \\ \cdot & \cdot & \cdot & & \cdot & & \cdot \\ a_{m1} & a_{m2} & a_{m3} & \cdots & a_{mj} & \cdots & a_{mn} \end{bmatrix} \quad \ldots\ldots (13.1.1)$$

ಉದಾಹರಣೆಗಳು :

(i) [5] : ಇದು 1×1 ವಿಧದ ಮಂಡಲ; ಇದರಲ್ಲಿ 1 ಅಡ್ಡಸಾಲು ಮತ್ತು 1 ನೀಟ ಸಾಲು ಇವೆ.

(ii) $[2\ 3\ 4]$: ಇದು 1×3 ವಿಧದ ಮಂಡಲ; ಇದರಲ್ಲಿ 1 ಅಡ್ಡಸಾಲು ಮತ್ತು 3 ನೀಟಸಾಲುಗಳು ಇವೆ.

(iii) $\begin{bmatrix} 0 \\ 2 \end{bmatrix}$: ಇದು 2×1 ವಿಧದ ಮಂಡಲ; ಇದರಲ್ಲಿ 2 ಅಡ್ಡಸಾಲುಗಳು ಮತ್ತು 1 ನೀಟಸಾಲು ಇವೆ.

(iv) $\begin{bmatrix} 1 & 2 & 3 \\ 2 & 3 & 4 \\ 3 & 4 & 5 \end{bmatrix}$: ಇದು 3×3 ವಿಧದ ಮಂಡಲ; ಇದರಲ್ಲಿ ಅಡ್ಡಸಾಲು [illegible] ಗಳ ಸಂಖ್ಯೆ = ನೀಟಸಾಲುಗಳ ಸಂಖ್ಯೆ = 3 ಎಂಬುದನ್ನು ಗಮನಿಸೋಣ.

ಈ ಮಂಡಲವನ್ನು 3ನೇ ವಿಧದ ಅಥವಾ ಪ್ರಮಾಣದ ಚೌಕ ಮಂಡಲವೆಂದು ಕರೆಯುತ್ತೇವೆ. ಇದೇ ರೀತಿ n ಅಡ್ಡಸಾಲು ಮತ್ತು n ನೀಟಸಾಲು ಇರುವ ಮಂಡಲವನ್ನು nನೇ ಪ್ರಮಾಣದ ಚೌಕ ಮಂಡಲವೆಂದು ಕರೆಯುತ್ತೇವೆ.

ಟೀಕೆ : $m = n$ ಆದಾಗ (13.1.1) ರಲ್ಲಿರುವ **ಮಂಡಲವು nನೇ ಪ್ರಮಾಣದ ಚೌಕಮಂಡಲವಾಗುತ್ತದೆಂಬುದನ್ನು ಗಮನಿಸೋಣ.**

(v) $\begin{bmatrix} 2 & 3 \\ 4 & \end{bmatrix}$, $\begin{bmatrix} & 1 \\ 2 & 3 \end{bmatrix}$, $\begin{bmatrix} 1 & 2 & 3 & 4 \\ & 5 & 6 & \end{bmatrix}$:

ಇವುಗಳಲ್ಲಿ ಯಾವೊಂದೂ ಮಂಡಲದ ಉದಾಹರಣೆಯಾಗುವುದಿಲ್ಲ.

13.2 **ಟೀಕೆಗಳು :** (i) (13.1.1)ರಲ್ಲಿರುವ ಮಂಡಲವನ್ನು ರಚಿಸಲು ಉಪಯೋಗಿಸುವ a_{11}; a_{12}, a_{13},...., a_{ij} ...., a_{mn} ಎಂಬ $m \times n$ ಸಂಖ್ಯೆಗಳನ್ನು ದತ್ತ ಮಂಡಲದ **ಮೂಲಾಂಶ**ಗಳೆಂದು ಕರೆಯುತ್ತೇವೆ. ಮೇಲೆ ಕೊಟ್ಟಿರುವ ಉದಾಹರಣೆ (ii) ರಲ್ಲಿ ಮಂಡಲದ ಮೂಲಾಂಶಗಳು 2, 3, ಮತ್ತು 4 ಎಂಬುದನ್ನು ಗಮನಿಸೋಣ.

(ii) (13.1.1) ರಲ್ಲಿರುವ ಮಂಡಲದ i ನೆಯ ಅಡ್ಡಸಾಲು ಮತ್ತು j ನೆಯ ನೀಟಸಾಲು, ಇವೆರಡರಲ್ಲೂ ಸಾಮಾನ್ಯವಾಗಿ ಬರುವ a_{ij} ಎಂಬ ಮೂಲಾಂಶವನ್ನು ಪರಿಶೀಲಿಸೋಣ. ಈ ಮೂಲಾಂಶವನ್ನು ಬರೆಯಲು a ಅಕ್ಷರದ ಬುಡಕ್ಕೆ i ಮತ್ತು j ಎಂಬ ಸಂಖ್ಯೆಗಳನ್ನು ಹಚ್ಚಿದ್ದೇವೆ. **ಹೀಗೆ ಹಚ್ಚಿರುವ i, j ಸಂಖ್ಯೆಗಳನ್ನು aದ ಉಪಲಿಪಿಗಳೆಂದು ಕರೆಯುತ್ತೇವೆ. ಯಾವುದೇ ಒಂದು ಮೂಲಾಂಶದಲ್ಲಿರುವ ಪ್ರಥಮ ಮತ್ತು ದ್ವಿತೀಯ ಉಪಲಿಪಿಗಳು, ಅನುಕ್ರಮವಾಗಿ, ದತ್ತ ಮೂಲಾಂಶದ ಅಡ್ಡಸಾಲು ಮತ್ತು ನೀಟಸಾಲುಗಳ ಸಂಖ್ಯೆಗಳನ್ನು ಸೂಚಿಸುತ್ತವೆಂಬುದನ್ನು** ನೆನಪಿನಲ್ಲಿಡೋಣ.

ಈಗ a_{23} ಮೂಲಾಂಶವನ್ನು ಪರಿಶೀಲಿಸೋಣ. ಇದರಲ್ಲಿ: (i) ಪ್ರಥಮ ಉಪಲಿಪಿ 2; ಅಂದರೆ a_{23} 2ನೇ ಅಡ್ಡಸಾಲಿನಲ್ಲಿದೆಯೆಂದಾಯ್ತು. (ii) ದ್ವಿತೀಯ ಉಪಲಿಪಿ 3; ಅಂದರೆ a_{23} 3ನೇ ನೀಟಸಾಲಿನಲ್ಲಿದೆಯೆಂದಾಯ್ತು. ಈ ಅಂಶಗಳನ್ನು ಸುಲಭವಾಗಿ ತಾಳೆನೋಡಬಹುದು.

(iii) ಇನ್ನುಮುಂದೆ ಮಂಡಲದ iನೆಯ ಅಡ್ಡಸಾಲು ಮತ್ತು jನೆಯ ನೀಟಸಾಲುಗಳಲ್ಲಿ ಸಾಮಾನ್ಯವಾಗಿರುವ ಮೂಲಾಂಶವನ್ನು (i,j) ನೆಯ ಮೂಲಾಂಶವೆಂದು ಕರೆಯುತ್ತೇವೆ. ಮೇಲಿನ ಉದಾಹರಣೆ (iv) ರಲ್ಲಿರುವ 3×3 ಚೌಕಮಂಡಲದಲ್ಲಿ :

(2, 3) ನೆಯ ಮೂಲಾಂಶ = 4,

(1, 3) ,, = 3,

ಮತ್ತು (3, 2) ,, = 4,

ಎಂಬುದನ್ನು ಗಮನಿಸೋಣ.

(iv) ಇನ್ನುಮುಂದೆ ಮಂಡಲಗಳನ್ನು A, B, C ಎಂಬ ದೊಡ್ಡ ಅಕ್ಷರಗಳಿಂದಲೂ ಮತ್ತು ಇವುಗಳ ಮೂಲಾಂಶಗಳನ್ನು ಸಹಗಾಮಿ ಸಣ್ಣ ಅಕ್ಷರಗಳಿಂದಲೂ ಸೂಚಿಸುತ್ತೇವೆ.

ಆದ್ದರಿಂದ (13.1.1) ರಲ್ಲಿರುವ ಮಂಡಲವನ್ನು A ಅಕ್ಷರದಿಂದ ಸೂಚಿಸುತ್ತೇವೆ. ಸಂಕೇತದಲ್ಲಿ ಈ ಮಂಡಲವನ್ನು,

$$A = [\ a_{ij}\ ]_{m \times n}$$

ಎಂದು ಬರೆಯುತ್ತೇವೆ. ಇದರಿಂದ :

$$[\ a_{ij}\ ]_{1 \times 1} = [a_{11}]$$

$$[\ a_{ij}\ ]_{2 \times 2} = \begin{bmatrix} a_{11} & a_{12} \\ a_{21} & a_{22} \end{bmatrix}$$

$$[a_{ij}]_{3 \times 4} = \begin{bmatrix} a_{11} & a_{12} & a_{13} & a_{14} \\ a_{21} & a_{22} & a_{23} & a_{24} \\ a_{31} & a_{32} & a_{33} & a_{35} \end{bmatrix}$$

13.3 ಉದಾ : (i) $a_{ij} = i \times j$ ಆದಾಗ $[\ a_{ij}\ ]_{2 \times 3}$ ಮಂಡಲವನ್ನು ಬರೆಯೋಣ.

ಈಗ $a_{11} = 1 + 1 = 2$, $a_{12} = 1 + 2 = 3$, ಇತ್ಯಾದಿ.

$$\therefore [\ a_{ij}\ ]_{2 \times 3} = \begin{bmatrix} a_{11} & a_{12} & a_{13} \\ a_{21} & a_{22} & a_{23} \end{bmatrix}$$

$$= \begin{bmatrix} 1+1 & 1+2 & 1+3 \\ 2+1 & 2+2 & 2+3 \end{bmatrix}$$

$$= \begin{bmatrix} 2 & 3 & 4 \\ 3 & 4 & 5 \end{bmatrix}$$

(ii) $a_{ij} = + \sqrt{i+j}$ ಎಂದಿರಲಿ. $[\ a_{ij}\ ]_{3 \times 4}$ ಮಂಡಲವನ್ನು ಬರೆಯೋಣ.

ಈಗ $a_{11} = \sqrt{1+1} = 2$, $a_{12} = \sqrt{1+2} = \sqrt{3}$, ...

$$\therefore [\ a_{ij}\ ]_{3 \times 4} = \begin{bmatrix} \sqrt{12} & \sqrt{3} & 2 & \sqrt{5} \\ \sqrt{3} & 2 & \sqrt{5} & \sqrt{6} \\ 2 & \sqrt{5} & \sqrt{6} & \sqrt{7} \end{bmatrix}$$

13.4 **ಟೀಕೆ :** (13.1.1)ರಲ್ಲಿರುವ ಮಂಡಲವನ್ನು ಕೆಳಗಿನಂತೆ ಬರೆಯುವ ಪದ್ಧತಿಯೂ ರೂಢಿಯಲ್ಲಿದೆ.

$$\left\| \begin{matrix} a_{11} & a_{12} & \cdots & a_{1n} \\ a_{21} & a_{22} & \cdots & a_{2n} \\ \vdots & \vdots & & \vdots \\ a_{m1} & a_{m2} & \cdots & a_{mn} \end{matrix} \right\| \text{ ಅಥವಾ } \begin{bmatrix} a_{11} & a_{12} & \cdots & a_{1n} \\ a_{21} & a_{22} & \cdots & a_{2n} \\ \vdots & \vdots & \vdots & \vdots \\ a_{m1} & a_{m2} & \cdots & a_{mn} \end{bmatrix}$$

ಆದರೆ, ಈ ಪುಸ್ತಕದಲ್ಲಿ (13.1.1)ರಲ್ಲಿ ಕೊಟ್ಟಿರುವ ಸಂಕೇತವನ್ನು ಮಾತ್ರ ಉಪಯೋಗಿಸುತ್ತೇವೆ.

ಅಭ್ಯಾಸ 13.1

ಸೂಚನೆ : ಕೆಳಗಿನವುಗಳು ಮಂಡಲಗಳು ಹೌದೇ ಅಲ್ಲವೇ ನಿರ್ಧರಿಸಿರಿ.

(1 ರಿಂದ 10 ಲೆಕ್ಕಗಳು)

1. $[2]$. 2. $[2 \quad 3 \quad 4]$. 3. $\begin{bmatrix} x & y & z \\ -x & o & 2y \end{bmatrix}$

4. $\begin{bmatrix} 1 & 0 \\ 0 & 1 \end{bmatrix}$ 5. $\begin{bmatrix} 1 & 0 & 0 \\ 0 & 1 & 0 \\ 0 & 0 & 1 \end{bmatrix}$

6. $\begin{bmatrix} 0 & 0 & 0 \\ 0 & 0 & 0 \\ 0 & 0 & 0 \end{bmatrix}$ 7. $\begin{bmatrix} 1 & 0 & 0 & 0 \\ 0 & 1 & 0 & 0 \\ 0 & 0 & 1 & 0 \\ 0 & 0 & 0 & 1 \end{bmatrix}$

8. $\begin{bmatrix} 2 & 3 & 4 & 5 \\ & 6 & 7 & \\ & & 9 & \end{bmatrix}$ 9. $\begin{bmatrix} 1 & & \\ 2 & 3 & \\ 4 & 5 & 6 \end{bmatrix}$

10. $\begin{bmatrix} \quad \end{bmatrix}$

11. $a_{ij} = ij$ ಆದಾಗ $[a_{ij}]_{2 \times 3}$ ಮಂಡಲವನ್ನು ಬರೆಯಿರಿ.

12. $b_{ij} = i+j - i \times j$ ಆದಾಗ $[b_{ij}]_{2 \times 2}$ ಮಂಡಲವನ್ನು ಬರೆಯಿರಿ.

13. $S_{ij} = \begin{cases} 1, & i=j \\ 0, & i=j \end{cases}$ **ಆದಾಗ** $[S_{ij}]_{3 \times 3}$ **ಮಂಡಲವನ್ನು ಬರೆಯಿರಿ.**

14. $k_{ij} = 0$ ಆದಾಗ, $[k_{ij}]_{3 \times 3}$ ಮಂಡಲವನ್ನು ಬರೆಯಿರಿ.

13.5 **ಮಂಡಲಗಳಲ್ಲಿ ಸಮತ್ವ :** $[a_{ij}]_{m \times n}$ ಮತ್ತು $[b_{ij}]_{m \times n}$ **ಮಂಡಲಗಳಲ್ಲಿ,** i, j**ಗಳ ಎಲ್ಲಾ ಬೆಲೆಗಳಿಗೂ**

$$a_{ij} = b_{ij}$$

ಆದರೆ, ಮತ್ತು ಆದಾಗ ಮಾತ್ರ

$$[a_{ij}]_{m \times n} = [b_{ij}]_{m \times n}$$

ಎಂದೂ ಮತ್ತು ಹೀಗಿಲ್ಲದಿರುವಾಗ

$$[a_{ij}]_{m \times n} \neq [b_{ij}]_{m \times n}$$

ಎಂದು ನಿರೂಪಿಸುತ್ತೇವೆ.

ಉದಾಹರಣೆಗಳು :

(i) $$\begin{bmatrix} 4 & 2 \\ 9 & 16 \end{bmatrix} = \begin{bmatrix} 2^2 & 2 \\ 3^2 & 4^2 \end{bmatrix}$$

(ii) $[2x \quad 3y] = [6 \quad 9]$, **ಆ. ಆ. ಮಾತ್ರ.**
$x = 3$ **ಮತ್ತು** $y = 3$.

$$\text{(iii)}\quad \begin{bmatrix} 1 & 2 & 3 \\ 4 & 5 & 6 \\ 7 & 9 & 10 \\ 0 & 0 & 1 \end{bmatrix} \neq \begin{bmatrix} 1 & 2 & 3 \\ 4 & 5 & 6 \\ 7 & 9 & 8 \\ 0 & 0 & 1 \end{bmatrix}$$ ಏಕೆಂದರೆ,

(3, 3) ನೆಯ ಮೂಲಾಂಶಗಳು ಪರಸ್ಪರ ಸಮನಾಗಿಲ್ಲ.

(iv) $A = \begin{bmatrix} 1 \\ 2 \end{bmatrix}$, $B = [1 \quad 2]$ ಆದರೆ, $A = B$

ಅಥವಾ $A \times B$ ಎಂಬುವುಗಳಲ್ಲಿ ಯಾವೊಂದೂ ಸಮಂಜಸವಲ್ಲ; ಏಕೆಂದರೆ, A ಮತ್ತು B ಗಳು ಬೇರೆ ಬೇರೆ ವಿಧಗಳ ಮಂಡಲಗಳಾಗಿವೆ.

13.5 ಟೀಕೆ : A, B ಗಳು ಒಂದೇ ವಿಧದ ಮಂಡಲವಾದಾಗ $A = B$ ಆದರೆ, ಮತ್ತು ಆದಾಗ ಮಾತ್ರ A ದ ಪ್ರತಿಯೊಂದು ಮೂಲಾಂಶವೂ B ದ ಸಹಗಾಮಿ ಮೂಲಾಂಶಕ್ಕೆ ಸಮ ಎಂಬುದನ್ನು ನೆನಪಿನಲ್ಲಿಡೋಣ.

13.7 ಮಂಡಲಗಳಲ್ಲಿ ಸಂಕಲನ : $[a_{ij}]_{m \times n}$ ಮತ್ತು $[b_{ij}]_{m \times n}$ ಎಂಬ ಮಂಡಲಗಳ ಮೊತ್ತವನ್ನು

$$[a_{ij}]_{m \times n} + [b_{ij}]_{m \times n} = [a_{ij} + b_{ij}]_{m \times n}$$

ಎಂದು ನಿರೂಪಿಸುತ್ತೇವೆ.

ಉದಾಹರಣೆಗಳು :

(i) $[2] + [3] = [2+3] = [5]$

(ii) $$\begin{bmatrix} 1 & 2 \\ 3 & 4 \end{bmatrix} + \begin{bmatrix} 3 & 2 \\ 1 & 4 \end{bmatrix} = \begin{bmatrix} 1+3 & 2+4 \\ 3+1 & 4+4 \end{bmatrix} = \begin{bmatrix} 4 & 4 \\ 4 & 8 \end{bmatrix}$$

(iii) $\begin{bmatrix} 2 & 1 & 4 \\ -1 & 8 & 9 \end{bmatrix} + \begin{bmatrix} -2 & -1 & -4 \\ 1 & -8 & -9 \end{bmatrix} = \begin{bmatrix} 0 & 0 & 0 \\ 0 & 0 & 0 \end{bmatrix}$

ಯಾವುದೇ ಒಂದು ಮಂಡಲದಲ್ಲಿ ಪ್ರತಿಯೊಂದು ಮೂಲಾಂಶವೂ ಶೂನ್ಯವಾದಾಗ, ದತ್ತ ಮಂಡಲವನ್ನು **ಶೂನ್ಯಮಂಡಲ** ಎಂದು ಕರೆಯುತ್ತೇವೆ. ಮೇಲಿನ ಸಮೀಕರಣದ ಬಲಬದಿಯಲ್ಲಿರುವ ಮಂಡಲವು 2×3 ವಿಧದ ಶೂನ್ಯಮಂಡಲವೆಂಬುದನ್ನು ಗಮನಿಸೋಣ.

(iv) ಅನುಕೂಲದ ಸಲುವಾಗಿ, ಈ ಲೆಕ್ಕದಲ್ಲಿ $[a_{ij}]_{m \times n}$ ಎಂದು ಬರೆಯುವುದರ ಬದಲು $[a_{ij}]$ ಎಂದು ಬರೆಯೋಣ.

$$[a_{ij}] + [a_{ij}] = [a_{ij} + a_{ij}]$$

$$\Rightarrow 2 \times [a_{ij}] = [2a_{ij}]$$

ಮೇಲಿನ ಸಮೀಕರಣದ ಎರಡು ಬದಿಗೂ $[a_{ij}]$ ಕೂಡೋಣ.

ಇದರಿಂದ : $[a_{ij}] + 2 \times [a_{ij}] = [a_{ij}] + [2a_{ij}]$

$$\Rightarrow 3 \times [a_{ij}] = [a_{ij} + 2a_{ij}]$$

$$= [3a_{ij}]$$

ಇದೇರೀತಿ, : $[a_{ij}] + 3 \times [a_{ij}] = [a_{ij}] + [3a_{ij}]$

$$\Rightarrow 4 \times [a_{ij}] = [4a_{ij}]$$

ಈ ಅಂಶವನ್ನು ಕೆಳಗಿನ ವ್ಯಾಖ್ಯೆಯಲ್ಲಿ ಸಾಮಾನ್ಯೀಕರಿಸುತ್ತೇವೆ.

13.8 **ವ್ಯಾಖ್ಯೆ : $[a_{ij}]_{m \times n}$ ಮಂಡಲದ ಪ್ರತಿಯೊಂದು ಮೂಲಾಂಶವನ್ನು k ಎಂಬ * ಅದಿಶದಿಂದ ಗುಣಿಸಿದಾಗ ದೊರೆಯುವ ಮಂಡಲವನ್ನು kA ಎಂಬ ಸಂಕೇತದಿಂದ ಸೂಚಿಸುತ್ತೇವೆ. ಅಂದರೆ,**

---

* ಈ ಅಧ್ಯಾಯದಲ್ಲಿ ಇನ್ನು ಮುಂದೆ ಸಂಖ್ಯೆಗಳನ್ನು ಅದಿಶವೆಂದು ಕರೆಯುತ್ತೇವೆ. 2, $3+j4$ ಇವುಗಳು ಅದಿಶಕ್ಕೆ ಉದಾಹರಣೆಗಳಾಗುತ್ತವೆ.

$$\mathbf{k}\,A = [\, ka_{ij} \,]_{m \times n}$$

ಉದಾ :
$$\frac{1}{2}\begin{bmatrix} 8 & 12 \\ 16 & -10 \\ 15 & 11 \end{bmatrix} = \begin{bmatrix} \frac{1}{2}\times 8 & \frac{1}{2}\times 12 \\ \frac{1}{2}\times 16 & \frac{1}{2}\times -10 \\ \frac{1}{2}\times 15 & \frac{1}{2}\times 11 \end{bmatrix}$$

$$= \begin{bmatrix} 4 & 6 \\ 8 & -5 \\ 7.5 & 5.5 \end{bmatrix}$$

13.9 **ಟೀಕೆಗಳು :** (i) ಮೇಲಿನ ವ್ಯಾಖ್ಯೆಯಿಂದ, A ಎಂಬುದು **ಯಾವುದೆ** ಒಂದು ಮಂಡಲವಾದರೆ, —A ಸಂಕೇತಕ್ಕೆ

$$-A = -1 \times A$$

ಎಂಬ ಅರ್ಥವನ್ನು ಕೊಡುತ್ತೇವೆ. ಆದ್ದರಿಂದ,

$$[\, a_{ij} \,]_{m \times n} - [\, b_{ij} \,]_{m \times n}$$ **ಎಂಬುದಕ್ಕೆ,**

$$[\, a_{ij} \,]_{m \times n} + (-1) \times [\, b_{ij} \,]_{m \times n}$$

$$= [\, a_{ij} \,]_{m \times n} + [\, -b_{ij} \,]_{m \times n}$$

$$= [\, a_{ij} - b_{ij} \,]_{m \times n} \ldots$$ [ಏಕೆ ?]

ಎಂಬ ಅರ್ಥವನ್ನು ಕೊಡುತ್ತೇವೆ.

ಉದಾ : $\begin{bmatrix} 4 & 2 \\ 3 & 1 \\ 4 & 0 \end{bmatrix} - \begin{bmatrix} 2 & 4 \\ 1 & 3 \\ 0 & 4 \end{bmatrix}$

$$= \begin{bmatrix} 4-2 & 2-4 \\ 3-1 & 1-3 \\ 4-0 & 0-4 \end{bmatrix} = \begin{bmatrix} 2-2 \\ 2-2 \\ 4-4 \end{bmatrix}$$

(ii) ಮಂಡಲಗಳಲ್ಲಿ ಸಂಕಲನವನ್ನು ನಿರೂಪಿಸುವಾಗ, ಒಂದೇ ವಿಧದ ಮಂಡಲಗಳನ್ನು ತೆಗೆದುಕೊಂಡಿರುವುದನ್ನು ಗಮನಿಸೋಣ. ಆದ್ದರಿಂದ ದತ್ತ ಮಂಡಲಗಳೆರಡರ ವಿಧಗಳು ಒಂದೇ ಆದಾಗ ಮಾತ್ರ, ಆ ಮಂಡಲಗಳ ನಡುವೆ ಸಂಕಲನವು ಮಾನ್ಯ ಎಂದು ಹೇಳುತ್ತೇವೆ; ಹೀಗಿಲ್ಲದಿರುವಾಗ ಸಂಕಲನವು ಅಮಾನ್ಯ ಎಂದು ಹೇಳುತ್ತೇವೆ.

$\begin{bmatrix} 1 & 2 & 3 \\ 4 & 5 & 6 \end{bmatrix}$ ಮತ್ತು $\begin{bmatrix} 2 & 4 \\ 6 & 8 \\ -1 & 2 \end{bmatrix}$ ಎಂಬ ಮಂಡಲಗಳ ನಡುವೆ ಸಂಕಲನವು ಅಮಾನ್ಯ.

ಅಭ್ಯಾಸ 13.2

1. ಕೆಳಗೆ ಕೊಟ್ಟಿರುವ ಮಂಡಲಗಳಲ್ಲಿ ಸಂಕಲನವು ಮಾನ್ಯವೇ ? ಅಮಾನ್ಯವೇ ? ನಿರ್ಧರಿಸಿರಿ. ಮಾನ್ಯವಾದಾಗ, ದತ್ತ ಮಂಡಲಗಳ ಮೊತ್ತವನ್ನು ಕಂಡು ಹಿಡಿಯಿರಿ.

(i) $[2]$, $[3]$. (ii) $\begin{bmatrix} 2 & 3 \\ 4 & 4 \end{bmatrix}$, $\begin{bmatrix} 0 & 0 \\ 0 & 0 \end{bmatrix}$

(iii) $\begin{bmatrix} 1 & 2 \\ 3 & 4 \\ 5 & 6 \end{bmatrix}$, $\begin{bmatrix} 1 & 2 & 3 \\ 0 & 1 & -1 \\ 2 & 5 & 7 \end{bmatrix}$

(iv) $\begin{bmatrix} 1 & 2 \\ 3 & 4 \\ 5 & 6 \end{bmatrix}$, $\begin{bmatrix} 0 & 0 \\ 0 & 0 \\ 0 & 0 \end{bmatrix}$

(v) $[1\ 2\ 3]$, $\begin{bmatrix} 0 \\ 0 \\ 0 \end{bmatrix}$ (vi) $\begin{bmatrix} 1 & 2 \\ 3 & 4 \\ 5 & 6 \end{bmatrix}$, $\begin{bmatrix} 4 & 6 \\ 7 & 8 \end{bmatrix}$

2. ಇವುಗಳನ್ನು ಸಂಕ್ಷೇಪಿಸಿರಿ.

(i) $\begin{bmatrix} 2 & 3 \\ 4 & 5 \end{bmatrix} + \begin{bmatrix} 3 & 4 \\ 5 & 6 \end{bmatrix} + \begin{bmatrix} 4 & 5 \\ 5 & 7 \end{bmatrix} + \begin{bmatrix} 5 & 6 \\ 7 & 8 \end{bmatrix}$

(ii) $\begin{bmatrix} 2 & -1 \\ -4 & 3 \end{bmatrix} + 3\begin{bmatrix} 2 & -1 \\ -4 & 3 \end{bmatrix} - \begin{bmatrix} -8 & 4 \\ 16 & -12 \end{bmatrix}$

3. $\begin{bmatrix} 2 & 4 & 6 \\ -1 & 0 & 8 \end{bmatrix} + 8\begin{bmatrix} x & 2y & z \\ p & -q & r \end{bmatrix} + \begin{bmatrix} 0 & 0 & 0 \\ 0 & 0 & 0 \end{bmatrix}$ ಆದರೆ,

x, y, z, p, q, r ಬೆಲೆಗಳನ್ನು ಕಂಡುಹಿಡಿಯಿರಿ.

4. $A = \begin{bmatrix} 1 & 2 & 3 \\ -2 & 4 & -6 \\ 3 & 0 & -1 \end{bmatrix}$, $B = \begin{bmatrix} 2 & 1 & 0 \\ 0 & 3 & -1 \\ -1 & 2 & 1 \end{bmatrix}$ ಮತ್ತು

$$C = \begin{bmatrix} 1 & 0 & 2 \\ 2 & -1 & 5 \\ 7 & 2 & 6 \end{bmatrix}$$

(i) O ವು 3×3 ವಿಧದ ಶೂನ್ಯಮಂಡಲವೆಂದು ತಿಳಿದು

$$A+O = O+A = A$$

ಎಂಬುದನ್ನು ತಾಳೆನೋಡಿರಿ. ಇದು ಮಂಡಲಗಳ ಗಣದಲ್ಲಿ "**ಸಂಕಲನದ ಏಕ**"ದ ಇರುವಿಕೆಯನ್ನು ತೋರಿಸುತ್ತದೆ.

(ii) A+B, B+A ಗಳನ್ನು ಕಂಡುಹಿಡಿಯಿರಿ. ತನ್ಮೂಲಕ,

$$A+B = B+A$$

ಎಂಬುದನ್ನು ತಾಳೆನೋಡಿರಿ. ಇದು ಮಂಡಲಗಳ ಗಣದಲ್ಲಿ **ಸಂಕಲನವು ಪರಿವರ್ತನೀಯ** ಎಂಬುದನ್ನು ತೋರಿಸುತ್ತದೆ.

(iii) ಮೇಲಿನ ಲೆಕ್ಕದಲ್ಲಿ A+Bವನ್ನು ಕಂಡುಹಿಡಿದಿದ್ದೀರಿ; ಈಗ B+C ವನ್ನು ಕಂಡುಹಿಡಿಯಿರಿ ಮತ್ತು

$$(A+B) + C = A + (B+C)$$

ಎಂಬುದನ್ನು ತಾಳೆನೋಡಿರಿ. ಇದು ಮಂಡಲಗಳ ಗಣದಲ್ಲಿ **ಸಂಕಲನವು ಸಹವರ್ತನೀಯ** ಎಂಬುದನ್ನು ತೋರಿಸುತ್ತದೆ.

(iv) $B+D=C$ ಇರುವಂತೆ, D ಎಂಬ ಮಂಡಲವನ್ನು ಬರೆಯಿರಿ. ಹೀಗೆ ಬರೆದ $D=C-B=-(B-C)$ ಎಂಬುದನ್ನು ತಾಳೆನೋಡಿರಿ.

5. $$3\begin{bmatrix} p & q \\ r & s \end{bmatrix} = \begin{bmatrix} p & 6 \\ -1 & 2s \end{bmatrix} + \begin{bmatrix} 4 & p+q \\ r+s & 3 \end{bmatrix}$$ ಆದರೆ,

$p+s = q+r-5$ ಎಂದು ತೋರಿಸಿರಿ.

13.10 ಮಂಡಲಗಳಲ್ಲಿ ಗುಣಾಕಾರ ;

ಸಂದರ್ಭ 1 :

$A=[a_{11}\ a_{12}\ \dots\ a_{1m}]$ ಮತ್ತು $B=\begin{bmatrix} b_{11} \\ b_{21} \\ \vdots \\ b_{m1} \end{bmatrix}$ ಎಂಬ

ಮಂಡಲಗಳ, ಇದೇ ಕ್ರಮದಲ್ಲಿ ಪಡೆದ ಗುಣಲಬ್ಧವನ್ನು

$$A\times B=[a_{11}b_{11}+a_{12}b_{21}+\dots+a_{1m}b_{m1}]$$

$$=[\sum_{j=1}^{m} a_{1j}\, b_{j1}]$$

ಎಂದು ನಿರೂಪಿಸುತ್ತೇವೆ. $A\times B$ ಎಂಬುದನ್ನು ಇನ್ನು ಮುಂದೆ AB ಎಂದು ಬರೆಯುತ್ತೇವೆ.

ಉದಾಹರಣೆಗಳು :

(i) $$[1\ \ 2\ \ 3]\begin{bmatrix}2\\3\\-4\end{bmatrix} = [1\times(2)+2(3)+(-4)(= [-4]$$

(ii) $$[0\ \ 0]\begin{bmatrix}x\\y\end{bmatrix} = [0\times x+0\times y]=[0].$$

(iii) $$[x\ \ y]\begin{bmatrix}0\\0\end{bmatrix} = [x\times 0+y\times 0]=[0].$$

(iv) $$[a_{i_1}\ a_{i_2} \ldots a_{in}]\begin{bmatrix}b_{1k}\\b_{2k}\\\ldots\\b_{nk}\end{bmatrix}$$

$$=[a_{i1}\ b_{1k} = a_{i2}\ b_{2k} + \ldots + a_{in}\ b_{nk}]$$

$$= [\sum_{j=1}^{n} a_{ij}\ b_{jk} \qquad \ldots\ldots \qquad (13.10.1)$$

ಸಂದರ್ಭ 2 : ಈಗ $A = [a_{ij}]_{m \times n}$ ಮತ್ತು $B = [b_{jk}]_{n \times p}$ ಎಂದಿರಲಿ. A ಮತ್ತು B ಗಳ ಇದೇ ಕ್ರಮದಲ್ಲಿ ಪಡೆದ ಗುಣಲಬ್ಧವನ್ನು

$$A \times B = C = [C_{ik}]_{m \times p}$$

ಇಲ್ಲಿ $[C_{ik}] =$ [A ದ i ನೆಯ ಅಡ್ಡಸಾಲು] $\times$ [B ದ k ನೆಯ ನೀಟಸಾಲು]

$$= [a_{1i}\ a_{i2} \ldots a_{in}] \begin{bmatrix} b_{1k} \\ b_{2k} \\ \ldots \\ b_{nk} \end{bmatrix} = [\sum_{j=1}^{n} a_{ij}\ b_{ik}]$$

[(13.10.1) ರಿಂದ]

ಎಂದು ನಿರೂಪಿಸುತ್ತೇವೆ. ಚಿತ್ರಾತ್ಮಕವಾಗಿ,

$$\begin{bmatrix} a_{11} & \ldots & a_{1n} \\ \vdots & & \\ a_{i1} & \ldots & a_{in} \\ \vdots & & \\ a_{m} & \ldots & a_{mn} \end{bmatrix} \quad \begin{bmatrix} b_{11} & \ldots & b_{1k} & \ldots & b_{1p} \\ \vdots & & & & \vdots \\ \vdots & & & & \vdots \\ \vdots & & & & \vdots \\ b_{n1} & \ldots & b_{nk} & \ldots & b_{np} \end{bmatrix}$$

$$= \begin{bmatrix} C_{11} & \cdots & \cdots & C_{1p} \\ \vdots & & & \\ C_{1i} & \boxed{C_{ik}} & \cdots & C_{ip} \\ \vdots & & & \\ C_{m1} & \cdots & \cdots & C_{mp} \end{bmatrix}$$

ಎಂದು ಬರೆಯಬಹುದು.

ಉದಾಹರಣೆಗಳು :

(i) $\mathbf{A} = \begin{bmatrix} 0 & 3 & 5 \\ 3 & 5 & 7 \end{bmatrix}$, $\mathbf{B} = \begin{bmatrix} 1 & 2 \\ 2 & 3 \\ 3 & 4 \end{bmatrix}$ ಎಂದಿರಲ್ಲಿ.

A ವು 2×3 ವಿಧದ ಮಂಡಲ; B ವು 3×2 ವಿಧದ ಮಂಡಲ. ಆದ್ದ ರಿಂದ $A \times B$ ಯನ್ನು ಮೇಲಿನಂತೆ ಪಡೆದರೆ, ಅದು 2×2 ವಿಧದ ಮಂಡಲವಾಗು ತ್ತದೆ.

$$A \times B = \begin{bmatrix} 0 & 3 & 5 \\ 3 & 5 & 7 \end{bmatrix} \begin{bmatrix} 1 & 2 \\ 2 & 3 \\ 3 & 4 \end{bmatrix} = \begin{bmatrix} C_{11} & C_{12} \\ C_{21} & C_{22} \end{bmatrix}$$

ಇಲ್ಲಿ $[C_{ij}]$ = [A ದ i ನೇ ಅಡ್ಡಸಾಲು] [B ದ j ನೇ ನೀಟಸಾಲು].

$$\therefore\ [C_{11}] = [0\quad 3\quad 5]\begin{bmatrix}1\\2\\3\end{bmatrix}$$

$$=[0\times1+3\times2+5\times3]=[21].$$

$$[C_{12}]=[0\ 3\ 5]\begin{bmatrix}2\\3\\4\end{bmatrix}=[0\times2+3\times3+5\times4]=[29]$$

$$[C_{21}]=[3\ 5\ 7]\begin{bmatrix}1\\2\\3\end{bmatrix}=[3\times1+5\times2+7\times3]=[34]$$

$$(C_{22})=[3\ 5\ 7]\begin{bmatrix}2\\3\\4\end{bmatrix}[6+15+28]=[49].$$

$$\therefore\quad AB=\begin{bmatrix}21 & 29\\34 & 49\end{bmatrix}$$

(ii) A, B ಗಳು ಮೇಲಿನ ಲೆಕ್ಕದಲ್ಲಿರುವಂತಿರಲಿ. $A \times B$ ಮಂಡಲವನ್ನು ಪಡೆಯೋಣ. BA ಒಂದು 3×3 ವಿಧದ ಮಂಡಲವೆಂಬುದನ್ನು ಗಮನಿಸೋಣ.

$$BA = \begin{bmatrix} 1 & 2 \\ 2 & 3 \\ 3 & 4 \end{bmatrix} \begin{bmatrix} 0 & 3 & 5 \\ 3 & 5 & 7 \end{bmatrix}$$

$$= \begin{bmatrix} [1\,(0)+2\,(3)] & [1\,(3)+2\,(5)] & [1\,(5)+2\,(7)] \\ [2\,(0)+3\,(3)] & [2\,(3)+3\,(5)] & [2\,(5)+3\,(7)] \\ [3\,(0)+4\,(3)] & [3\,(3)+4\,(5)] & [3\,(5)+4\,(7)] \end{bmatrix}$$

$$= \begin{bmatrix} 6 & 13 & 19 \\ 9 & 21 & 31 \\ 12 & 29 & 43 \end{bmatrix}.$$

ಇದರಿಂದ ತಿಳಿಯುವ ವಿಷಯ : $AB \neq BA$ ಅಂದರೆ **ಮಂಡಲಗಳ ಗಣದಲ್ಲಿ ಗುಣಾಕಾರವು ಪರಿವರ್ತನೀಯವಲ್ಲ**

(iii) $A = \begin{bmatrix} 2 & 1 \\ 3 & 1 \end{bmatrix}$, $B = \begin{bmatrix} 2 \\ 1 \end{bmatrix}$.

13.11 ಟೀಕೆ: ಮಂಡಲಗಳ ಗುಣದಲ್ಲಿ ಗುಣಾಕಾರವನ್ನು ನಿರೂಪಿಸುವಾಗ A ಮಂಡಲದ ನೀಟಸಾಲುಗಳ ಸಂಖ್ಯೆ = B ಮಂಡಲದ ಅಡ್ಡಸಾಲುಗಳ ಸಂಖ್ಯೆ ಇರುವಂತೆ ಆರಿಸಿಕೊಂಡಿರುವುದನ್ನು ಗಮನಿಸೋಣ [13.10 ನೋಡಿರಿ.] ಆದ್ದರಿಂದ Aದ ನೀಟಸಾಲುಗಳ ಸಂಖ್ಯೆ = Bದ ಅಡ್ಡಸಾಲುಗಳ ಸಂಖ್ಯೆ ಆದಾಗ ಮಾತ್ರ ABಯನ್ನು ಪಡೆಯಬಹುದು. ಹೀಗಿರುವಾಗ A, Bಗಳಲ್ಲಿ ಗುಣಾಕಾರವು ಮಾನ್ಯ ಎಂದು ಹೇಳುತ್ತೇವೆ; ಇಲ್ಲದಿದ್ದರೆ, A,Bಗಳಲ್ಲಿ ಗುಣಾಕಾರವು ಅಮಾನ್ಯ ಎಂದು ಹೇಳುತ್ತೇವೆ.

AB ಗುಣಲಬ್ಧದಲ್ಲಿ A ವನ್ನು **ಹಿಂಗುಣಕವೆಂದೂ** ಮತ್ತು Bವನ್ನು **ಮುಂಗುಣಕವೆಂದೂ** ಕರೆಯುತ್ತೇವೆ. ಮೇಲಿನ ಲೆಕ್ಕದಲ್ಲಿ B ಹಿಂಗುಣಕವಾದಾಗ, B ಮತ್ತು A ಗಳಲ್ಲಿ ಗುಣಾಕಾರವು ಅಮಾನ್ಯವಾಗುತ್ತದೆ.; ಏಕೆಂದರೆ, Bದ ನೀಟಸಾಲುಗಳ ಸಂಖ್ಯೆ ≠ Aದ ಅಡ್ಡಸಾಲುಗಳ ಸಂಖ್ಯೆ. AB ಗುಣಲಬ್ಧವನ್ನು ಪಡೆಯಲು B ವನ್ನು Aದಿಂದ ಹಿಂಗುಣಿಸಬೇಕು ಅಥವಾ Aವನ್ನು Bದಿಂದ ಮುಂಗುಣಿಸಬೇಕೆಂಬುದನ್ನು ಗಮನಿಸೋಣ.

31.12 ಉದಾ: (i) $=Y\ [34\quad 1\quad 5],\ X = \begin{bmatrix} 1 \\ 2 \\ 0 \\ 1 \end{bmatrix}$.

$$XY = \begin{bmatrix} 1 \\ 2 \\ 0 \\ 1 \end{bmatrix} [3\quad 4\quad 1\quad 5] = \begin{bmatrix} 3 & 4 & 1 & 5 \\ 6 & 8 & 2 & 10 \\ 0 & 0 & 0 & 0 \\ 3 & 4 & 1 & 5 \end{bmatrix}$$

$$YX = [3\ \ 4\ \ 1\ \ 5] \begin{bmatrix} 1 \\ 2 \\ 0 \\ 1 \end{bmatrix} = [3+8+0+5] = [16].$$

(ii) $A = \begin{bmatrix} 1 & 1 & -1 \\ 2 & -3 & 4 \\ 3 & -2 & 3 \end{bmatrix}$, $B = \begin{bmatrix} -1 & -2 & -1 \\ 6 & 12 & 6 \\ 5 & 10 & 5 \end{bmatrix}$.

$$AB = \begin{bmatrix} 1 & 1 & -1 \\ 2 & -3 & 4 \\ 3 & -2 & 3 \end{bmatrix} \begin{bmatrix} -1 & -2 & -1 \\ 6 & 12 & 6 \\ 5 & 10 & 5 \end{bmatrix}$$

$$= \begin{bmatrix} 1(-1)+1(6)-1(5) & 1(-2)+1(12)-1(10) & 1(-1)+1(6)-1(5) \\ 2(-1)-3(6)+4(5) & 2(-2)-3(12)+4(10) & 2(-1)-3(6)+4(5) \\ 3(-1)-2(6)+3(5) & 3(-2)-2(12)+3(10) & 3(-1)-2(6)+3(5) \end{bmatrix}$$

$$= \begin{bmatrix} 0 & 0 & 0 \\ 0 & 0 & 0 \\ 0 & 0 & 0 \end{bmatrix}$$

$$BA = \begin{bmatrix} -8 & 7 & -10 \\ 48 & -42 & 60 \\ 40 & -35 & 50 \end{bmatrix}$$ ಎಂಬುದನ್ನು ತಾಳೆ ನೋಡಬಹುದು.

ಈ ಲೆಕ್ಕದಿಂದ ತಿಳಿಯುವ ವಿಷಯ : **A** ಮತ್ತು **B** ಗಳು ಶೂನ್ಯಮಂಡಲಕ್ಕಿಂತ ಭಿನ್ನವಾದ ಸಂಧರ್ಭಗಳಲ್ಲೂ ಸಹ **AB** ಒಂದು ಶೂನ್ಯಮಂಡಲವಾಗಬಹುದು. ಅರ್ಥಾತ್, $A \neq O$ $B \neq O$ ಆದಾಗ $AB = O$ ಅಗಬಹುದು. ಇಲ್ಲಿ **O** ಒಂದು ಶೂನ್ಯಮಂಡಲವೆಂದು ಪರಿಗಣಿಸಿದ್ದೇವೆ. [2. ೫ ಪ್ರಮೇಯದೊಂದಿಗೆ, ಇದನ್ನು ಹೋಲಿಸಿರಿ].

(iii) $$A = \begin{bmatrix} 1 & 2 & 0 \\ 1 & 1 & 0 \\ -1 & 4 & 0 \end{bmatrix}, B = \begin{bmatrix} 1 & 2 & 3 \\ 1 & 1 & -1 \\ 2 & 2 & 2 \end{bmatrix},$$

$$C = \begin{bmatrix} 1 & 2 & 3 \\ 1 & 1 & -1 \\ 1 & 1 & 1 \end{bmatrix}$$

$$AB = \begin{bmatrix} 3 & 4 & 1 \\ 2 & 3 & 2 \\ 3 & 2 & -7 \end{bmatrix} = AC$$ ಎಂಬುದನ್ನು ತಾಳೆನೋಡಬಹುದು.

ಇದರಿಂದ ತಿಳಿಯುವ ವಿಷಯ: $B \neq C$ ಆದಾಗ್ಯೂ ಸಹ $AB = AC$. [2·17—(6)ರೊಂದಿಗೆ ಇದನ್ನು ಹೋಲಿಸಿರಿ].

13.13 ವಾಖ್ಯೆ : I_n ಸಂಕೇತದಿಂದ ಸೂಚಿಸುವ $n \times n$ ವಿಧದ ಏಕಮಾನ ಮಂಡಲವನ್ನು,

$$I_n = \begin{bmatrix} 1 & 0 & 0 & \cdots & 0 \\ 0 & 1 & 0 & \cdots & 0 \\ 0 & 0 & 1 & \cdots & 0 \\ \vdots & \vdots & \vdots & \vdots & 0 \\ \vdots & \vdots & \vdots & \vdots & 0 \\ 0 & 0 & 0 & \cdots & 1 \end{bmatrix}_{n \times n} \quad \cdots\cdots \quad (13.13.1)$$

ಎಂದು ನಿರೂಪಿಸುತ್ತೇವೆ.

ಉದಾ : $I_2 = \begin{bmatrix} 1 & 0 \\ 0 & 1 \end{bmatrix}$, $I_3 = \begin{bmatrix} 1 & 0 & 0 \\ 0 & 1 & 0 \\ 0 & 0 & 1 \end{bmatrix}$, ಇತ್ಯಾದಿ.

ಈಗ $$\delta_{ij} = \begin{cases} 1, & i=j \\ 0, & i \neq j \end{cases} \quad \ldots \quad (13.13.2)$$

ಎಂದು ಬರೆದರೆ $I_n = [\delta_{ij}]_{n \times n}$ [ಅ.13.1.13 ನೋಡಿರಿ]

ಎಂಬುದನ್ನು ಗಮನಿಸೋಣ, (13.13.2) ರಲ್ಲಿ ನಿರೂಪಿಸಿರುವ δ_{ij} ಯನ್ನು 'ಕ್ರೋನೇಕರ್ ಡೆಲ್ಟ' ಎಂದು ಕರೆಯುವುದು ರೂಢಿಯಲ್ಲಿದೆ. **A** ಎಂಬುದು ಯಾವುದೇ ಒಂದು **n** ಪ್ರಮಾಣದ ಚೌಕಮಂಡಲವಾದರೆ,

$$I_n A = AI_n = A.$$

ಏಕೆಂದರೆ,

$$I_n A = [\delta_{ij}]_{n \times n} \times [a_{ij}]_{n \times n} = [C_{ij}]_{n \times n}$$

ಆದರೆ, $$[C_{ij}] = \delta_{i1} \quad \delta_{i2} \ldots \delta_{ij} \ldots \delta_{in} \begin{bmatrix} a_{1j} \\ a_{2j} \\ \vdots \\ a_{ij} \\ \vdots \\ a_{ni} \end{bmatrix}$$

$$= [\delta_{i1} a_{1j} + \delta_{i2} a_{2j} + \ldots + \delta_{ii} a_{ij} + \ldots + \delta_{in} a_{nj}]$$

$$= [0+0+\ldots+1 \cdot a_{ij} + \ldots + 0]$$

$$= [a_{ij}].$$

ಇದೇ ರೀತಿ $AI_n = A$ ಎಂದು ತೋರಿಸಬಹುದು.

ಅಭ್ಯಾಸ 13.3

1. $A_{m,n}$ ಒಂದು $m \times n$ ವಿಧದ ಮಂಡಲವೆಂದು ತಿಳಿದು, ಕೆಳಗೆ ಕೊಟ್ಟಿರುವ ಗುಣಲಬ್ಧಗಳು ಮಾನ್ಯವೇ ? ಅಮಾನ್ಯವೇ ? ನಿರ್ಧರಿಸಿ. ಮಾನ್ಯವಾದಾಗ, ಗುಣಲಬ್ಧದ ವಿಧವನ್ನು ಬರೆಯಿರಿ :

(i) $A_{5,4} \times B_{4,5}$ (ii) $A_{4,2} \times B_{8,4}$

(iii) $A_{2,3} \times B_{3,7}$ (iv) $A_{r,k} \times B_{k,s}$

(v) $A_{7,11} \times B_{11,12}$ (vi) $A_{p,p} \times B_{p,p}$

(vii) $A_{l,m} \times B_{m,l}$ (viii) $A_{ml} \times B_{l,m}$

2. (i) $P = [\frac{1}{2}]$, $Q = [2 \quad 1 \quad 0]$ ಆದರೆ, $PQ = ?$ $QP = ?$

(ii) $P = \begin{bmatrix} 2 \\ 0 \\ 3 \end{bmatrix}$, $Q = [2]$ ಆದರೆ $PQ = ?$ $QP = ?$

(iii) $A = [2 \quad 3 \quad 4 \quad 5]$; $B = \begin{bmatrix} 1 \\ 2 \\ 3 \\ 4 \end{bmatrix}$ ಆದರೆ, $AB = ?$

$BA = ?$

(iv) $\mathbf{P}=\begin{bmatrix} 2 & 3 \\ 1 & 4 \end{bmatrix}, Q=\begin{bmatrix} 4/5 & -3/5 \\ -1/5 & 2/5 \end{bmatrix}$, ಆದರೆ $PQ=QA$ ಎಂದು ತೋರಿಸಿರಿ.

(v) $A=\begin{bmatrix} 3 & -2 \\ 4 & 5 \end{bmatrix}, B=\begin{bmatrix} 5 & 2 \\ -4 & 3 \end{bmatrix}$ ಆದರೆ $AB=BA$
$= 23I_2$

ಎಂದು ತೋರಿಸಿರಿ.

(vi) $\mathbf{P}=\begin{bmatrix} 2 & 3 & 1 \\ 1 & 2 & 3 \\ 3 & 1 & 2 \end{bmatrix}, Q=\begin{bmatrix} 1 & -5 & -7 \\ 7 & 1 & -5 \\ -5 & 7 & 1 \end{bmatrix} \times \frac{1}{18}$

ಆದರೆ, $PQ = ?\quad QP = ?$

3. $\mathbf{A}=\begin{bmatrix} 1 & 2 \\ 3 & 0 \end{bmatrix}, \mathbf{B}=\begin{bmatrix} 0 & 1 \\ 2 & 3 \end{bmatrix}$ ಮತ್ತು $C=\begin{bmatrix} 1 & 1 \\ 1 & 1 \end{bmatrix}$

ಆದರೆ,

(i) $A(B+C) = AB+AC$

(ii) $(A+B)C = AC+BC$

ಎಂಬ ಸಮೀಕರಣಗಳನ್ನು ತಾಳೆ ನೋಡಿರಿ. ಇದು ಗುಣಾಕಾರವು ಮಾನ್ಯವಾದಾಗ,

ಮಂಡಲಗಳ ಗಣದಲ್ಲಿ **ವಿಭಾಜಕ ನಿಯಮವು** ಯುಕ್ತವಾಗುತ್ತದೆಂಬುದನ್ನು ತೋರಿಸುತ್ತವೆ.

4. $$P = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix}, \quad Q = \begin{bmatrix} 1 & 3 \\ 0 & 2 \\ -1 & 4 \end{bmatrix}$$ ಮತ್ತು

$$R = \begin{bmatrix} 1 & 2 & 3 & -4 \\ 2 & 0 & -2 & 1 \end{bmatrix}$$

ಆದರೆ (PQ) R = P (QR) ಎಂಬುದನ್ನು ತಾಳೆನೋಡಿರಿ. ಇದು ಗುಣಾಕಾರವು ಮಾನ್ಯವಾದಾಗ, ಮಂಡಲಗಳ ಗಣದಲ್ಲಿ **ಸಹವರ್ತನೀಯ ನಿಯಮವು** ಯುಕ್ತವಾಗುತ್ತದೆಂಬುದನ್ನು ತೋರಿಸುತ್ತವೆ.

5. $$\begin{bmatrix} 1 & -1 & 1 \\ -3 & 2 & -1 \\ 2 & 1 & 0 \end{bmatrix} = P, \quad Q = \begin{bmatrix} 1 & 2 & 1 \\ 2 & 4 & 6 \\ 1 & 2 & 3 \end{bmatrix}$$ ಆದರೆ,

$$QP = \begin{bmatrix} -11 & 6 & -1 \\ -22 & 12 & -2 \\ -11 & 6 & -2 \end{bmatrix}$$

ಎಂದೂ ಮತ್ತು $PQ = O$ ಎಂದೂ **ತೋರಿಸಿರಿ.**

6. $A = \begin{bmatrix} a & b \\ c & d \end{bmatrix}$ ಮತ್ತು $B = \begin{bmatrix} 1 & 1 \\ -1 & 1 \end{bmatrix}$ ಅಂದುಕೊಳ್ಳಿ.

$AB = BA$ ಆದರೆ $a = d$ ಮತ್ತು $b + c = o$ ಎಂದು ತೋರಿಸಿರಿ.

7. A ಮತ್ತು B ಗಳು nನೇ ಪ್ರಮಾಣದ ಚೌಕಮಂಡಲವೆಂದು ತಿಳಿಯಿರಿ. ಹಲವು ಸಂದರ್ಭಗಳನ್ನು ಬಿಟ್ಟು,

(i) $(A+B)^2 = A^2 + 2AB + B^2$

ಮತ್ತು (ii) $A^2 - B^2 = (A+B)(A-B)$

ಎಂಬ ಸಮೀಕರಣಗಳು ಏಕೆ ಯುಕ್ತವಾಗುವುದಿಲ್ಲವೆಂಬುದನ್ನು ವಿವರಿಸಿರಿ. ಈ ಸಮೀಕರಣಗಳು ಯಾವ ವಿಶೇಷ ಸಂದರ್ಭಗಳಲ್ಲಿ ಯುಕ್ತವಾಗುತ್ತವೆ ?

8. x, y, z, w ಗಳ ಎಲ್ಲಾ ಬೆಲೆಗಳಿಗೂ

$$\begin{bmatrix} x & y \\ -y & x \end{bmatrix} \begin{bmatrix} z & w \\ -w & z \end{bmatrix} = \begin{bmatrix} z & w \\ -w & z \end{bmatrix} \begin{bmatrix} x & y \\ -y & x \end{bmatrix}$$

ಎಂದು ತೋರಿಸಿರಿ.

9. x ದ ಯಾವ ಬೆಲೆಗಳಿಗೆ

$$[x \quad 4 \quad 1] \begin{bmatrix} 2 & 1 & 0 \\ 1 & 0 & 2 \\ 0 & 2 & 4 \end{bmatrix} \begin{bmatrix} x \\ 4 \\ 1 \end{bmatrix} = O?$$

10. A, B ಗಳು n ನೇ ಪ್ರಮಾಣದ ಚೌಕಮಂಡಲಗಳೆಂದು ತಿಳಿಯಿರಿ. ಈಗ

$$C_1 = \propto_1 A + B_1 B,$$
$$C_2 = \propto_2 A + B_2 B$$

ಎಂದಿರಲಿ. $\propto_1$, $\propto_2 B_1$, B_2ಗಳು ಅದಿಶಗಳು ಮತ್ತು $\propto_1 B_2 \neq \propto_2 B_1$. $AB = BA$ ಆದರೆ, ಮತ್ತು ಆದಾಗ ಮಾತ್ರ $C_1C_2 = C_2C_1$ ಎಂದು ತೋರಿಸಿರಿ.

11. ಗುಣಾಕಾರವು ಮಾನ್ಯವಾದಾಗ $(A+B)^3$ ಎಂಬುದನ್ನು ವಿಸ್ತರಿಸಿರಿ,

12. $A = \begin{bmatrix} 2 & 2 \\ 3 & -1 \end{bmatrix}$, A^2, A^3 ಗಳನ್ನು ಕಂಡುಹಿಡಿಯಿರಿ.

$$f(x) = X^3 - 3X^2 - 2X + 4I_2,\ g(x) = X^2 - X - 8I_2$$

ಆದರೆ, $f(A) = \begin{bmatrix} -4 & 8 \\ 12 & -17 \end{bmatrix}$ ಎಂದೂ ಮತ್ತು $g(A) = O$ ಎಂದೂ ತೋರಿಸಿರಿ.

13. A, B ಮತ್ತು C ಗಳು 13.12 ಉದಾ : (iii) ರಂತಿರಲಿ. $B \neq C$ ಎಂಬುದನ್ನು ಗಮನಿಸಿರಿ. ಆದಾಗ್ಯೂ $AB = AC$ ಎಂದು ತೋರಿಸಿರಿ.

14. ಕೆಳಗಿನವುಗಳನ್ನು ತಾಳೆನೋಡಿರಿ.

(i) $A = \begin{bmatrix} 1 & 1 & 3 \\ 5 & 2 & 6 \\ -2 & -1 & -3 \end{bmatrix}$ ಆದರೆ, $A^2 = \begin{bmatrix} 0 & 0 & 0 \\ 3 & 3 & 9 \\ -1 & -1 & -3 \end{bmatrix}$

ಮತ್ತು $A^3 = O$.

(ii) $B = \begin{bmatrix} 2 & 1 & 3 \\ 1 & -1 & 2 \\ 1 & 2 & 1 \end{bmatrix}$ ಆದರೆ, $B^3 - 2B^2 - 9B = O$.

(iii) $C = \begin{bmatrix} -1 & -3 & -4 \\ -1 & -3 & -4 \\ 1 & 3 & 4 \end{bmatrix}$ ಆದರೆ, $C^2 = O$.

(iv) $\begin{bmatrix} 1 & 2 & 3 \\ 2 & 4 & 5 \\ 3 & 5 & 6 \end{bmatrix} \begin{bmatrix} 1 & -3 & 2 \\ -3 & 3 & -1 \\ 2 & -1 & 0 \end{bmatrix}$

$$= \begin{bmatrix} 1 & -3 & 2 \\ -3 & 3 & 1 \\ 2 & -1 & 1 \end{bmatrix} \begin{bmatrix} 1 & 2 & 3 \\ 2 & 4 & 5 \\ 3 & 5 & 6 \end{bmatrix} = \begin{bmatrix} 1 & 0 & 0 \\ 0 & 1 & 0 \\ 0 & 0 & 1 \end{bmatrix}$$

13: 14 **ವ್ಯಾಖ್ಯೆ :** ಯಾವುದೇ ಒಂದು $m \times n$ ಮಂಡಲದ ಅಡ್ಡಸಾಲು ಮತ್ತು ಸಹಗಾಮಿಯಾ ನೀಟಸಾಲುಗಳನ್ನು ಪರಸ್ಪರ ವಿನಿಮಯ ಮಾಡಿದಾಗ ದೊರೆಯುವ $n \times m$ ಮಂಡಲವನ್ನು ದತ್ತ ಮಂಡಲದ ಪಲ್ಲಟವೆಂದು ಕರೆಯುತ್ತೇವೆ. Aದ ಪಲ್ಲಟವನ್ನು A^{1} ಎಂಬ ಸಂಕೇತದಿಂದ ಸೂಚಿಸುತ್ತೇವೆ.

$A = [\, a_{ij} \,]_{m \times n}$ ಆದರೆ,

$A^1 = [\, a^1_{ij} \,]_{n \times m}$, ಇಲ್ಲಿ $a_{ij} = a^1_{ji}$,

$i = 1, 2, \ldots, m$ ಮತ್ತು $j = 1, 2, \ldots, n$.

ಉದಾಹರಣೆಗಳು :

(i) $A = \begin{bmatrix} 1 & 2 \\ 3 & 4 \end{bmatrix}$; $A^1 = \begin{bmatrix} 1 & 3 \\ 2 & 4 \end{bmatrix}$

(ii) $A = \begin{bmatrix} 1 & 0 & -2 \\ 3 & -1 & 7 \end{bmatrix}$; $A^1 = \begin{bmatrix} 1 & 3 \\ 0 & -1 \\ -2 & 7 \end{bmatrix}$

Aವು $m \times n$ ಮಂಡಲವಾದಾಗ, A^1ವು $n \times m$ ಮಂಡಲವಾಗುತ್ತದೆಂಬುದನ್ನು ಗಮನಿಸೋಣ.

13.15 ಪ್ರಮೇಯ : (i) $(A^1) = A$.

(ii) ಸಂಕಲನವು ಮಾನ್ಯವಾದಾಗ, $(A + B)^1 = A^1 + B^1$.

(iii) ಗುಣಾಕಾರವು ಮಾನ್ಯವಾದಾಗ, $(AB)^1 = B^1 A^1$.

(iv) $(kA)^1 = kA^1$ (k [illegible]

ಸಾಧನೆ : (i) ಕ್ಕೆ ಸಂಬಂಧಿಸಿದಂತೆ :

$A = [\, a_{ij} \,]_{m \times n}$ ಎಂದಿರಲಿ

$\therefore \; A^1 = [a^1_{ij}]_{n \times m}$, ಇಲ್ಲಿ $a^1_{ij} = a_{ji}$ .... (*)

$\therefore \; (A^1) = [(a^1)^1_{ij}]_{m \times n}$, ಇಲ್ಲಿ $(a^1)^1_{ij} = a^1_{ij}$

$$= [a_{ij}]_{m \times n} = A \left\{ \begin{array}{l} = a_{ij} \\ [(*) \text{ ದಿಂದ}] \end{array} \right.$$

(ii) ಕ್ಕೆ ಸಂಬಂಧಿಸಿದಂತೆ :

$A = [a_{ij}]_{m \times n}$, $B = [\, b_{ij} \,]_{m \times n}$ ಎಂದಿರಲಿ,

$\therefore \; A^1 = [\, a^1_{ij} \,]_{n \times m}$; $B^1 = [b^1_{ij}]_{n \times m}$

$A + B = C = [c_{ij}]_{m \times n}$ ಎಂದಿರಲಿ

ಇಲ್ಲಿ $c_{ij} = a_{ij} + b_{ij}$ .... (*)

ಈಗ $(A + B)^1 = C^1 = [c^1_{ij}]_{n \times m}$,

ಇಲ್ಲಿ $c^1_{ij} = c_{ji} = a_{ji} + b_{ji}$ [(*) ದಿಂದ]

$= a^1_{ij} + b^1_{ij}$ [ಏಕೆ ?]

$\therefore \; (A + B)^1 = [a^1_{ij} + b^1_{ij}]_{n \times m}$

$= [a^1_{ij}]_{n \times m} + [b^1_{ij}]_{n \times m}$

$= A^1 + B^1.$

(iii) ಕ್ಕೆ ಸಂಬಂಧಿಸಿದಂತೆ :

$A=[a_{ij}]_{m \times n}$; $B=[b_{jk}]_{n \times p}$

$AB=C=[c_{ik}]_{m \times p}$ ಎಂದಿರಲಿ

ಈಗ $(AB)^1=C^1=[c^1_{ik}]_{p \times m}$ ·

ಇಲ್ಲಿ $C^1_{ik} = C_{ki}$ = [Aದ kನೆಯ ಅಡ್ಡಸಾಲು] [Bದ iನೆಯ ನೀಟಸಾಲು]

$$= [a_{k1}\ a_{k2} \ldots a_{kn}] \begin{bmatrix} b_{1i} \\ b_{2i} \\ \vdots \\ b_{ni} \end{bmatrix}$$

$$= [\sum_{j=1}^{n} a_{kj}\, b_{ij}]$$

$$= [\sum_{j=1}^{n} b^1_{ij}\, a^1_{jk}] \quad \ldots \quad \text{[ಏಕೆ?]}$$

= [B^1ದ iನೆಯ ಅಡ್ಡಸಾಲು] [A^1ದ kನೆಯ ನೀಟಸಾಲು]

= [$B^1 A^1$ದ (i,k)ನೆಯ ಮೂಲಾಂಶ]

C^1_{ik} = $(AB)^1$ದ (i,k)ನೆಯ ಮೂಲಾಂಶ

= B^1A^1ದ (i,k)ನೆಯ ಮೂಲಾಂಶ.

$\therefore \quad (AB)^{1} = B^{1}A^{1}$

ಅನುಮಿತ : ಗುಣಾಕಾರವು ಮಾನ್ಯವಾದಾಗ,

$$\left.\begin{aligned} (ABC)^{1} &= C^{1}B^{1}A^{1} \\ (ABCD)^{1} &= D^{1}C^{1}B^{1}A^{1} \end{aligned}\right\} \quad \cdots\cdots \quad (13.14.1)$$

ಇದರ ಸಾಧನೆಯನ್ನು ಓದುಗನಿಗೇ ಬಿಡಲಾಗಿದೆ.

ಉದಾಹರಣೆ : $A = \begin{bmatrix} 1 & 0 \\ 3 & 1 \end{bmatrix}, \quad B = \begin{bmatrix} 2 & 1 \\ -1 & 0 \end{bmatrix}$

$$A^{1} = \begin{bmatrix} 1 & 3 \\ 0 & 1 \end{bmatrix}; \quad B^{1} = \begin{bmatrix} 2 & -1 \\ 1 & 0 \end{bmatrix}$$

$$AB = \begin{bmatrix} 1 & 0 \\ 3 & 1 \end{bmatrix} \begin{bmatrix} 2 & 1 \\ -1 & 0 \end{bmatrix} = \begin{bmatrix} 2 & 1 \\ 5 & 3 \end{bmatrix}$$

$$B^{1}A^{1} = \begin{bmatrix} 2 & -1 \\ 1 & 0 \end{bmatrix} \begin{bmatrix} 1 & 3 \\ 0 & 1 \end{bmatrix} = \begin{bmatrix} +2 & 5 \\ 1 & 3 \end{bmatrix} = (AB)^{1}$$

13.16 ಸಮಾಂಗ ಮತ್ತು ವಿಷಮಾಂಗ ಮಂಡಲಗಳು :

ಸಮಾಂಗ ಮಂಡಲ : n ನೇ ಪ್ರಮಾಣದ ಚೌಕಮಂಡಲ

$$A = A^1$$

ಆದಾಗ A ಮಂಡಲವನ್ನು ಸಮಾಂಗ ಮಂಡಲವೆಂದು ಕರೆಯುತ್ತೇವೆ.

ಉದಾ : $\begin{bmatrix} 1 & 2 & 3 \\ 2 & 3 & 6 \\ 3 & 6 & 7 \end{bmatrix}$: ಇದು ಒಂದು ಸಮಾಂಗ ಮಂಡಲ.

$$A = A^1 \Leftrightarrow a_{ij} = a^1_{ji}$$

$$= a_{ij} \cdot$$

ಇದರಿಂದ ಗೊತ್ತಾಗುವ ವಿಷಯ : i, j ಗಳ ಎಲ್ಲಾ ಬೆಲೆಗಳಿಗೂ $a_{ji} = a_{ji}$ ಆ. ಆ. ಮಾತ್ರ A ಯು ಸಮಾಂಗ ಮಂಡಲವಾಗುತ್ತದೆ.

ವಿಷಮಾಂಗ ಮಂಡಲ : n ನೇ ಪ್ರಮಾಣದಚೌಕಮಂಡಲ;

$$A = -A^1$$

ಆದಾಗ, A ಮಂಡಲವನ್ನು ವಿಷಮಾಂಗ ಮಂಡಲವೆಂದು ಕರೆಯುತ್ತೇವೆ.

$$A = -A^1 \Leftrightarrow a_{ij} = -a^1_{ij}$$

$$= -a_{ji}$$

$j = i$ ಆದಾಗ, $a_{ii} = -a_{ii}$

$$\Rightarrow a_{ij} + a_{ji} = O$$

$$\Rightarrow 2a_{ii} = O$$

$$\Rightarrow a_{ii} = O$$

$\Rightarrow$ ಕರ್ಣ ಮೂಲಾಂಶ $= O$

ಇದರಿಂದ ತಿಳಿಯುವ ವಿಷಯ :

(i) i, jಗಳ ಎಲ್ಲಾ ಬೆಲೆಗಳಿಗೂ $a_{ij} = -a_{ij}$ ಆ. ಆ. ಮಾತ್ರ Aವು ಒಂದು ವಿಷಮಾಂಗ ಮಂಡಲವಾಗುತ್ತದೆ.

(ii) ವಿಷಮಾಂಗ ಮಂಡಲದ ಪ್ರತಿಯೊಂದು ಕರ್ಣ ಮೂಲಾಂಶವೂ ಶೂನ್ಯವಾಗುತ್ತದೆ. ಅರ್ಥಾತ್, ಒಂದು ಮಂಡಲದಲ್ಲಿ, ಯಾವುದೇ ಒಂದು ಕರ್ಣ ಮೂಲಾಂಶವು ಶೂನ್ಯಕ್ಕಿಂತ ಭಿನ್ನವಾದಾಗ, ದತ್ತ ಮಂಡಲವು ವಿಷಮಾಂಗ ಮಂಡಲವಾಗುವುದು ಅಶಕ್ಯ.

ಉದಾ : $\begin{bmatrix} 0 & i & -2 & 3 \\ -i & 0 & 4 & -5 \\ 2 & -4 & 0 & 4i \\ -3 & 5 & -4i & 0 \end{bmatrix}$: ಇದು ಒಂದು ವಿಷಮಾಂಗ ಮಂಡಲ.

13.17 **ಉದಾ :** A ಒಂದು nನೇ ಪ್ರಮಾಣದ ಚೌಕ ಮಂಡಲವೆಂದು ಭಾವಿಸೋಣ.

$X = A + A^1$ ಮತ್ತು $Y = A - A^1$

$\Rightarrow X^1 = (A + A)^1 \quad \Rightarrow \quad Y^1 = (A - A^1)^1$

$$= A^1 + (A^1)^1 \quad [\text{ಏಕೆ ?}] \qquad = A^1 - (A^1)^1$$

$$= A^1 + A \quad [\text{ಏಕೆ ?}] \qquad = A^1 - A$$

$$= A + A^1 \qquad = -(A - A^1)$$

$$= X \qquad = - Y$$

ಇದರಿಂದ ಗೊತ್ತಾಗುವ ವಿಷಯ : X, Yಗಳು ಅನುಕ್ರಮವಾಗಿ ಸಮಾಂಗ ಮತ್ತು ವಿಷಮಾಂಗ ಮಂಡಲಗಳಾಗಿವೆ. ಅರ್ಥಾತ್,

A ಒಂದು ಚೌಕಮಂಡಲವಾದಾಗ, $A + A^1$ ಮತ್ತು $A - A^1$ ಮಂಡಲಗಳು ಅನುಕ್ರಮವಾಗಿ ಸಮಾಂಗ ಮತ್ತು ವಿಷಮಾಂಗ ಮಂಡಲಗಳನ್ನು ರಚಿಸಲು ಈ ಅಂಶವನ್ನು ಉಪಯೋಗಿಸಿಕೊಳ್ಳಬಹುದು.

13.18 **ಟೀಕೆ :** Aಯು ಯಾವುದೇ ಒಂದು ಚೌಕಮಂಡಲವಾದರೆ,

$$A = B + C$$

ಇರುವಂತೆ, B ಎಂಬ ಸಮಾಂಗ ಮಂಡಲವು ಮತ್ತು C ಎಂಬ ವಿಷಮಾಂಗ ಮಂಡಲವು ಎಲ್ಲಾ ಸಂದರ್ಭಗಳಲ್ಲೂ ದೊರೆಯುತ್ತದೆ. ಇದು,

$$B = \frac{A + A^1}{2}, \quad C = \frac{A - A^1}{2}$$ ಎಂದು ತೆಗೆದುಕೊಳ್ಳುವುದರಿಂದ ಗೊತ್ತಾಗುತ್ತದೆ.

13.19 **ವ್ಯಾಖ್ಯೆ : A ಒಂದು $m \times n$ ವಿಧದ ಮಂಡಲವಾದಾಗ, $\bar{A}$ ಸಂಕೇತದಿಂದ ಸೂಚಿಸುವ A ಮಂಡಲದ ಅನುವರ್ತವನ್ನು**

$$\bar{A} = [\ \bar{a}_{ij}\ ]$$

ಎಂದು ನಿರೂಪಿಸುತ್ತೇವೆ. ಇಲ್ಲಿ $\bar{a}_{ij}$ ಮೂಲಾಂಶವು Aಮಂಡಲದ(i, j)ನೆಯ ಮೂಲಾಂಶ a_{ji} ದ ಅನುವರ್ತ ಮಿಶ್ರಸಂಖ್ಯೆ.

ಉದಾ : $\begin{bmatrix} 2+i & 1-i \\ 7+i11 & 5+i4 \\ -i8 & 11 \end{bmatrix}$; $\bar{A} = \begin{bmatrix} 2-i & 1+i \\ 7-i11 & 5-i4 \\ i8 & 11 \end{bmatrix}$

13.20 ಪ್ರಮೇಯ : A ಒಂದು ಚೌಕಮಂಡಲವೆಂದು ಭಾವಿಸೋಣ. ಆಗ

(i) $\overline{(\bar{A})} = A$ ಇನ್ನು ಮುಂದೆ $(\bar{A})$ ಎಂಬುದನ್ನು $\bar{A}$ ಎಂಬ ಸಂಕೇತದಿಂದ ಸೂಚಿಸೋಣ.

(ii) ಸಂಕಲನವು ಮಾನ್ಯವಾದಾಗ. $\overline{A+B} = \bar{A}+\bar{B}$.

(iii) ಗುಣಾಕಾರವು ಮಾನ್ಯವಾದಾಗ $\overline{AB} = \bar{A}\,\bar{B}$.

(iv) $\overline{kA} = \bar{k}\,\bar{A}$, ಇಲ್ಲಿ k = ಅದಿಶ.

(v) $(\bar{A}^1) = (\bar{A})^1$. ಇನ್ನು ಮುಂದೆ ಇದನ್ನು $\bar{A}^1$ ಅಥವಾ $\bar{A}^1$ ಎಂಬ ಸಂಕೇತದಿಂದ ಸೂಚಿಸೋಣ.

ಸಾಧನೆ : (i) ಕ್ಕೆ ಸಂಬಂಧಿಸಿದಂತೆ :

$A = [a_{ij}]_{m \times n}$ ಆದರೆ, $\bar{A} = [\bar{a}_{ij}]_{m \times n}$

ಈಗ $\overline{(\bar{A})} = [\overline{(\bar{a}_{ij})}]_{m \times n}$

$= (\bar{\bar{a}}_{ij})_{m \times n}$

$= [a_{ij}]_{m \times n}$ ....[2.51—(i)ರಿಂದ

$= A$

(ii) ಕ್ಕೆ ಸಂಬಂಧಿಸಿದಂತೆ :

$A+B=[a_{ij}+b_{ij}]_{m\times n}$ ಎಂದಿರಲಿ.

ಈಗ $\overline{A+B} = [\overline{a_{ij}+b_{ij}}]_{m\times n}$

$=[\bar{a}_{ij}+\bar{b}_{ij}]_{m\times n}$ [ಅ–2.4.8 ರಿಂದ]

$=[\bar{a}_{ij}]_{m\times n}+[\bar{b}_{ij}]_{m\times n}$

$=\bar{A}+\bar{B}$

(iii) ಕ್ಕೆ ಸಂಬಂಧಿಸಿದಂತೆ :

$A=[a_{ij}]_{m\times n}$ ಮತ್ತು $B=[b_{ik}]_{n\times p}$ ಎಂದಿರಲಿ.

$$\therefore \quad AB=\left[\sum_{j=1}^{n} a_{ij}\, b_{jk}\right]_{m\times p}$$

$$\therefore \quad \overline{AB}=\left[\overline{\left(\sum_{j=1}^{n} a_{ij}\, b_{jk}\right)}\right]_{m\times p}$$

$$=\left[\sum_{j=1}^{n}\overline{a_{ij}\, b_{jk}}\right]_{m\times p}$$ [ಅ-2.4.8 ರಿಂದ]

$$=\left[\sum_{j=1}^{n}\bar{a}_{ij}\, \bar{b}_{jk}\right]_{m\times p}$$ [— ,, —]

$=\bar{A}\,\bar{B}$ .... [ಏಕೆ ?]

(iv) ಕ್ಕೆ ಸಂಬಂಧಿಸಿದಂತೆ : $A=[a_{ij}]_{m\times n}$ ಎಂದಿರಲಿ.

$\therefore \quad kA = [\, ka_{ij} \,]_{m \times n}$

$\therefore \quad \overline{kA} = [\, \overline{ka_{ij}} \,]_{m \times n}$

$= [\, \bar{k}\, \bar{a}_{ij} \,]_{m \times n}$

$= \bar{k}\, [\, \bar{a}_{ij} \,]_{m \times n}$

$= \bar{k}\, \bar{A}.$

(v) ಕ್ಕೆ ಸಂಬಂಧಿಸಿದಂತೆ : $A = [\, a_{ij} \,]_{m \times n}$ ಎಂದಿರಲಿ.

$\therefore \quad \bar{A} = [\, \bar{a}_{ij} \,]_{m \times n}$

$\therefore (\bar{A})' = [\, \bar{a}'_{ji} \,]_{n \times m}\,;\ \bar{a}'_{ij} = \bar{a}_{ji}$

ಈಗ $\quad A' = [\, a'_{ij} \,]_{n \times m}\,;\ a'_{ij} = a_{ji}$

$\therefore \overline{(A')} = [\, \bar{a}'_{ij} \,]_{n \times m}\,; \bar{a}'_{ij} = \bar{a}_{ji}$

$\therefore \bar{a}'_{ij} = \bar{a}_{ji} = \bar{a}'_{ij}$

$\therefore \quad (\bar{A})' = \overline{(A')}\,.$

13.21 ವ್ಯಾಖ್ಯೆ : A ಒಂದು ಚೌಕಮಂಡಲವಾದಾಗ, $\overset{*}{A}$ ಸಂಕೇತ ದಿಂದ ಸೂಚಿಸುವ A ಮಂಡಲದ ಪಲ್ಲವರ್ತವನ್ನು

$$A^{*} = \overline{(A')}$$

ಎಂದು ನಿರೂಪಿಸುತ್ತೇವೆ. ಅಂದರೆ, A ದ ಪಲ್ಲಟದ ಅನುವರ್ತವನ್ನು A ಮಂಡಲದ ಪಲ್ಲವರ್ತವೆಂದು ಕರೆಯುತ್ತೇವೆ.

ಉದಾ: $A = \begin{bmatrix} 1 & 2+i \\ i & 1-i3 \end{bmatrix}$; $\bar{A} = \begin{bmatrix} 1 & 2-i \\ -i & 1+i3 \end{bmatrix}$.

$$\therefore \; A^{*} = \bar{A}' = \bar{A}^{t} = \begin{bmatrix} 1 & 2-i \\ 2-i & 1+i3 \end{bmatrix}.$$

13.22 ಹರ್ಮಿಷಿಯನ್ ಮತ್ತು ವಿಷಮ ಹರ್ಮಿಷಿಯನ್ ಮಂಡಲಗಳು :

ಹರ್ಮಿಷಿಯನ್ ಮಂಡಲ : n ನೇ ಪ್ರಮಾಣದ ಚೌಕ ಮಂಡಲ

$$A = A^{*}$$

ಆದಾಗ, A ಮಂಡಲವನ್ನು ಹರ್ಮಿಷಿಯನ್ ಮಂಡಲ ಎಂದು ಕರೆಯುತ್ತೇವೆ.

$A = [\, a_{ij} \,]_{n \times n}$ ಎಂದಿರಲಿ.

ಈಗ $A^{*} = (\bar{A})' = [\bar{a}_{ij} \,]_{n \times n}$: $\bar{a}'_{ij} = \bar{a}_{ji}$

$A = A^{*} \Leftrightarrow a_{ij} = \bar{a}_{ji}$

$i = j$ ಆದಾಗ, $a_{ii} = \bar{a}_{ii}$

$\Rightarrow a_{ij}$ = ವಾಸ್ತವ ಸಂಖ್ಯೆ [ಅ-2.4.8 –(iv) ರಿಂದ]

ಇದರಿಂದ ತಿಳಿಯುವ ವಿಷಯ : i, j ಗಳ ಎಲ್ಲಾ ಬೆಲೆಗಳಿಗೂ $a_{ij} = \bar{a}_{ji}$ ಆ.ಆ. ಮಾತ್ರ Aಯು ಒಂದು ಹರ್ಮಿಷಿಯನ್ ಮಂಡಲವಾಗುತ್ತದೆ; ಹರ್ಮಿಷಿಯನ್ ಮಂಡಲದ ಪ್ರತಿಯೊಂದು ಕರ್ಣಮೂಲಾಂಶವೂ ವಾಸ್ತವ ಸಂಖ್ಯೆ.

ಉದಾ:
$$\begin{bmatrix} 2 & 3+i & -11-i8 \\ 3-i & 0 & 5+i6 \\ -11+i8 & 5-i6 & 12 \end{bmatrix};$$

ಇದು ಒಂದು ಹರ್ಮಿಟಿಯನ್ ಮಂಡಲ.

ವಿಷಮ ಹರ್ಮಿಷಿಯನ್ ಮಂಡಲ : n ನೇ ಪ್ರಮಾಣದ ಚೌಕಮಂಡಲ

$$A = -A^*$$

ಆದಾಗ, A ಮಂಡಲವನ್ನು ವಿಷಮ ಹರ್ಮಿಷಿಯನ್ ಮಂಡಲ ಎಂದು ಕರೆಯುತ್ತೇವೆ.

$$A = -A^* \iff a_{ij} = -\overline{a_{ji}}$$

$j = i$ ಆದಾಗ $a_{ii} = -\overline{a_{ii}}$

$\Rightarrow \quad a_{ii} + \overline{a_{ii}} = 0$

$\Rightarrow \quad a_{ij}$ ಒಂದು ಊಹ್ಯಾ ಸಂಖ್ಯೆ.

[ಅ-2.4.8-(v) ರಿಂದ]

ಇದರಿಂದ ತಿಳಿಯುವ ವಿಷಯ : i,j ಗಳ ಎಲ್ಲಾ ಬೆಲೆಗಳಿಗೂ $a_{ij} = -\overline{a_{ji}}$ **ಆ.ಆ. ಮಾತ್ರ Aಯು ಒಂದು ವಿಷಮ ಹರ್ಮಿಷಿಯನ್ ಮಂಡಲವಾಗುತ್ತದೆ ವಿಷಮ ಹರ್ಮಿಷಿಯನ್ ಮಂಡಲದ ಪ್ರತಿಯೊಂದು ಕರ್ಣಮೂಲಾಂಶವೂ ಊಹ್ಯಾ ಸಂಖ್ಯೆ.**

ಉದಾ :
$$\begin{bmatrix} i & 2+i3 & -4-i11 \\ -2+i3 & 0 & 7+i8 \\ -4+i11 & -7+i8 & i11 \end{bmatrix}$$
: ಇದು ವಿಷಮ ಹರ್ಮಿಷಿಯನ್ ಮಂಡಲ.

13.23 ಪ್ರಮೇಯ : (i) $(A^*)^* = A$.

(ii) $(AB)^* = B^* A^*$.

ಸಾಧನೆ : (i) ಕ್ಕೆ ಸಂಬಂಧಿಸಿದಂತೆ :

$$A^* = (\bar{A})'$$

$$\therefore \quad (A^*)' = \{(\bar{A})'\}'$$

$$= \quad \bar{A} \quad \ldots \qquad [\text{ಏಕೆ ?}]$$

$$\therefore \quad \overline{(A^*)} = (\bar{A})'$$

$$\Rightarrow \quad (A^*)^* = A$$

(ii) ಕ್ಕೆ ಸಂಬಂಧಿಸಿದಂತೆ :

$$\overline{AB} = \bar{A}\,\bar{B}$$

$$(\overline{AB})' = (\bar{A}\,\bar{B})'$$

$$= (\bar{B})' \quad (\bar{A})' \qquad [\text{ಏಕೆ ?}]$$

$$= B^* A^*$$

$$\therefore \quad (AB)^* = B^* A^*.$$

ಅನುಮಿತ : $(ABCD\ldots)^* = \ldots D^* C^* B^* A^* \ldots$ (13.21.1)
ಇದರ ಸಾಧನೆಯನ್ನು ಓದುಗನಿಗೆ ಬಿಡಲಾಗಿದೆ.

13.24 ಉದಾ : H ಒಂದು ಹರ್ಮಿಷಿಯನ್ ಮಂಡಲವಾದಾಗ, $A^* HA$ ಕೂಡ ಒಂದು ಹರ್ಮಿಷಿಯನ್ ಮಂಡಲವಾಗುತ್ತದೆ.

$P = A^* HA$ ಎಂದಿರಲಿ.

ಈಗ $P^* = (A^* H A)^*$

$= A^* H^* (A)^*$ .... [(13.21.1)ರಿಂದ]

$= A^* H A$ [$\because H = H^*$]

$= P$

$\Rightarrow$ P ಒಂದು ಹರ್ಮಿಷಿಯನ್ ಮಂಡಲ.

$\therefore$ $A^* H A$ ಕೂಡ ಒಂದು ಹರ್ಮಿಷಿಯನ್ ಮಂಡಲ.

ಅಭ್ಯಾಸ 13.4

1. ದತ್ತ ಮಂಡಲಗಳ ಪಲ್ಲಟವನ್ನು ಬರೆಯಿರಿ.

$$[0], \; [1 \;\; 2 \;\; 3], \; \begin{bmatrix} 2 \\ 3 \\ 4 \end{bmatrix}, \; \begin{bmatrix} 2 & 3 & 4 \\ -1 & 0 & 2 \\ 1 & 7 & 8 \end{bmatrix}$$

$$\begin{bmatrix} l & m & n \\ m & p & q \\ n & q & r \end{bmatrix}$$

2. $A = \begin{bmatrix} 1 & 2 \\ 3 & 4 \\ 0 & 1 \end{bmatrix}$, $B = \begin{bmatrix} -1 & 0 & 2 \\ 3 & -1 & 1 \end{bmatrix}$

ಎಂದಿರಲಿ. AB,

A^1, B^1ಮಂಡಲಗಳನ್ನು ಬರೆಯಿರಿ. $(AB)' = B'A'$ ಎಂಬುದನ್ನು ತಾಳೆನೋಡಿರಿ.

3. 1×1, 2×2, 3×3, ಮತ್ತು 4×4 ವಿಧಗಳ ಸಮಾಂಗ ಮತ್ತು ವಿಷಮಾಂಗ ಮಂಡಲಗಳಿಗೆ ತಲಾ ಒಂದೊಂದು ಉದಾಹರಣೆಯನ್ನು ಕೊಡಿರಿ.

4. $A = \begin{bmatrix} 1 & 2 & 3 \\ 0 & 1 & 4 \\ 4 & -1 & 2 \end{bmatrix}$. A'ವನ್ನು ಬರೆಯಿರಿ. AA' ಒಂದು ಸಮಾಂಗ ಮಂಡಲವೆಂಬುದನ್ನು ತಾಳೆನೋಡಿರಿ. B ಒಂದು ಚೌಕಮಂಡಲವಾದಾಗ BB' ಒಂದು ಸಮಾಂಗ ಮಂಡಲವೆಂದು ಸಾಧಿಸಿರಿ.

5. $A = \begin{bmatrix} 1+i & 2-i3 & -4+i7 \\ 2 & -i & -2+i3 \end{bmatrix}$;

$$B = \begin{bmatrix} 2-i & 0 \\ -1-i & 7+i12 \\ 2 & 4-i5 \end{bmatrix}$$

ಇವುಗಳ ಅನುವರ್ತ, ಪಲ್ಲಟ, ಮತ್ತು ಪಲ್ಲವರ್ತಗಳನ್ನು ಬರೆಯಿರಿ. ತನ್ಮೂಲಕ ಕೆಳಗಿನವುಗಳನ್ನು ತಾಳೆನೋಡಿರಿ.

(i) $(\bar{A}) = (A)'$. (ii) $\overline{kA} = \bar{k}\,\bar{A}$.

(iii) $\overline{AB} = \bar{A}\,\bar{B}$. (iv) $(AB)^* = B^*A^*$.

(v) $\overline{BA} = \bar{B}\,\bar{A}$. (vi) $(BA)^* = A^*B^*$.

ಇಲ್ಲಿ ಕೊಟ್ಟಿರುವ ಮಂಡಲಗಳಲ್ಲಿ ಕೆಲವು ಹರ್ಮಿಷಿಯನ್ ಕೆಲವು ವಿಷಮ ಹರ್ಮಿಷಿಯನ್ ಮತ್ತು ಉಳಿದವು ಎರಡೂ ಅಲ್ಲ. ಮಂಡಲಗಳನ್ನು ವಿಂಗಡಿಸಿ.

(i) $\begin{bmatrix} 0 & i \\ -i & 0 \end{bmatrix}$, (ii) $\begin{bmatrix} 2i & 1-i \\ -1-i & 0 \end{bmatrix}$.

(iii) $\begin{bmatrix} 4 & 1-i \\ 1+i & 2 \end{bmatrix}$. (iv) $\begin{bmatrix} 1 & 1-i & 2 \\ 1+i & 3 & i \\ 2 & -i & 0 \end{bmatrix}$

(v) $\begin{bmatrix} 1 & 1-i & 2 \\ -1-i & 3i & i \\ -2 & i & 0 \end{bmatrix}$. (vi) $\begin{bmatrix} 1 & 1+i & 2+3i \\ 1-i & 2 & -i \\ 2-3i & i & 0 \end{bmatrix}$

(vii) $\begin{bmatrix} i & 1+i & 2-3i \\ -1+i & 2i & 1 \\ -2-3i & -1 & 0 \end{bmatrix}$. (viii) $\begin{bmatrix} a & h & g \\ h & b & f \\ g & f & c \end{bmatrix}$.

7. ಮೇಲಿನ ಲೆಕ್ಕ (vii) ರಲ್ಲಿ ಕೊಟ್ಟಿರುವ ಮಂಡಲವನ್ನು i ಯಿಂದ ಗುಣಿಸಿದಾಗ ಒಂದು ಹರ್ಮಿಷಿಯನ್ ಮಂಡಲವು ದೊರೆಯುತ್ತದೆಯೆಂದು ತೋರಿಸಿರಿ: (vi) ಮತ್ತು (vii) ರಲ್ಲಿರುವ ಮಂಡಲಗಳ ಅನುವರ್ತಗಳು ಅನುಕ್ರಮವಾಗಿ ಹರ್ಮಿಷಿಯನ ಮತ್ತು ವಿಷಮ ಹರ್ಮಿಷಿಯನ್ ಎಂದು ತೋರಿಸಿರಿ.

8. $A = \begin{bmatrix} 1-i & 3+i5 & -7+i2 \\ 2+i7 & 3-i4 & 5+i4 \\ -1 & 0 & -1+i \end{bmatrix}$. ಎಂದಿರಲಿ. Aದ ಪಲ್ಲವರ್ತ A^* ವನ್ನು ಬರೆಯಿರಿ. $A+A^*$, A^*A ಮತ್ತು AA^* ಗಳನ್ನು ಬರೆಯಿರಿ. ಇವುಗಳಲ್ಲಿ ಪ್ರತಿಯೊಂದೂ ಹರ್ಮಿಷಿಯನ್ ಮಂಡಲವೆಂಬುದನ್ನು ತಾಳೆ ನೋಡಿರಿ. Aವು ಯಾವುದೇ ಒಂದು ಚೌಕಮಂಡಲವಾದರೂ, ಈ ಗುಣಗಳು ಯುಕ್ತವಾಗುತ್ತವೆಂದು ಸಾಧಿಸಿರಿ. [ಸೂಚನೆ : $(A+A^*)^*$ ವನ್ನು ಪರಿಶೀಲಿಸಿರಿ.]

9. $AB = BA$ ಆದಾಗ $A'B' = B'A'$ ಎಂದೂ ಮತ್ತು $A^*B^* = B^*A^*$ ಎಂದೂ ಸಾಧಿಸಿರಿ.

10. A ಒಂದು ಹರ್ಮಿಷಿಯನ್ ಮಂಡಲವೆಂದು ತಿಳಿಯಿರಿ. ಆಗ $B+iC = A$ ಇರುವಂತೆ, B ಎಂಬ ಒಂದು ವಾಸ್ತವ ವಿಷಮಾಂಗ ಮಂಡಲವೂ ಮತ್ತು C ಎಂಬ ಒಂದು ವಾಸ್ತವ ಸಮಾಂಗ ಮಂಡಲವೂ ದೊರೆಯುತ್ತವೆಯೆಂದು ಸಾಧಿಸಿರಿ.

11. A ಒಂದು ವಿಷಮ ಹರ್ಮಿಷಿಯನ್ ಮಂಡಲವೆಂದು ತಿಳಿಯಿರಿ. ಆಗ $B+iC=A$ ಇರುವಂತೆ, B ಎಂಬ ಒಂದು ವಾಸ್ತವ ವಿಷಮಾಂಗ ಮಂಡಲವೂ ಮತ್ತು C ಎಂಬ ಒಂದು ವಾಸ್ತವ ಸಮಾಂಗ ಮಂಡಲವೂ ದೊರೆಯುತ್ತದೆಯೆಂದು ಸಾಧಿಸಿರಿ.

12. A ಒಂದು ಚೌಕಮಂಡಲವಾದಾಗ, $B+C=A$ ಇರುವಂತೆ, B ಎಂಬ ಹರ್ಮಿಷಿಯನ್ ಮಂಡಲವೂ ಮತ್ತು C ಎಂಬ ವಿಷಮ ಹರ್ಮಿಷಿಯನ್ ಮಂಡಲವೂ ದೊರೆಯುತ್ತದೆಯೆಂದೂ ಸಾಧಿಸಿರಿ. ಸೂಚನೆ: $\frac{A+A^*}{2}$, $\frac{A-A^*}{2}$ ಮಂಡಲಗಳನ್ನು ಗಮನಿಸಿರಿ.

13.25 ನಿರ್ಧಾರಕ ಸಂಬಂಧಕ

ವ್ಯಾಖ್ಯೆ : $A=[a_{ij}]_{m\times n}$ **ಮಂಡಲದಲ್ಲಿ** p **ಅಡ್ಡಸಾಲು ಮತ್ತು** q **ನೀಟಸಾಲುಗಳನ್ನು ಬಿಟ್ಟು** $[0\leq p<m]$: $[0\leq q<n]$**ಉಳಿದ ಎಲ್ಲಾ ಅಡ್ಡಸಾಲು ಮತ್ತು ನೀಟಸಾಲುಗಳನ್ನು ವಿಸರ್ಜಿಸಿದಾಗ ದೊರೆಯುವ** $p\times q$ **ವಿಧದ ಮಂಡಲವನ್ನು** A**ದ** $p\times q$ **ವಿಧದ ಉಪಮಂಡಲವೆಂದು ಕರೆಯುತ್ತೇವೆ.**

ಉದಾ : $A=\begin{bmatrix}1 & 2 & 3 & 4\\ 0 & 2 & 1 & 8\end{bmatrix}$ **ಆದರೆ,** $\begin{bmatrix}1 & 2\\ 0 & 2\end{bmatrix}$,

$$\begin{bmatrix}1 & 2 & 3\\ 0 & 2 & 1\end{bmatrix},$$

$$[1\ 2\ 3],\ [1],[8],\ \begin{bmatrix} 3 \\ 1 \end{bmatrix}$$, ಇತ್ಯಾದಿ. ಇವುಗಳಲ್ಲಿ ಪ್ರತಿ ಯೊಂದೂ A ಮಂಡಲದ ಉಪಮಂಡಲವಾಗುತ್ತವೆ.

ಟೀಕೆ : nನೇ ಪ್ರಮಾಣದ ಚೌಕಮಂಡಲ Aದಿಂದ a_{ij} ಮೂಲಾಂಶವಿರುವ ಅಡ್ಡಸಾಲು ಮತ್ತು ನೀಟಸಾಲುಗಳನ್ನು ವಿಸರ್ಜಿಸಿದಾಗ ದೊರೆಯುವ $n-1 \times n-1$ ವಿಧದ ಉಪಮಂಡಲವನ್ನು α_{ij} ಸಂಕೇತದಿಂದ ಸೂಚಿಸೋಣ.

ಉದಾ : (i) $A = \begin{bmatrix} a_{11} & a_{12} & a_{13} \\ a_{21} & a_{22} & a_{23} \\ a_{31} & a_{32} & a_{33} \end{bmatrix}$ ಆದರೆ,

$\alpha_{11} = a_{11}$ ಮೂಲಾಂಶವಿರುವ ಅಡ್ಡಸಾಲು ಮತ್ತು ನೀಟಸಾಲುಗಳನ್ನು ವಿಸರ್ಜಿಸಿದಾಗ ದೊರೆಯುವ Aಯ ಉಪಮಂಡಲ.

$$= \begin{bmatrix} a_{22} & a_{23} \\ a_{32} & a_{33} \end{bmatrix}$$

ಇದೇ ರೀತಿ, $\alpha_{33} = \begin{bmatrix} a_{11} & a_{12} \\ a_{21} & a_{22} \end{bmatrix}$; $\alpha_{23} = \begin{bmatrix} a_{11} & a_{12} \\ a_{31} & a_{32} \end{bmatrix}$

(ii) $A = \begin{bmatrix} 3 & 4 & 5 \\ 0 & 1 & 6 \\ -1 & 2 & 3 \end{bmatrix}$, ಆದರೆ, $\alpha_{11} = \begin{bmatrix} 1 & 6 \\ 2 & 3 \end{bmatrix}$

$$\alpha_{12} = \begin{bmatrix} 0 & 6 \\ -1 & 3 \end{bmatrix}.$$

(iii) $A = [a_{ij}]_{n \times n}$ ಒಂದು ಸಮಾಂಗ ಮಂಡಲವಾದಾಗ, $\alpha_{11}, \alpha_{22}, \ldots, \alpha_{nn}$, ಇವುಗಳಲ್ಲಿ ಪ್ರತಿಯೊಂದೂ ಒಂದು ಸಮಾಂಗ ಮಂಡಲವಾಗುತ್ತದೆ.

13.26 ಪ್ರತಿಯೊಂದು ಮಂಡಲದೊಂದಿಗೆ ಒಂದು ಸಂಬಂಧಕವನ್ನು ನಿಯೋಜಿಸಲು ಸಾಧ್ಯವೇ ? ಎಂಬ ಸಮಸ್ಯೆಯನ್ನು ಕುರಿತು ಚರ್ಚಿಸೋಣ. S ಎಂಬುದು ಎಲ್ಲಾ ಮಂಡಲಗಳ ಗಣ ಮತ್ತು R ವಾಸ್ತವ ಸಂಖ್ಯೆಗಳ ಗಣವಾದಾಗ,

$$f : S \rightarrow R$$

ಎಂಬ ಸಂಬಂಧಕವನ್ನು ಪರಿಶೀಲಿಸೋಣ. f ನ ನಿರೂಪಣೆಯನ್ನು ಕೆಳಗೆ ಕೊಟ್ಟಿರುವ ಯಾವುದೇ ಒಂದು ರೀತಿಯಲ್ಲಿ ಬೇಕಾದರೂ ಮಾಡಬಹುದು.

(i) $f([a_{ij}]_{m \times n}) = m \times n$ ಆದರೆ,

$$f\left(\begin{bmatrix} 1 & 0 & 2 \\ 3 & 1 & 4 \end{bmatrix}\right) = 2 \times 3 = 6;$$

$$f\left(\begin{bmatrix} 0 & 0 \\ 0 & 0 \\ 0 & 0 \end{bmatrix}\right) = 3 \times 2 = 6.$$

(ii) $f([a_{ij}]_{m \times n}) = \sum_{m=1}^{n} a_{mj}$ ಆದರೆ,

$$f\left(\begin{bmatrix} 1 & 2 & 3 & 4 \\ 0 & 1 & 4 & 5 \end{bmatrix}\right) = \sum_{j=1}^{4} a_{2j}$$

$$= 0 + 1 + 4 + 5 = 10.$$

(iii) $f([a_{ij}]_{m \times n}) = \sum_{j=1}^{r} a_{ji}$, $r =$ ಕನಿಷ್ಠ (m, n).

$$f\left(\begin{bmatrix} 1 & 2 & 3 & 4 \\ 0 & 4 & 3 & 1 \\ 1 & -7 & 0 & -5 \end{bmatrix}\right) = \sum_{i=1}^{3} a_{ii} = a_{11} + a_{22} + a_{33}$$

$$= 1 + 4 + 0 = 5.$$

(iv) $f([a_{ij}]_{m \times n}) = \left(\sum_{j=1}^{n} a_{ij}\right) f(\alpha_{11})$,

ಮತ್ತು $f([a_{ij}]_{1\times n}) = \sum_{j=1}^{n} a_{j1}$ ಎಂದಿರಲಿ.

$$\text{ಆಗ, } f\left(\left|\begin{bmatrix} 1 & 2 & 3 & 4 \\ 2 & 3 & 4 & 5 \\ 3 & 4 & 5 & 6 \end{bmatrix}\right|\right)$$

$$= \left(\sum_{j=1}^{4} a_{1j}\right) f(\alpha_{11})$$

$$= (1+2+3+4)\ f\left(\left|\begin{bmatrix} 3 & 4 & 5 \\ 4 & 5 & 6 \end{bmatrix}\right|\right)$$

$$= 10 \times \left(\sum_{j=1}^{3} a_{ij}\right) \quad f([4\ 5\ 6])$$

$$= 10 \times (3+4+5) \times (4+5+6)$$

$$= 10 \times 12 \times 15 = 1800.$$

ಮೇಲೆ ನಿರೂಪಿಸಿರುವ ಸಂಬಂಧಕಗಳು [(i) ರಿಂದ (iv)]

$f : S \to R$ ಎಂಬ ಸಂಬಂಧಕಕ್ಕೆ ವಿವಿಧ ಉದಾಹರಣೆಗಳಾಗಬಲ್ಲವೇ ಹೊರತು, ಮಂಡಲಗಳ ಗುಣಗಳನ್ನು ಆಳವಾಗಿ ಅಭ್ಯಸಿಸಲು ಸಹಕಾರಿಯಾಗುವುದಿಲ್ಲ. ಆದ್ದರಿಂದ, ಯಾವರೀತಿ f ಸಂಬಂಧಕದ ನಿರೂಪಣೆ ಮಾಡಿದಲ್ಲಿ, ಸಾಮಾನ್ಯವಾಗಿ ಗಣಿತಶಾಸ್ತ್ರದ ಹಲವು ಶಾಖೆಗಳ ಅಧ್ಯಯನಕ್ಕೆ ಮತ್ತು ವಿಶೇಷವಾಗಿ, ಮಂಡಲಗಳ

ಅಧ್ಯಯನಕ್ಕೆ ಸಹಕಾರಿಯಾಗುತ್ತದೆ ಎಂಬ ಪ್ರಶ್ನೆ ಮೂಡುತ್ತದೆ. ಇದಕ್ಕೆ ಉತ್ತರ ಕೆಳಗೆ ವಿವರಿಸಿರುವ

$$\triangle : M \to R$$

ಸಂಬಂಧಕದಲ್ಲಿ ದೊರಕುತ್ತದೆ. ಇಲ್ಲಿ $M = \{m \,/\, m = \text{ಚೌಕಮಂಡಲ}\} \subset S =$ ಮಂಡಲಗಳ ಗಣ.

13.27 ವ್ಯಾಖ್ಯೆ : ಚೌಕಮಂಡಲಗಳ ಗಣ M ದಿಂದ ವಾಸ್ತವ ಸಂಖ್ಯೆಗಳ ಗಣ Rಗೆ ಇರುವ ಸಂಬಂಧಕ

$$\triangle : M \to R$$

ಎಂಬುದರ ನಿರೂಪಣೆಯನ್ನು

(i) $\triangle([a_{11}]) = a_{11}$,

(ii) $A = [\, a_{ij} \,]_{n \times n}$ **ಇರುವಾಗ,**

$$\triangle([\, a_{ij} \,]_{n \times n}) = \sum_{j=1}^{n} (-1)^{1+j} a_{1j} \; \triangle(\alpha_{1j})$$

ಎಂದು ಮಾಡುತ್ತೇವೆ. ಹೀಗೆ ನಿರೂಪಿಸಿದ △ ವನ್ನು ನಿರ್ಧಾರಕ ಸಂಬಂಧಕವೆಂದು ಕರೆಯುತ್ತೇವೆ.

ಉದಾಹರಣೆಗಳು : (i) $A = [5]$; $\triangle\,(A) = 5$.

(ii) $A = \begin{bmatrix} 2 & 3 \\ 4 & -5 \end{bmatrix}$.

$$\triangle(A) = \sum_{j=1}^{2} (-1)^{1+j} a_{1j} \triangle(\alpha_{1j})$$

$$= (-1)^{1+1} a_{11} \triangle(\alpha_{11}) + (-1)^{1+2} a_{12} \triangle(\alpha_{12})$$

$$= 2 \triangle([-5]) - 3 \triangle([4])$$

$$= 2(-5) - 3(4) \quad \ldots \qquad [\text{ಏಕೆ ?}]$$

$$= -22.$$

ಟೀಕೆ : A ವು 2ನೇ ಪ್ರಮಾಣದ ಚೌಕಮಂಡಲವಾದಾಗ, ಸಾಮಾನ್ಯವಾಗಿ ಕೆಳಗಿನ ಸೂತ್ರದಿಂದ $\triangle(A)$ ಬೆಲೆಯನ್ನು ಕಂಡುಹಿಡಿಯುತ್ತೇವೆ.

$$\triangle\left(\begin{bmatrix} a_{11} & a_{12} \\ a_{21} & a_{22} \end{bmatrix}\right) = a_{11}a_{22} - a_{12}a_{21} \quad \ldots \quad (13.27.1)$$

ಉದಾ : (a) $\triangle\left(\begin{bmatrix} 2 & 3 \\ 4 & -5 \end{bmatrix}\right) = 2.-5 - 3.4 = -22.$

(b) $\triangle\left(\begin{bmatrix} \sin\theta & \cos\theta \\ -\cos\theta & \sin\theta \end{bmatrix}\right) = \sin\theta.\sin\theta - \cos\theta.-\cos\theta$

$$\text{(iii)}\quad A = \begin{bmatrix} 1 & 2 & 3 \\ 2 & 3 & 4 \\ 3 & 4 & 5 \end{bmatrix} \text{ ಆದಾಗ } \Delta(A) = ?$$

$$\Delta(A) = \sum_{j=1}^{3} (-1)^{l+j} a_{ij} \quad \Delta\ (\alpha)_{ij}$$

$$a_{11}\ \Delta(\alpha_{11}) - a_{12}\Delta(\alpha^{12}) + a_{13}\Delta(\alpha_{13})$$

$$= 1.\ \Delta\left|\begin{bmatrix} 3 & 4 \\ 4 & 5 \end{bmatrix}\right| - 2\ \Delta\left|\begin{bmatrix} 2 & 4 \\ 3 & 5 \end{bmatrix}\right|$$

$$+3\ \Delta\left|\begin{bmatrix} 2 & 3 \\ 3 & 4 \end{bmatrix}\right|$$

$$= 1.(3.5-4.4) - 2.(2.5-4.3) + 3(2.4-3.3)$$


$$= 0$$

Aಯು ಯಾವುದೇ 3ನೇ ಪ್ರಮಾಣದ ಮಂಡಲವಾದಾಗ $\Delta(A)$ ಬೆಲೆಯನ್ನು ಕಂಡುಹಿಡಿಯಲು ಕೆಳಗಿನ ಸೂತ್ರವನ್ನು ಉಪಯೋಗಿಸುವುದು ವಾಡಿಕೆಯಲ್ಲಿದೆ.

1. ದತ್ತ ಮಂಡಲದ ಬದಿಯಲ್ಲಿ ಅದರ ಮೊದಲ ಎರಡು ನೀಟಸಾಲುಗಳನ್ನು ಆವರ್ತಿಸೋಣ.

$$\left[\begin{array}{ccc} 1 & 2 & 3 \\ 2 & 3 & 4 \\ 3 & 4 & 5 \end{array}\right] \begin{array}{cc} 1 & 2 \\ 2 & 3 \\ 3 & 4 \end{array}$$

2. ಹೀಗೆ ಪಡೆದ ವಿನ್ಯಾಸವನ್ನು ಕೆಳಗಿನಂತೆ ಛೇದಿಸೋಣ,



(13.27.2)

3. ಆಗ Δ (A)= 'ಕೆಳಮುಖ ಬಾಣಗಳು ಗುರ್ತಿಸುವ ಗುಣಲಬ್ಧಗಳ ಮೊತ್ತ'—'ಮೇಲ್ಮುಖ ಬಾಣಗಳು ಗುರ್ತಿಸುವ ಗುಣಲಬ್ಧಗಳ ಮೊತ್ತ.'

ಅಂದರೆ, $\Delta(A)=(1.3.5+2.4.3+3.2.4) - (3.3.3+4.4.1+5.2.2)$

$=0.$

13.28 **ಟೀಕೆ :** ನಿರ್ಧಾರಕ ಸಂಬಂಧಕದ ಅಭ್ಯಾಸವನ್ನು ಮುಂದುವರೆಸುವ ಮುನ್ನ ಒಂದು ಮಾತನ್ನು ಹೇಳಬಯಸುತ್ತೇವೆ. ಆದಿಯಲ್ಲಿ ಗಣಿತಜ್ಞರು, ನಿರ್ಧಾರಕ ಸಂಬಂಧಕವನ್ನು, ಸರಳವಾಗಿ **ನಿರ್ಧಾರಕ** ಎಂದು ಕರೆದಿದ್ದಾರೆ. ರೂಢಿಯಲ್ಲಿ ಸಾಮಾನ್ಯವಾಗಿ ಈ ಪದವೇ ಬಳಕೆಯಲ್ಲಿರುವುದರಿಂದ, ಇನ್ನು ಮುಂದೆ ಈ ಪುಸ್ತಕದುದ್ದಕ್ಕೂ **'ನಿರ್ಧಾರಕ ಸಂಬಂಧಕ'** ಎನ್ನುವ ಪದದ ಬದಲು **'ನಿರ್ಧಾರಕ'** ಎಂಬ ಪದವನ್ನು ಉಪಯೋಗಿಸುತ್ತೇವೆ. ಅಲ್ಲದೆ $\triangle(A)$ **ಎಂಬ ಸಂಕೇತದ ಬದಲು '|A|' [ನಿರ್ಧಾರಕ A ಎಂದು ಓದಿ] ಎಂಬ ಸಂಕೇತವನ್ನು ಉಪಯೋಗಿಸುತ್ತೇವೆ.**

$A = [a_{ij}]_{n \times n}$ ಆದಾಗ

$$|A| = \begin{vmatrix} a_{11} & a_{12} & \cdots & a_{1n} \\ a_{21} & a_{22} & \cdots & a_{2n} \\ \vdots & \vdots & \vdots & \vdots \\ a_{n1} & a_{n2} & \cdots & a_{nn} \end{vmatrix}$$

ಎಂಬುದನ್ನು nನೇ ಪ್ರಮಾಣದ ನಿರ್ಧಾರಕವೆಂದು ಕರೆಯುತ್ತೇವೆ ಮತ್ತು $|A| = \Delta\ (A)$ ಎಂದು ಒಪ್ಪಿಕೊಳ್ಳುತ್ತೇವೆ.

13.29 **ವ್ಯಾಖ್ಯೆ :** $A = [a_{ij}]_{n \times n}$ **ಆಗಿರಲಿ. ಸಂಕೇತದಲ್ಲಿ** A_{ij} **ಎಂದು ಬರೆಯುವ,** a_{ij} **ಮೂಲಾಂಶದ ಅನುಗುಣಕವನ್ನು**

$$A_{ij} = (-1)^{i+j} \ |\propto_{ij}|$$

ಎಂದು ನಿರೂಪಿಸುತ್ತೇವೆ. ಇಲ್ಲಿ $\propto_{ij}$ ವು A ಮಂಡಲದಿಂದ a_{ij} ಮೂಲಾಂಶವಿರುವ ಅಡ್ಡ ಸಾಲು ಮತ್ತು ನೀಟ ಸಾಲುಗಳನ್ನು ವಿಸರ್ಜಿಸಿದಾಗ ದೊರೆಯುವ ಉಪ ಮಂಡಲವೆಂಬುದನ್ನು ಗಮನಿಸೋಣ. ಅಲ್ಲದೆ,

$$|A| = \sum_{j=1}^{n} (-1)^{1+j} a_{1j} \ \Delta(\propto_{1j})$$

$$= \sum_{j=1}^{n} a_{1j} (-1)^{1+j} \ |\propto_{1j}|$$

$$= \sum_{j=1}^{n} a_{1j} \quad A_{1j}$$

$$= a_{11} \, A_{11} + a_{12} \, A_{12} + \dots + a_{1n} \, A_{1n}.$$

ಎಂಬುದನ್ನು ನೆನಪಿದಲ್ಲಿಡೋಣ.

ಉದಾ : $A = \begin{bmatrix} 2 & 3 & -5 & 4 \\ 4 & 2 & 3 & 1 \\ -7 & 6 & 4 & 3 \\ 5 & 6 & 1 & 2 \end{bmatrix}$; $|A| = ?$

$$\therefore \quad |A| = (2) \begin{vmatrix} 2 & 3 & 1 \\ 6 & 4 & 3 \\ 6 & 1 & 2 \end{vmatrix} - (3) \begin{vmatrix} 4 & 3 & 1 \\ -7 & 4 & 3 \\ 5 & 1 & 2 \end{vmatrix}$$

[(13.29.1) ರಿಂದ]

$$+ (-5) \begin{vmatrix} 4 & 2 & 1 \\ -7 & 6 & 3 \\ 5 & 6 & 2 \end{vmatrix} - (4) \begin{vmatrix} 4 & 2 & 3 \\ -7 & 6 & 4 \\ 5 & 6 & 1 \end{vmatrix}$$

(13.27.2) ರಲ್ಲಿರುವ ಸೂತ್ರದಿಂದ, ಮೇಲಿರುವ 3ನೇ ಪ್ರಮಾಣದ ನಿರ್ಧಾರಕಗಳನ್ನು ವಿಸ್ತರಿಸುವುದರಿಂದ,

$$= (2)(10) - (3)(80) + (-5)(-38) - (4)(-234)$$

$$= 906$$

ಈ ನಿರ್ಧಾರಕ Aಯು ಬೆಲೆಯನ್ನು 13.30 ರಲ್ಲಿ ನಮೂದಿಸಿರುವ ನಿರ್ಧಾರಕಗಳ ಮೂಲಗುಣಗಳನ್ನು ಉಪಯೋಗಿಸಿ.

13.33 **ಉದಾ :** Aಯು ಕಂಡುಹಿಡಿದಿದ್ದೇವೆ. ಓದುಗನು ಎರಡು ವಿಧಾನಗಳಲ್ಲಿನ ಸಾಪೇಕ್ಷ ಅನುಕೂಲ ಹಾಗೂ ಅನಾನುಕೂಲಗಳನ್ನು ತುಲನೆಮಾಡುವುದೊಳ್ಳೆಯದು.

ಅಭ್ಯಾಸ 13.5

1. $A = \begin{bmatrix} 4 & 5 & 6 \\ 5 & 6 & 7 \\ 6 & 7 & 8 \end{bmatrix}$ ಆದರೆ $|A| = 0$ ಎಂದು ತೋರಿಸಿರಿ.

2. $\left| \begin{bmatrix} a & h & g \\ h & b & f \\ g & f & c \end{bmatrix} \right| = abc + 2fgh - af^2 - bg^2 - ch^2$ ಎಂಬುದನ್ನು ತಾಳೆ ನೋಡಿರಿ.

3. $A = [a_{ij}]_{3 \times 3} = \begin{bmatrix} 2 & 3 & 5 \\ 1 & 0 & -1 \\ 4 & 3 & 7 \end{bmatrix}$ ಎಂದಿರಲಿ. ಕೆಳಗಿನವುಗಳನ್ನು ತಾಳೆ ನೋಡಿರಿ,

(i) $|A| = -12$

(ii) $|A| = a_{21} A_{21} + a_{22} A_{22} + a_{23} A_{23}$. ಇದನ್ನು ನಿರ್ಧಾರಕ Aದ 2ನೇ ಅಡ್ಡ ಸಾಲಿನ ವಿಸ್ತರಣೆಯೆನ್ನುತ್ತೇವೆ.

(iii) $|A| = a_{31} A_{31} + a_{32} A_{32} + a_{33} A_{33}$. ಇದನ್ನು $|A|$ಯ 3ನೇ ಅಡ್ಡಸಾಲಿನ ವಿಸ್ತರಣೆಯೆನ್ನುತ್ತೇವೆ.

(iv) $a_{11} A_{11} + a_{21} A_{21} + a_{31} A_{31} = |A|$. ಇದನ್ನು ನಿರ್ಧಾರಕ Aಯ 1ನೇ ನೀಟಸಾಲಿನ ವಿಸ್ತರಣೆಯೆನ್ನುತ್ತೇವೆ.

(v) $|A| = a_{12} A_{12} + a_{22} A_{22} + a_{32} A_{32}$. ಇದನ್ನು $|A|$ಯ 2ನೇ ನೀಟಸಾಲಿನ ವಿಸ್ತರಣೆಯೆನ್ನುತ್ತೇವೆ.

(vi) $|A| = a_{13} A_{13} + a_{23} A_{23} + a_{33} A_{33}$. ಇದನ್ನು ನಿರ್ಧಾರಕ Aಯ 3ನೇ ಅಡ್ಡಸಾಲಿನ ವಿಸ್ತರಣೆಯೆನ್ನುತ್ತೇವೆ,

ಇದರಿಂದ ತಿಳಿಯುವ ವಿಷಯ : **ನಿರ್ಧಾರಕವೊಂದರ ಬೆಲೆಯನ್ನು ಯಾವುದೇ ಒಂದು ಅಡ್ಡಸಾಲು ಅಥವಾ ನೀಟಸಾಲಿನಲ್ಲಿ ವಿಸ್ತರಿಸಿ ಪಡೆಯಬಹುದು.**

4. $A = \begin{bmatrix} a_1 & a_2 & a_3 \\ b_1 & b_2 & b_3 \\ c_1 & c_2 & c_3 \end{bmatrix}$: $|A| = |A^1|$ ಎಂದು **ತೋರಿಸಿರಿ.**

5. $B = \begin{bmatrix} b_1 & b_2 & b_3 \\ a_1 & a_2 & a_3 \\ c_1 & c_2 & c_3 \end{bmatrix}$; $C = \begin{bmatrix} a_2 & a_1 & a_3 \\ b_2 & b_1 & b_3 \\ c_2 & c_1 & c_3 \end{bmatrix}$

$|B| = |C| = -|A|$ ಎಂದು ತೋರಿಸಿರಿ. ಇಲ್ಲಿ Aವು 4ನೇ ಪ್ರಶ್ನೆಯಲ್ಲಿರುವ ಮಂಡಲವೆಂದು ತಿಳಿಯಿರಿ. A ಮಂಡಲದಿಂದ B ಮಂಡಲವನ್ನು ಪಡೆಯಲು, Aದಲ್ಲಿ ಕೆಲವು ಅಡ್ಡಸಾಲುಗಳನ್ನು ಪರಸ್ಪರ ವಿನಿಮಯ ಮಾಡಬೇಕಾಗುತ್ತದೆ. ಅವುಗಳಾವುವು ? ಇದೇ ರೀತಿ C ಮಂಡಲವನ್ನು ಪಡೆಯಲು ಪರಸ್ಪರ ವಿನಿಮಯ ಮಾಡಬೇಕಾದ ನೀಟಸಾಲುಗಳಾವುವು ? ಕಂಡುಹಿಡಿಯಿರಿ.

6. $\begin{vmatrix} a_1 & a_2 & a_3 \\ a_1 & a_2 & a_3 \\ x & y & z \end{vmatrix} = \begin{vmatrix} p & p & q \\ u & v & v \\ l & m & m \end{vmatrix} = 0$ ಎಂದು ತೋರಿಸಿರಿ.

7. $k \begin{vmatrix} a_1 & a_2 & a_3 \\ b_1 & b_2 & b_3 \\ c_1 & c_2 & c_3 \end{vmatrix} = \begin{vmatrix} a_1 & a_2 & a_3 \\ b_1 & b_2 & b_3 \\ kc_1 & kc_2 & kc_3 \end{vmatrix}$

$$= \begin{vmatrix} a_1 & ka_2 & a_3 \\ b_1 & kb_2 & b_3 \\ c_1 & kc_2 & c_3 \end{vmatrix}$$

ಎಂದು ತೋರಿಸಿರಿ.

8. $\frac{a_1}{a_2} = \frac{b_1}{b_2} = \frac{c_1}{c_2}$ ಆದಾಗ $\begin{vmatrix} a_1 & b_1 & c_1 \\ a_2 & b_2 & c_2 \\ a_3 & b_3 & c_3 \end{vmatrix}$

$= 0$ ಎಂದು ತೋರಿಸಿರಿ.

9. $\begin{vmatrix} a_1+x_1 & b_1 & c_1 \\ a_2+x_2 & b_2 & c_2 \\ a_3+x_3 & b_3 & c_3 \end{vmatrix} = \begin{vmatrix} a_1 & b_1 & c_1 \\ a_2 & b_2 & c_2 \\ a_3 & b_3 & c_3 \end{vmatrix}$

$$+ \begin{vmatrix} x_1 & b_1 & c_1 \\ x_2 & b_2 & c_2 \\ x_3 & b_3 & c_3 \end{vmatrix}$$

ಎಂಬುದನ್ನು ತಾಳೆನೋಡಿರಿ.

10. $$\begin{vmatrix} a_1 & a_2 & a_3 \\ b_1 & b_2 & b_3 \\ c_1 & c_2 & c_3 \end{vmatrix} = \begin{vmatrix} a_1+kb_1 & a_2+kb_2 & a_3+kb_3 \\ b_1 & b_2 & b_3 \\ c_1 & c_2 & c_3 \end{vmatrix}$$

$$= \begin{vmatrix} a_1+la_2 & a_2 & a_3 \\ b_1+lb_2 & b_2 & b_3 \\ c_1+lc_2 & c_2 & c_3 \end{vmatrix}$$ ಎಂಬುದನ್ನು ತಾಳೆನೋಡಿರಿ.

11. $$\begin{vmatrix} a_1 & a_2 & a_3 \\ 0 & b_2 & b_3 \\ 0 & 0 & c_3 \end{vmatrix} = a_1 b_2 c_3 = \begin{vmatrix} a_1 & 0 & 0 \\ a_2 & b_2 & 0 \\ a_3 & c_3 & c_3 \end{vmatrix}$$

ಎಂಬುದನ್ನು ತಾಳೆನೋಡಿರಿ, ಇದರಿಂದ ತಿಳಿಯುವ ವಿಷಯ : **ನಿರ್ಧಾರಕವೊಂದರಲ್ಲಿ ಕರ್ಣದ ಕೆಳಗಿರುವ ಮೂಲಾಂಶಗಳೆಲ್ಲವೂ ಶೂನ್ಯವಾದಾಗ, ನಿರ್ಧಾರಕದ ಬೆಲೆ ಕರ್ಣ ಮೂಲಾಂಶಗಳ ಗುಣಲಬ್ಧಕ್ಕೆ ಸಮನಾಗುತ್ತದೆ.** ಈ ನಿಯಮವು ಕರ್ಣದ ಮೇಲಿರುವ ಮೂಲಾಂಶಗಳು ಶೂನ್ಯವಾಗುವ ಸಂದರ್ಭದಲ್ಲೂ ಅನ್ವಯವಾಗುತ್ತದೆ.

13. 30 ನಿರ್ಧಾರಕದ ಮೂಲ ಗುಣಗಳು :

1. ದತ್ತ ನಿರ್ಧಾರಕದ ಯಾವುದೇ ಒಂದು ಅಡ್ಡಸಾಲಿನಲ್ಲಿ (ನೀಟಸಾಲಿನಲ್ಲಿ) ಪ್ರತಿಯೊಂದು ಮೂಲಾಂಶವೂ ಶೂನ್ಯವಾದಾಗ, ನಿರ್ಧಾರಕದ ಬೆಲೆ ಶೂನ್ಯವಾಗುತ್ತದೆ. (ಏಕೆ ? ಸಮರ್ಥಿಸಿರಿ.)

2. ನಿರ್ಧಾರಕವೊಂದರ ಅಡ್ಡಸಾಲುಗಳನ್ನು ಸಹಗಾಮಿ ನೀಟಸಾಲುಗಳೊಂದಿಗೆ ಪರಸ್ಪರ ವಿನಿಮಯ ಮಾಡಿದರೆ ದತ್ತ ನಿರ್ಧಾರಕದ ಬೆಲೆ ಬದಲಾಗುವುದಿಲ್ಲ.

[ಅ—13.5.4 ನೋಡಿರಿ].

3. ನಿರ್ಧಾರಕವೊಂದರಲ್ಲಿ ಯಾವುದೇ ಎರಡು ಅಡ್ಡಸಾಲು (ನೀಟಸಾಲು)ಗಳನ್ನು ಪರಸ್ಪರ ವಿನಿಮಯ ಮಾಡಿದರೆ, ದತ್ತ ನಿರ್ಧಾರದ ಚಿಹ್ನೆಯು ಬದಲಾಗುತ್ತದೆ,
[ಅ– 13.5.5 ನೋಡಿರಿ].

4. ನಿರ್ಧಾರಕವೊಂದರಲ್ಲಿ ಯಾವುದೇ ಎರಡು ಅಡ್ಡಸಾಲು (ನೀಟಸಾಲು)ಗಳು ಪರಸ್ಪರ ಸರ್ವಸಮವಾದರೆ, ದತ್ತ ನಿರ್ಧಾರಕದ ಬೆಲೆಯು ಶೂನ್ಯವಾಗುತ್ತದೆ.
[ಅ—13.5.6 ನೋಡಿರಿ].

5. ನಿರ್ಧಾರಕವೊಂದರಲ್ಲಿ ಯಾವುದೇ ಅಡ್ಡಸಾಲಿನ (ನೀಟಸಾಲಿನ) ಪ್ರತಿಯೊಂದು ಮೂಲಾಂಶವನ್ನು k ಎಂಬ ಅದಿಶದಿಂದ ಗುಣಿಸಿದರೆ, ದತ್ತ ನಿರ್ಧಾರಕದ ಬೆಲೆಯು k ದಿಂದ ಗುಣಿಸಲ್ಪಡುತ್ತದೆ. [ಅ—13.5.7 ನೋಡಿರಿ].

6. ನಿರ್ಧಾರಕವೊಂದರಲ್ಲಿ ಯಾವುದೇ ಎರಡು ಅಡ್ಡಸಾಲಿ (ನೀಟಸಾಲಿ) ನಲ್ಲಿರುವ ಸಹಗಾಮಿ ಮೂಲಾಂಶಗಳ ಪ್ರಮಾಣ ಒಂದೇ ಆದರೆ, ದತ್ತ ನಿರ್ಧಾರಕದ ಬೆಲೆಯು ಶೂನ್ಯವಾಗುತ್ತದೆ. [ಅ—13.5.8 ನೋಡಿರಿ].

7. ನಿರ್ಧಾರಕವೊಂದರ ಯಾವುದೇ ಅಡ್ಡಸಾಲಿ (ನೀಟಸಾಲಿ) ನಲ್ಲಿರುವ ಪ್ರತಿಯೊಂದು ಮೂಲಾಂಶವನ್ನು ಎರಡು ಸಂಖ್ಯೆಗಳ ಮೊತ್ತವಾಗಿ ವ್ಯಕ್ತಪಡಿಸಲು ಸಾಧ್ಯವಾದರೆ, ದತ್ತ ನಿರ್ಧಾರಕವನ್ನು ಅದೇ ಪ್ರಮಾಣದ ಎರಡು ನಿರ್ಧಾರಕಗಳ ಮೊತ್ತವಾಗಿ ವ್ಯಕ್ತಪಡಿಸಬಹುದು. [ಅ—13.5.9 ನೋಡಿರಿ],

8. ನಿರ್ಧಾರಕವೊಂದರಲ್ಲಿನ ಯಾವುದೇ ಅಡ್ಡಸಾಲಿನ (ನೀಟಸಾಲಿನ) ಪ್ರತಿಯೊಂದು ಮೂಲಾಂಶವನ್ನೂ k ದಿಂದ ಗುಣಿಸಿ ಮತ್ತೊಂದು ಅಡ್ಡಸಾಲಿನ (ನೀಟಸಾಲಿನ) ಸಹಗಾಮಿ ಮೂಲಾಂಶಕ್ಕೆ ಕೂಡಿದರೆ, ದತ್ತ ನಿರ್ಧಾರಕದ ಬೆಲೆಯು ಬದಲಾಗುವುದಿಲ್ಲ. [ಅ—13.5.10 ನೋಡಿರಿ].

9. $A = [a_{ij}]_{n \times n}$ ಆಗಿರಲಿ. ನಿರ್ಧಾರಕ Aಯ ಬೆಲೆಯನ್ನು ಕಂಡು ಹಿಡಿಯಲು, $|A|$ ವನ್ನು ಯಾವುದೇ ಒಂದು ಅಡ್ಡಸಾಲು ಅಥವಾ ನೀಟಸಾಲಿನಲ್ಲಿ ವಿಸ್ತರಿಸಬಹುದು.

ಉದಾ : i ನೇ ಅಡ್ಡಸಾಲಿನ ವಿಸ್ತರಣೆ :

$$|A| = a_{i1} A_{i1} + a_{i2} A_{i2} + \dots + a_{in} A_{in} ;$$

jನೇ ಸ್ತಂಭಸಾಲಿನ ವಿಸ್ತರಣೆ :

$|A| = a_{1j}$

$|A| = a_{1j}\ A_{1j} + a_{2j}\ aA_{2j} + \dots + a_{nj}\ A_{nj}$

[ಅ—13.5.3 ನೋಡಿರಿ]

13.31 ಪ್ರಮೇಯ : $A = [\ a_{ij}\ ]_{n \times n}$ ಆದರೆ,

$$a_{i1}\ A_{j1} + a_{i2}\ A_{j2} + \dots + a_{in}\ A_{in} = \begin{cases} |A|, & j=i \\ O, & j \neq i \end{cases}$$

ಸಾಧನೆ : $j=i$ ಅಂದುಕೊಳ್ಳಿ,

ಎಡಬದಿ $= a_{i1}\ A_{i1} + a_{i2}\ A_{i2} + \dots + a_{jn}\ A_{in}$

$=$ ನಿರ್ಧಾರಕ A ದ iನೇ ಅಡ್ಡಸಾಲಿನ ವಿಸ್ತರಣೆ

$= |A|$

ಈಗ $R_i \equiv R_j$ ಮತ್ತು $i \neq j$ ಅಂದುಕೊಳ್ಳಿ.

$\therefore\quad a_{i1} = a_{j1}\ ,\quad a_{i2} = a_{i2} \dots ,a_{in} = a_{in}$

$\therefore$ ಎಡಬದಿ $= a_{j1}\ A_{j1} + a_{j2}\ A_{j2} + \dots + a_{in}\ A_{in}$

$=$ ನಿರ್ಧಾರಕ Aದ jನೇ ಅಡ್ಡಸಾಲಿನ ವಿಸ್ತರಣೆ

$= |A| = 0 \quad \dots \quad [\because R \equiv R_j\ ]$

ಅನುಮಿತ : $a_{1j}\ A_{1j} + a_{2i}\ A_{2i} + \dots + a_{ni}\ A_{ni} = \begin{cases} |A|, & i=j \\ 0, & i \neq j \end{cases}$

ಸಾಧನೆ : $|A| = |A'|$ ಇರುವುದರಿಂದ, ಇದು ಯುಕ್ತವಾಗುತ್ತದೆ.

ಇದರಿಂದ ತಿಳಿಯುವ ವಿಷಯ : **ದತ್ತ ಮಂಡಲದ ಯಾವುದೇ ಒಂದು ಅಡ್ಡ ಸಾಲಿನ (ನೀಟಸಾಲಿನ) ಪ್ರತಿಯೊಂದು ಮೂಲಾಂಶವನ್ನು ಬೇರೆ ಅಡ್ಡಸಾಲಿನ (ನೀಟಸಾಲಿನ) ಮೂಲಾಂಶದ ಸಹಗಾಮಿ ಅನುಗುಣಕದಿಂದ ಗುಣಿಸಿ, ಹೀಗೆ ಪಡೆದ ಗುಣಲಬ್ಧಗಳನ್ನು ಕೂಡಿದರೆ ಮೊತ್ತ ಶೂನ್ಯಕ್ಕೆ ಸಮನಾಗುತ್ತದೆ.**

13.32 **ಟೀಕೆ :** ಅನುಕೂಲದ ಸಲುವಾಗಿ ನಿರ್ಧಾರಕದ ಅಡ್ಡಸಾಲು ಮತ್ತು ನೀಟಸಾಲುಗಳನ್ನು ಅನುಕ್ರಮವಾಗಿ $R_1, R_2, R_3, \ldots$ ಮತ್ತು $C_1 \cdot C_2, C_3, \ldots$ ಎಂದು ಸೂಚಿಸಿ ಕೆಳಗಿನ ಸಂಕೇತಗಳನ್ನು ಬಳಸೋಣ.

(i) $R_1 \equiv R_2$: **1ನೇ ಅಡ್ಡಸಾಲು ಮತ್ತು 2ನೇ ಅಡ್ಡಸಾಲು ಪರಸ್ಪರ ಸಮನಾಗಿವೆ.**

$C_2 \equiv C_4$: **2ನೇ ನೀಟಸಾಲು ಮತ್ತು 4ನೇ ನೀಟಸಾಲು ಪರಸ್ಪರ ಸಮನಾಗಿವೆ.**

ಉದಾ :
$$D = \begin{vmatrix} 1 & 2 & 2 \\ 0 & 4 & 4 \\ 2 & 3 & 3 \end{vmatrix}; \quad \text{ಇಲ್ಲಿ } C_2 \equiv C_3. \quad \therefore D = 0 \text{ [13.3.0-4ರಿಂದ]}$$

(ii) $R_3 \times k$: **3ನೇ ಅಡ್ಡಸಾಲನ್ನು kದಿಂದ ಗುಣಿಸೋಣ.**

$C_2 \times p$: **2ನೇ ನೀಟಸಾಲನ್ನು pದಿಂದ ಗುಣಿಸೋಣ.**

ಉದಾ :
$$D = \begin{vmatrix} 3 & 4 & 5 \\ 2 & 6 & 7 \\ -1 & -2 & -3 \end{vmatrix},$$

$$R_3 \times 2 \Rightarrow \begin{vmatrix} 3 & 4 & 5 \\ 2 & 6 & 7 \\ -1 \times 2 & -2 \times 2 & -3 \times 2 \end{vmatrix},$$

$$= D \times 2 \text{ [13.30–5.ರಿಂದ]}$$

(iii) $R_1 \propto R_2$: 1ನೇ ಅಡ್ಡಸಾಲಿನ ಮೂಲಾಂಶಗಳ ಮತ್ತು 2ನೇ ಅಡ್ಡಸಾಲಿನ ಸಹಗಾಮಿ ಮೂಲಾಂಶಗಳ ಪ್ರಮಾಣ ಒಂದೇ ಆಗಿದೆ.

ಉದಾ : $$D = \begin{vmatrix} 1 & 2 & 3 \\ 2 & 4 & 6 \\ 1 & 2 & -1 \end{vmatrix};$$

ಇದರಲ್ಲಿ $R_1 \propto R_2 \because \frac{1}{2} = \frac{2}{4} = \frac{3}{6}$

$\therefore D = 0$ [13·30—6. ರಿಂದ]

(iv) $C_2 + k_1C_1 + k_2C_3$: 1 ಮತ್ತು 3ನೇ ನೀಟಸಾಲಿನ ಮೂಲಾಂಶಗಳನ್ನು k_1 ಮತ್ತು k_2 ದಿಂದ ಗುಣಿಸಿ 2ನೇ ನೀಟಸಾಲಿನ ಸಹಗಾಮಿ ಮೂಲಾಂಶಕ್ಕೆ ಕೂಡೋಣ.

ಉದಾ : $$D = \begin{vmatrix} 2 & 0 & 1 \\ 4 & -6 & -1 \\ -11 & 1 & -5 \end{vmatrix}$$

$$C_2 + C_1 - 2C_3 \Rightarrow D = \begin{vmatrix} 2 & 2-2\times 1 & 1 \\ 4 & -6+4-2(-1) & -1 \\ -11 & 1-11-2(-5) & -5 \end{vmatrix}$$

$$= \begin{vmatrix} 2 & 0 & 1 \\ 4 & 0 & -1 \\ -11 & 0 & -5 \end{vmatrix}$$

$$= 0 \quad \ldots\ldots \quad [13.30\text{—}1. \text{ ರಿಂದ}]$$

(v) $R_2 \longleftrightarrow R_3$: 2ನೇ ಅಡ್ಡಸಾಲು ಮತ್ತು 3ನೇ ಅಡ್ಡಸಾಲನ್ನು ಪರಸ್ಪರ ವಿನಿಮಯ ಮಾಡೋಣ.

ಉದಾ : $D = \begin{vmatrix} 1 & 4 & 7 \\ -1 & 2 & 3 \\ 0 & 4 & 6 \end{vmatrix}$

$$R_1 \longleftrightarrow R_3 \Rightarrow \begin{vmatrix} 0 & 4 & 6 \\ -1 & 2 & 3 \\ 1 & 4 & 7 \end{vmatrix}$$

$$= -D \quad \ldots\ldots \quad [13.30\text{—}3. \text{ ರಿಂದ}]$$

13.33 **ಉದಾ :**

$$A = \begin{bmatrix} 2 & 3 & -5 & 4 \\ 4 & 2 & 3 & 1 \\ -7 & 6 & 4 & 3 \\ 5 & 6 & 1 & 2 \end{bmatrix}; \quad |A| = ?$$

$$|A| = \begin{vmatrix} 2 & 3 & -5 & 4 \\ 4 & 2 & 3 & 1 \\ -7 & 6 & 4 & 3 \\ 5 & 6 & 1 & 2 \end{vmatrix}$$

A ನಿರ್ಧಾರಕದ ಬೆಲೆಯನ್ನು ಕಂಡುಹಿಡಿಯಲು, C_4 ನಲ್ಲಿರುವ R_1, R_3 ಮತ್ತು R_4ಗಳ ಮೂಲಾಂಶಗಳನ್ನು ಶೂನ್ಯಕ್ಕಿಳಿಸಿ ವಿಸ್ತರಿಸಬಹುದು. ಇದಕ್ಕಾಗಿ ಕೆಳಗಿನಂತೆ ಮುಂದುವರಿಯೋಣ.

$$R_1+(-4)R_2;\ R_3+(-3)R_2;\ R_4+(-2)(R_2) \Rightarrow$$

$$|A| = \begin{vmatrix} 2-4(4) & 3-4(2) & -5-4(3) & 4-4(1) \\ 4 & 2 & 3 & 1 \\ -7-3(4) & 6-3(2) & 4-3(3) & 3-3(1) \\ 5-2(4) & 6-2(2) & 1-2(3) & 2-2(1) \end{vmatrix}$$

[13.30–8. ರಿಂದ]

$$= \begin{vmatrix} -14 & -5 & -17 & 0 \\ 4 & 2 & 3 & 1 \\ -19 & 0 & -5 & 0 \\ -3 & 2 & -5 & 0 \end{vmatrix} = [\ a_{ij}\ ]_{4\times 4} \text{ ಅಂದುಕೊಳ್ಳೋಣ.}$$

ನಾಲ್ಕನೇ ನೀಟಸಾಲಿನ ವಿಸ್ತರಣೆಯಿಂದ :

$$= a_{14}A_{14}+a_{24}A_{24}+a_{34}A_{34}+a_{44}A_{44}$$

$$= (-1)^{2+4} \cdot |\alpha|_{24}$$

$$= \begin{vmatrix} -14 & -5 & -17 \\ -19 & 0 & -5 \\ -3 & 2 & -5 \end{vmatrix}$$

2ನೇ ಅಡ್ಡಸಾಲಿನ ವಿಸ್ತರಣೆಯಿಂದ :

$$= -(-19) \begin{vmatrix} -5 & -17 \\ 2 & -5 \end{vmatrix} + 0 - (-5) \begin{vmatrix} -14 & -5 \\ -3 & 2 \end{vmatrix}$$

$$= 19\,(25+34) + 5\,(-28-15)$$

$$= 19 \times 59 - 5 \times 43 = 906$$

13.34 ಉದಾ :

$$A = \begin{vmatrix} 1 & 1 & 2 & 0 \\ 2 & 2 & 1 & -1 \\ 1 & -2 & 1 & 3 \\ -1 & 3 & 3 & 2 \end{vmatrix} ; \quad |A = ?$$

$$|A| = \begin{vmatrix} 1 & 1 & 2 & 0 \\ 2 & 2 & 1 & -1 \\ 1 & -2 & 1 & 3 \\ -1 & 3 & 3 & 2 \end{vmatrix}$$

ಕರ್ಣದ ಮೇಲಿರುವ ಮೂಲಾಂಶಗಳನ್ನೆಲ್ಲಾ ಶೂನ್ಯಕ್ಕಿಳಿಸಿ. A ನಿರ್ಧಾರಕದ ಬೆಲೆಯನ್ನು ಕಂಡುಹಿಡಿಯೋಣ.

$$C_2 - C_1 \Rightarrow$$

$$|A| = \begin{vmatrix} 1 & 0 & 2 & 0 \\ 2 & 0 & 1 & -1 \\ 1 & -3 & +1 & 3 \\ -1 & 4 & 3 & 2 \end{vmatrix}$$

$$C_2 \leftarrow\rightarrow C_3 \Rightarrow$$

$$= - \begin{vmatrix} 1 & 2 & 0 & 0 \\ 2 & 1 & 0 & -1 \\ 1 & 1 & -3 & 3 \\ -1 & 3 & 4 & 2 \end{vmatrix}$$

$$C_2 - 2C_1 \Rightarrow$$

$$= - \begin{vmatrix} 1 & 0 & 0 & 0 \\ 2 & -3 & 0 & 1 \\ 1 & -1 & -3 & 3 \\ -1 & 5 & 4 & 2 \end{vmatrix}$$

$$-3C_4 \Rightarrow$$

$$= \frac{1}{3}\begin{vmatrix} 1 & 0 & 0 & 0 \\ 2 & -3 & 0 & 3 \\ 1 & -1 & -3 & -9 \\ -1 & 5 & 4 & -6 \end{vmatrix}$$

$$C_4 + C_2 \Rightarrow$$

$$= \frac{1}{3}\begin{vmatrix} 1 & 0 & 0 & 0 \\ 2 & -3 & 0 & 0 \\ 1 & -1 & -3 & -10 \\ -1 & 5 & 4 & -1 \end{vmatrix}$$

$$10C_3 \Rightarrow$$

$$= \frac{1}{30}\begin{vmatrix} 1 & 0 & 0 & 0 \\ 2 & -3 & 0 & 0 \\ 1 & -1 & -30 & -10 \\ -1 & 5 & 40 & -1 \end{vmatrix}$$

$$-3C_4 \Rightarrow$$

$$= -\frac{1}{90}\begin{vmatrix} 1 & 0 & 0 & 0 \\ 2 & -3 & 0 & 0 \\ 1 & -1 & -30 & 30 \\ -1 & 5 & 40 & 3 \end{vmatrix}$$

$$C_4 + C_3 \Rightarrow$$

$$= -\frac{1}{90}\begin{vmatrix} 1 & 0 & 0 & 0 \\ 2 & -3 & 0 & 0 \\ 1 & -1 & -30 & 0 \\ -1 & 5 & 40 & 43 \end{vmatrix}$$

$$= -\frac{1}{90}(1)(-3)(-30)(43) = -43$$

[ಅ–13.5.11 ನೋಡಿರಿ.]

13.35 ಉದಾಹರಣೆಗಳು :

1. $D = \begin{vmatrix} 1 & 2 & 3 & 4 \\ 2 & 3 & 4 & 5 \\ 3 & 4 & 5 & 6 \\ 4 & 5 & 6 & 7 \end{vmatrix}$

$C_2 - C_1$ ಮತ್ತು $C_3 - C_2 \Rightarrow C_2 + (-1)C_1$ ಇತ್ಯಾದಿ

$$D = \begin{vmatrix} 1 & 1 & 1 & 4 \\ 2 & 1 & 1 & 5 \\ 3 & 1 & 1 & 6 \\ 4 & 1 & 1 & 7 \end{vmatrix}, \quad \ldots \quad [13 \cdot 30 - 8 \cdot \text{ರಿಂದ}]$$

$$= 0 \quad \ldots \quad (\because \; C_2 \equiv C_3)$$

2) $$\begin{vmatrix} 35 & 20 & 17 \\ 21 & 12 & 9 \\ 14 & 8 & 13 \end{vmatrix} = \begin{vmatrix} 7 \times 5 & 4 \times 5 & 17 \\ 7 \times 3 & 4 \times 3 & 9 \\ 7 \times 2 & 4 \times 2 & 8 \end{vmatrix}$$

$$= 7 \begin{vmatrix} 5 & 4 \times 5 & 17 \\ 3 & 4 \times 3 & 9 \\ 2 & 4 \times 2 & 8 \end{vmatrix} \quad \ldots \quad [13.30 - 5. \text{ ರಿಂದ}]$$

$$= 7 \times 5 \begin{vmatrix} 5 & 5 & 17 \\ 3 & 3 & 9 \\ 2 & 2 & 8 \end{vmatrix}$$

$$= 35 \times 0 = 0 \quad [\because \; C_1 \equiv C_2]$$

3) $$D = \begin{vmatrix} 1 & a & a^3 \\ 1 & b & b^3 \\ 1 & c & c_3 \end{vmatrix}$$

R_1-R_2 ಮತ್ತು $R_3-R_2 \Rightarrow$

$$= \begin{vmatrix} 0 & a-b & a^3-b^3 \\ 1 & b & b^3 \\ 1 & c-b & c^3-b^3 \end{vmatrix}$$

$$= \begin{vmatrix} 0 & 1.(a-b) & (a-b)(a^2+ab+b^2) \\ 1 & b & b^3 \\ 0 & 1.(c-b) & (c-b)(c^2+cb+b^2) \end{vmatrix}$$

$$= (a-b) \begin{vmatrix} 0 & 1 & a^2+ab+b^2 \\ 1 & b & b^3 \\ 0 & 1.(c-b) & (c-b)(c^2+cb+b^2) \end{vmatrix}$$

$$=(a-b)(c-b) \begin{vmatrix} 0 & 1 & a^2+ab+b^2 \\ 1 & b & b^3 \\ 0 & 1 & c^2+cb+b^2 \end{vmatrix}$$

1ನೇ ನೀಟಸಾಲಿನ ವಿಸ್ತರಣೆಯಿಂದ :

$$= (c-b)(c-b).(-1)^{2+1}.1 \begin{vmatrix} 1 & a^2+ab+b^2 \\ 1 & c^2+cb+b^2 \end{vmatrix}.$$

$$= -(a-b)(c-b)\{(c^2+cb+b^2)-(a^2+ab+b^2)\}$$

$$= -(a-b)(c-b)\{c^2-a^2+cb-ab\}$$

$$= -(a-b)(c-b)\{(c-a)(c+a)+b(c-a)\}$$

$$= -(a-b)(c-b)\quad\{(c-a)(c+a+b)\}$$

$$= (a-b)(b-c)(c-a)(a+b+c).$$

4)
$$D = \begin{vmatrix} a+b+2c & a & b \\ c & b+c+2a & b \\ c & a & c+a+2b \end{vmatrix}$$

$$R_1+R_2+R_3 \Rightarrow$$

$$= \begin{vmatrix} 2a+2b+2c & a & b \\ 2c+2b+2a & b+c+2a & b \\ 2c+2a+2b & a & c+a+2b \end{vmatrix}$$

$$= (2a+2b+2c)\begin{vmatrix} 1 & a & b \\ 1 & b+c+2a & b \\ 1 & a & c+a+2c \end{vmatrix}$$

R_1-R_2 ಮತ್ತು R_3-R_2 $\Rightarrow$

$$= 2(a+b+c)\begin{vmatrix} 0 & -(b+c+a) & 0 \\ 1 & b+c+2a & b \\ 0 & -(b+c+a) & c+a+b \end{vmatrix}$$

1ನೇ ಮತ್ತು 3ನೇ ಅಡ್ಡಸಾಲಿನಿಂದ $(b+c+a)$ ಅಪವರ್ತನವನ್ನು ತೆಗೆಯುವುದರಿಂದ ;

$$= 2(a+b+c)(b+c+a)(b+c+a)\begin{vmatrix} 0 & -1 & 0 \\ 1 & b+c+2a & b \\ 0 & -1 & 1 \end{vmatrix}$$

2ನೇ ಅಡ್ಡಸಾಲಿದ ವಿಸ್ತರಣೆಯಿಂದ ;

$$= 2(a+b+c)^3 \cdot -1 \cdot \begin{vmatrix} -1 & 0 \\ -1 & 1 \end{vmatrix}$$

$$= 2(a+b+c)^3,$$

5

$$D = \begin{vmatrix} b+c & a-b & a \\ c+a & b-c & b \\ a+b & c-a & c \end{vmatrix}$$

2ನೇ ಅಡ್ಡಸಾಲಿನ ಪ್ರತಿಯೊಂದು ಮೂಲಾಂಶವೂ ಎರಡು ಸಂಖ್ಯೆಗಳ ಮೊತ್ತವಾಗಿದೆಯೆಂಬುದನ್ನು ಗಮನಿಸೋಣ.

13.30—7. ರಿಂದ ;

$$= \begin{vmatrix} b+c & a & a \\ c+a & b & b \\ a+b & c & c \end{vmatrix} + \begin{vmatrix} b+c & -b & a \\ c+a & -c & b \\ a+b & -a & c \end{vmatrix}$$

ಇಲ್ಲಿ ಮೊದಲ ನಿರ್ಧಾರಕದಲ್ಲಿ $C_2 \equiv C_3$.

$$\therefore D = 0 + \begin{vmatrix} b+c & -b & a \\ c+a & -c & b \\ a+b & -a & c \end{vmatrix}$$

$$R_1 + R_2 \Rightarrow$$

$$= \begin{vmatrix} c & -b & a \\ a & -c & b \\ b & -a & c \end{vmatrix}$$

$$C_1 \leftrightarrow C_2 \Rightarrow$$

$$= \begin{vmatrix} b & c & a \\ c & a & b \\ a & b & c \end{vmatrix}$$ [ಏಕೆ ?]

$$R_1 + R_2 + R_3 \Rightarrow$$

$$= \begin{vmatrix} b+c+a & c+a+b & a+b+c \\ c & a & b \\ a & b & c \end{vmatrix}$$

$$= (b+c+a) \begin{vmatrix} 1 & 1 & 1 \\ c & a & b \\ a & b & c \end{vmatrix}$$

$C_2 - C_1$ ಮತ್ತು $C_2 - C_3 \Rightarrow$

$$= (b+c+a) \begin{vmatrix} 1 & 0 & 0 \\ c & a-c & b-a \\ a & b-a & c-b \end{vmatrix}$$

1ನೇ ಅಡ್ಡಸಾಲಿನ ವಿಸ್ತರಣೆಯಿಂದ :

$$= b+c+a \cdot 1 \cdot \begin{vmatrix} a-c & b-a \\ b-a & c-b \end{vmatrix}$$

$$= (b+c+a)\ \{(a-c)(c-b)-(b-a)(b-a)\}$$

$$= (b+c+a)\ \{(ac-ab-c^2+cb-(b2-2ab+a^2)\}$$

$$= (b+c+a)(ac+ab+cb-c^2-b^2-a^2)$$

$$= (a+b+c) \cdot -1 \cdot (a^2+b^2+c^2-ab-bc-ca)$$

$$= -(a^3+b^3+c^3-3abc)$$

$$= 3abc-a^3-b^3-c^3.$$

6. $$D = \begin{vmatrix} a & 1 & 1 & 1 \\ 1 & a & 1 & 1 \\ 1 & 1 & a & 1 \\ 1 & 1 & 1 & a \end{vmatrix}$$

$$c_1+c_2+c_3+c_4 \Rightarrow$$

$$= \begin{vmatrix} a+3 & 1 & 1 & 1 \\ a+3 & a & 1 & 1 \\ a+3 & 1 & a & 1 \\ a+3 & 1 & 1 & a \end{vmatrix}$$

$$= (a+3)\begin{vmatrix} 1 & 1 & 1 & 1 \\ 1 & a & 1 & 1 \\ 1 & 1 & a & 1 \\ 1 & 1 & 1 & a \end{vmatrix}$$

$c_2 - c_1$; $c_3 - c_1$; $c_4 - c_1$

$$= (a+3)\begin{vmatrix} 1 & 0 & 0 & 0 \\ 1 & a-1 & 0 & 0 \\ 1 & 0 & a-1 & 1 \\ 1 & 0 & 0 & a-1 \end{vmatrix}$$

c_2, c_3 ಮತ್ತು c_4 ಗಳಲ್ಲಿ $(a-1)$ ಅಪವರ್ತನವನ್ನು ತೆಗೆಯುವುದರಿಂದ :

$$D = (a+3)\ (a-1)\ (a-1)\ (a-1)\begin{vmatrix} 1 & 0 & 0 & 0 \\ 1 & 1 & 0 & 0 \\ 1 & 0 & 1 & 0 \\ 1 & 0 & 0 & 1 \end{vmatrix}$$

$$= (a+3)\ (a-1)^3 .\ 1.1.1.1$$

$$= (a+3)\ (a-1)^3 .$$ [ಅ-13.5.11 ನೋಡಿರಿ]

ಅಭ್ಯಾಸ 13.6

1. ವಿಸ್ತರಿಸದೆಯೇ ಕೆಳಗಿನ ಪ್ರತಿಯೊಂದು ನಿರ್ಧಾರಕದ ಬೆಲೆಯು ಶೂನ್ಯವೆಂದು ತೋರಿಸಿರಿ.

$$\text{(i)} \begin{vmatrix} 1 & -4/3 & 1 \\ 2 & 4 & 2 \\ 5 & 4 & 5 \end{vmatrix}. \quad \text{(ii)} \begin{vmatrix} 20 & 10 & -30 \\ 1 & \frac{1}{2} & -3/2 \\ 1\frac{3}{4} & 1 & 1\frac{1}{4} \end{vmatrix}$$

$$\text{(iii)} \begin{vmatrix} 6 & 12 & 18 \\ 1 & 2 & 3 \\ 2 & -5 & 7 \end{vmatrix}. \quad \text{(iv)} \begin{vmatrix} 1 & 2 & -3 \\ -2 & 5 & 6 \\ 3 & 1 & -9 \end{vmatrix}.$$

2. ಕೆಳಗಿನ ಲೆಕ್ಕಗಳಲ್ಲಿ a_{21}, a_{31} ಗಳನ್ನು ಶೂನ್ಯಕ್ಕೆ ಇಳಿಸಿ, 1ನೇ ನೀಟಸಾಲಿನಲ್ಲಿ ವಿಸ್ತರಿಸಿ, ದತ್ತ ನಿರ್ಧಾರಕ Aಯ ಬೆಲೆಯನ್ನು ಕಂಡುಹಿಡಿಯಿರಿ:

$$\text{(i)} \begin{vmatrix} -1 & 7 & 6 \\ 5 & -32 & -31 \\ 6 & -42 & 38 \end{vmatrix}. \quad \text{(ii)} \begin{vmatrix} 1 & -5 & 4 \\ -8 & 41 & -30 \\ -7 & 37 & -29 \end{vmatrix}.$$

$$\text{(iii)} \begin{vmatrix} 2 & 5 & 9 \\ 6 & 15 & 25 \\ 10 & 28 & 49 \end{vmatrix}. \quad \text{(iv)} \begin{vmatrix} -1 & 2 & 2 \\ 2 & -1 & 2 \\ 10 & 10 & -5 \end{vmatrix}$$

3. ಇವುಗಳನ್ನು ತಾಳೆನೋಡಿರಿ:

$$\text{(i)} \begin{vmatrix} 7 & 13 & 10 & 6 \\ 5 & 9 & 7 & 4 \\ 8 & 12 & 11 & 7 \\ 4 & 10 & 6 & 3 \end{vmatrix} = 0. \quad \text{(ii)} \begin{vmatrix} 1^2 & 2^2 & 3^2 & 4^2 \\ 2^2 & 3^2 & 4^2 & 5^2 \\ 3^2 & 4^2 & 5^2 & 6^2 \\ 4^2 & 5^2 & 6^2 & 7^2 \end{vmatrix} = 0$$

4. ಕೆಳಗಿನವುಗಳನ್ನು ವಿಸ್ತರಿಸದೆಯೇ ಸಾಧಿಸಿರಿ.

(i) $$\begin{vmatrix} a & b & c \\ x & y & z \\ p & q & r \end{vmatrix} = \begin{vmatrix} y & b & q \\ x & a & p \\ z & c & r \end{vmatrix} = \begin{vmatrix} x & p & a \\ y & q & b \\ z & r & c \end{vmatrix}$$

(ii) $$\begin{vmatrix} 1 & a & a^2 \\ 1 & b & b^2 \\ 1 & c & c^2 \end{vmatrix} = (b-c)(c-a)(a-b).$$

(iii) $$\begin{vmatrix} b+c & a+b & c+a \\ c+a & b+c & a+b \\ a+b & c+a & b+c \end{vmatrix} = 2\begin{vmatrix} a & c & b \\ b & a & c \\ c & b & a \end{vmatrix}$$

(iv) $$\begin{vmatrix} a-b & b-c & c-a \\ b-c & c-a & a-b \\ c-a & a-b & b-c \end{vmatrix} = 0.$$

(v) $$\begin{vmatrix} x & x+1 & x+2 \\ x+3 & x+4 & x+5 \\ x+6 & x+7 & x+8 \end{vmatrix} = 0.$$

5. ಇವುಗಳನ್ನು ತಾಳೆನೋಡಿರಿ:

(i) $$\begin{vmatrix} x & x & x \\ x & y & y \\ x & y & z \end{vmatrix} = x(x-y)(y-z).$$

(ii) $$\begin{vmatrix} c+b & c & b \\ c & c+a & a \\ b & a & b+a \end{vmatrix} = 2\begin{vmatrix} 0 & c & b \\ c & 0 & a \\ b & a & 0 \end{vmatrix}$$

(iii) $$\begin{vmatrix} b+c & a & a \\ b & c+a & b \\ c & c & a+b \end{vmatrix} = 4abc$$

(iv) $$\begin{vmatrix} 1 & 1 & 1 \\ 1 & 1+\alpha & 1 \\ 1 & 1 & 1+\beta \end{vmatrix} = \alpha\beta$$

(v) $$\begin{vmatrix} 1 & c & -b \\ -c & 1 & a \\ b & a & 1 \end{vmatrix} = 1+a^2+b^2+c^2$$

(vi) $$\begin{vmatrix} \beta+\gamma-\alpha & \alpha & \alpha \\ \beta & \gamma+\alpha-\beta & \beta \\ \gamma & \gamma & \alpha+\beta-\gamma \end{vmatrix}$$

$$= \begin{vmatrix} \propto & \beta & \gamma \\ \beta & \gamma & \propto \\ \gamma & \propto & \end{vmatrix}$$

(vii) $$\begin{vmatrix} (x-2)^2 & (x-1^2) & x^2 \\ (x-1)^2 & x^2 & (x+1)^2 \\ x^2 & (x+1)^2 & (x+2)^2 \end{vmatrix} = -8.$$

(viii) $$\begin{vmatrix} (b+c)^2 & a^2 & a^2 \\ b^2 & (c+a)^2 & b^2 \\ c^2 & c^2 & (a+b)^2 \end{vmatrix}$$

$$= 2abc\,(a+b+c)^2.$$

6. $$\begin{vmatrix} \mu\gamma & \mu+\gamma & 1 \\ \gamma\lambda & a+\lambda & 1 \\ \lambda\mu & \lambda+\mu & 1 \end{vmatrix} = (\lambda-\mu)(\mu-\gamma)$$

$(\gamma-\mu)$ ಎಂದು ತೋರಿಸಿರಿ.

7. $$\begin{vmatrix} bc & bc^1+b^1c & b^1c^1 \\ ca & ca^1+c^1a & c^1a^1 \\ ab & cb^1+a^1b & a^1b^1 \end{vmatrix} = (ab^1-a^1b)(bc^1-b^1c)(cb^1-c^1b)$$

ಎಂದು ತೋರಿಸಿರಿ.

{ಸೂಚನೆ ; $\dfrac{R_1}{b^1c^1}$; $\dfrac{R_2}{c^1a^1}$; $\dfrac{R_3}{a^1b^1}$ ಮತ್ತು $\dfrac{b}{b^1} = \mu$;

$$\frac{c}{c^1} = \gamma \; ; \; \frac{a}{a^1} = \lambda$$

[ಎಂದಿಟ್ಟು ಮೇಲಿನ ಲೆಕ್ಕವನ್ನು ಉಪಯೋಗಿಸಿರಿ.]

8. $$\begin{vmatrix} a & b & b & b \\ a & b & a & a \\ a & a & b & a \\ b & b & b & a \end{vmatrix} = -(a-b)^4$$ ಎಂದು ತೋರಿಸಿರಿ.

9. $$\begin{vmatrix} 1+a_1 & 1 & 1 & 1 \\ 1 & 1+a_2 & 1 & 1 \\ 1 & 1 & 1+a_3 & 1 \\ 1 & 1 & 1 & 1+a_4 \end{vmatrix} = a_1a_2a_3a_4 \times \left\{ 1+\frac{1}{a_1}+\frac{1}{a_2}+\frac{1}{a_3}+\frac{1}{a_4} \right\}$$ ಎಂದು ತೋರಿಸಿರಿ.

10. $$\begin{vmatrix} 1 & 1 & 1 & 1 \\ a & b & c & d \\ a^2 & b^2 & c^2 & d^2 \\ a^3 & b^3 & c^3 & d^3 \end{vmatrix} = (a-b)(a-c)(a-d)(b-c)(b-d)(c-d)$$ ಎಂದು ತೋರಿಸಿರಿ.

11. $$\begin{vmatrix} a & b & c & d \\ b & a & d & c \\ c & d & a & b \\ d & c & b & a \end{vmatrix} = (\sum a)(a-b+c-d)(a-b-c+d)(c+b-c\cdots$$

ಎಂದು ತೋ...

12. $$\begin{vmatrix} a & b & c & d \\ a & a+b & a+b+c & a+b+c+d \\ a & 2a+b & 3a+2b+c & 4a+3b+2c+d \\ a & 3a+b & 6a+3b+c & 10a+6b+3c+d \end{vmatrix} = \cdots$$

ಎಂದು ತೋರಿಸಿರಿ.

13. $$\begin{vmatrix} x+a & b & c & d \\ a & x+b & c & d \\ a & b & x+c & d \\ a & b & c & x+d \end{vmatrix} = x^3 (x+a+\cdots +\cdots$$

ಎಂದು ತೋರಿಸಿರಿ,

14. $$\begin{vmatrix} a & b & c & d \\ -b & a & -d & c \\ -c & d & a & -b \\ -d & -c & b & a \end{vmatrix} = (a^2+b^2+c^2+d^2)^2$$

ಎಂದು ತೋರಿಸಿರಿ

15. $$\begin{vmatrix} 0 & x & y & z \\ x & 0 & z & y \\ y & z & 0 & x \\ z & y & x & 0 \end{vmatrix} = -(x+y+z)(y+z-x)(z+x-y)(x+y-z)$$

ಎಂದು ತೋರಿಸಿರಿ.

16. $$\begin{vmatrix} 0 & x & y & z \\ -x & 0 & c & b \\ -x & -y & 0 & a \\ -z & -b & a- & 0 \end{vmatrix} = (ax+cz-by)^2$$

ಎಂದು ತೋರಿಸಿರಿ.

17. $$\begin{vmatrix} 1 & a & a^2 & a^3+bcd \\ 1 & b & b^2 & b^3+cda \\ 1 & c & c^2 & c^3+dab \\ 1 & d & d^2 & d^3+abc \end{vmatrix} =$$ ಎಂದು ತೋರಿಸಿರಿ.

18. $$\begin{vmatrix} a^2+1 & ab & ac & ad \\ ba & b^2+1 & bc & bd \\ ca & cb & c^2+1 & cd \\ da & db & dc & d^2+1 \end{vmatrix}$$

$= (a^2+b^2+c^2+d^2+1)$ ಎಂದು ತೋರಿಸಿರಿ.

19. $$\begin{vmatrix} b^2+c^2+1 & c^2+1 & b^2+1 & b+c \\ c^2+1 & c^2+a^2+1 & a^2+1 & c+a \\ b^2+1 & a^2+1 & a^2+b^2+1 & a+b \\ b+1 & c+a & a+b & 3 \end{vmatrix}$$

$= (bc+ca+ab)^2$ ಎಂದು ತೋರಿಸಿರಿ.

20. $$\begin{vmatrix} x & l & m & 1 \\ \alpha & x & n & 1 \\ \alpha & \beta & x & 1 \\ \alpha & \beta & \gamma & 1 \end{vmatrix} = (x-\alpha)(x-\beta)(x-)$$

ಎಂದು ತೋರಿಸಿರಿ.

13.36 ಸರಳ ಸಮೀಕರಣಗಳ ಬಿಡಿಸುವಿಕೆ :

$$\begin{aligned} a_1x+b_1y+c_1z &= d_1 \\ a_2x+b_2y+c_2z &= d_2 \\ a_3x+b_3y+c_3z &= d_3 \end{aligned} \qquad \text{....(13.36.1)}$$

ಎಂಬ ಏಕಕಾಲಿಕ ಸಮೀಕರಣಗಳನ್ನು ಪರಿಶೀಲಿಸೋಣ.

$$D = \begin{vmatrix} a_1 & b_1 & c_1 \\ a_2 & b_2 & c_2 \\ a_3 & b_3 & c_3 \end{vmatrix} \neq 0$$ ಎಂದಿರಲಿ

$$D_x = \begin{vmatrix} a_1x & b_1 & c_1 \\ a_2x & b_2 & c_2 \\ a_3x & b_3 & c_3 \end{vmatrix}$$

$$C_1 + C_2y + C_3z \Rightarrow$$

$$= \begin{vmatrix} a_1x + b_1y + c_1z & b_1 & c_1 \\ a_2x + b_2y + c_2z & b_2 & c_2 \\ a_3x + b_3y + c_3z & b_3 & c_3 \end{vmatrix}$$

$$= \begin{vmatrix} d_1 & b_1 & c_1 \\ d_2 & b_2 & c_2 \\ d_3 & b_3 & c_3 \end{vmatrix} \qquad [(13, 36.1) \text{ ರಿಂದ}]$$

$= D_x$ ಎಂದಿರಲಿ.

$$\therefore\ x = \frac{D_x}{D}$$

D_x ನಿರ್ಧಾರಕವು Dದಿಂದ C_1ನಲ್ಲಿ ಮಾತ್ರ ಭಿನ್ನವಾಗಿದೆಯೆಂಬುದನ್ನು ಗಮನಿಸೋಣ. ಮತ್ತೆ,

$$D_y = \begin{vmatrix} a_1 & b_1y & c_1 \\ a_2 & b_2y & c_2 \\ a_3 & b_3y & c_3 \end{vmatrix}$$

$$C_2 + C_1x + C_3z \Rightarrow$$

$$= \begin{vmatrix} a_1 & a_1x + b_1y + c_1z & c_1 \\ a_2 & a_2x + b_2y + c_2z & c_2 \\ a_3 & a_3x + b_3y + c_3z & c_3 \end{vmatrix}$$

$$= \begin{vmatrix} a_1 & d_1 & c_1 \\ a_2 & d_2 & c_2 \\ a_3 & d_3 & c_3 \end{vmatrix}$$ .... [ಏಕೆ ?]

$= D_y$ ಎಂದಿರಲಿ.

$$\therefore \; y = \frac{Dy}{D}.$$

ಇದೇ ರೀತಿ $z = \dfrac{Dx}{D}$, ಇಲ್ಲಿ

$$D_2 = \begin{vmatrix} a_1 & b_1 & d_1 \\ a_2 & b_2 & d_2 \\ a_3 & b_3 & d_3 \end{vmatrix}$$ ಎಂದು ತೋರಿಸಬಹುದು.

ಉದಾ :
$x + y + z = 2$
$2x - 3y - z - 2 = 0$ ಎಂಬ ಸಮೀಕರಣವನ್ನು ಬಿಡಿಸೋಣ.
$x - 2y - 3z = 3$

ಇದರಲ್ಲಿ $D_z = 2$ ಎಂಬುದನ್ನು ಗಮನಿಸೋಣ. [ಏಕೆ ?]

$$D=\begin{vmatrix} 1 & 1 & 1 \\ 2 & -3 & -1 \\ 1 & -2 & -3 \end{vmatrix}=11;\quad D_x=\begin{vmatrix} 2 & 1 & 1 \\ 2 & -3 & -1 \\ 3 & -2 & -3 \end{vmatrix}=22;$$

$$D_y=\begin{vmatrix} 1 & 2 & 1 \\ 2 & 2 & -1 \\ 1 & 3 & -3 \end{vmatrix}=11;\quad D_z=\begin{vmatrix} 1 & 1 & 2 \\ 2 & -3 & 2 \\ 1 & -2 & -3 \end{vmatrix}=-11.$$

$$\therefore\ x=\frac{D_x}{D}=\frac{22}{11}=2,\quad y=\frac{D_y}{D}=\frac{11}{11}=1,$$

$$z=\frac{D_z}{D}=\frac{-11}{11}=-1.$$

$x+y+z=2+1-1=2=$ ಮೊದಲ ಸಮೀಕರಣದ ಬಲಬದಿ.

13.37 **ಉದಾ :** ಕೆಳಗಿನ ಸಮೀಕರಣಗಳಿಂದ x, y, z ಗಳನ್ನು ವಿಸರ್ಜಿಸೋಣ.

$$ax+hy+g=0 \quad \ldots\ldots \quad \text{(i)}$$
$$hx+by+f=0 \quad \ldots\ldots \quad \text{(ii)}$$
$$gx+fy+c=0 \quad \ldots\ldots \quad \text{(iii)}$$

$D=\begin{vmatrix} a & h \\ h & b \end{vmatrix}\neq 0$ ಆದಾಗ (i) ಮತ್ತು (ii) ಸಮೀಕರಣಗಳನ್ನು ಬಿಡಿಸೋಣ.

$$x = \frac{D_x}{D} = \frac{\begin{vmatrix} -g & h \\ -f & g \end{vmatrix}}{\begin{vmatrix} a & h \\ h & b \end{vmatrix}} \quad ; y = \frac{D_y}{D} = \frac{\begin{vmatrix} a & -g \\ h & -f \end{vmatrix}}{\begin{vmatrix} a & h \\ h & b \end{vmatrix}}$$

ಹೀಗೆ ಪಡೆದ x, y ಬೆಲೆಗಳನ್ನು (iii)ರಲ್ಲಿ ಆದೇಶಿಸೋಣ.

$$g\frac{D_x}{D} + f\frac{D_y}{D} + c = 0$$

$$\Rightarrow gD_x + fD_y + cD = 0$$

$$\Rightarrow g\begin{vmatrix} -g & h \\ -f & b \end{vmatrix} + f\begin{vmatrix} a & -g \\ h & -f \end{vmatrix} + c\begin{vmatrix} a & h \\ h & b \end{vmatrix} = 0$$

$$g\begin{vmatrix} h & g \\ b & f \end{vmatrix} - f\begin{vmatrix} a & g \\ h & f \end{vmatrix} + c\begin{vmatrix} a & h \\ h & b \end{vmatrix} = 0$$

$$\Rightarrow \begin{vmatrix} a & h & g \\ h & b & f \\ g & f & c \end{vmatrix} = 0. \qquad [R_3\text{ರ ವಿಸ್ತರಣೆ}]$$

ಅಭ್ಯಾಸ 13.7

ಕೆಳಗಿನ ಏಕಕಾಲಿಕ ಸಮೀಕರಣಗಳನ್ನು (ಲೆಕ್ಕಗಳು 1—10) ಬಿಡಿಸಿರಿ ಮತ್ತು ತಾಳೆನೋಡಿರಿ.

1. $5x+6y-3=0$ 2. $6x+5y=2$
   $3x-4y+21=0$ $4x-3y=14$

3. $7x+11y=4$
$9x+8y=-1$

4. $x+y=a$
$x-y=\sqrt{a^2-b}$

[5.4 ನೋಡಿರಿ]

5. $x-y+z=0$
$2x+3y-5z=7$
$3x-4y-2z=-4$

6. $2x+3y+z=0$
$x-y+2z=3$
$-3x+2y-z=1$

7. $2x-3y=1$
$x-2y+z+1=0$
$x-y-2z=4$

8. $x+y+z=1$
$ax+by+cz=k$
$a^2x+b^2y+c^2z=k^2$

9. $ax+by+cz=k$
$a^2x+b^2y+c^2z=k^2$
$a^3x+b^3y+c^3z=k^3$

10. $ax+by+cz=0,\quad bx+cy+az=0,$

$cx+ay+bz=0$ ಮತ್ತು x, y, z ಗಳು ಶೂನ್ಯಕ್ಕಿಂತ ಭಿನ್ನ ಎಂದು ತಿಳಿದು, $a^3+b^3+c^3=3abc$ ಎಂದು ಸಾಧಿಸಿರಿ. [ಸೂಚನೆ : ದತ್ತ ಸಮೀಕರಣಗಳಿಂದ x, y, zಗಳನ್ನು ವಿಸರ್ಜಿಸಿರಿ].

11. $x=\dfrac{a}{b-c},\ y=\dfrac{b}{c-a},\ z=\dfrac{c}{a-d}$ ಆದರೆ,

$xy+yz+zx+1=0$ ಎಂದು ಸಾಧಿಸಿರಿ.

13.38 ಮಂಡಲದ ಪ್ರತಿಲೋಮ :

ಯಾವುದೇ ಒಂದು n ನೇ ಪ್ರಮಾಣದ ಮಂಡಲ A ಆದಾಗ,

$$AB=BA=I_n$$

ಇರುವಂತೆ B ಎಂಬ ಒಂದು ಮಂಡಲವು ದೊರೆಯುವ ಸಂದರ್ಭಗಳಲ್ಲಿ B ಯನ್ನು A ಯ ಪ್ರತಿಲೋಮವೆಂದು ಕರೆಯುತ್ತೇವೆ.

ಉದಾ : (i) $A = \begin{bmatrix} 0 & 1 \\ 1 & 0 \end{bmatrix}$ ಎಂದಿರಲಿ. ಈ $B = \begin{bmatrix} 0 & 1 \\ 1 & 0 \end{bmatrix}$

ಆದರೆ, $AB = BA = I_2$.

$$\therefore AB = \begin{bmatrix} 0 & 1 \\ 1 & 0 \end{bmatrix} \begin{bmatrix} 0 & 1 \\ 1 & 0 \end{bmatrix} = \begin{bmatrix} 1 & 0 \\ 0 & 1 \end{bmatrix} = BA.$$

$\therefore$ B ಯು A ಯ ಪ್ರತಿಲೋಮ.

(ii) $A = \begin{bmatrix} 4 & -7 \\ 3 & -5 \end{bmatrix}$; $B = \begin{bmatrix} -5 & 7 \\ -3 & 4 \end{bmatrix}$

$$AB = \begin{bmatrix} 4 & -7 \\ 3 & -5 \end{bmatrix} \begin{bmatrix} -5 & 7 \\ -3 & 4 \end{bmatrix}$$

$$= \begin{bmatrix} -20+21 & 28-28 \\ -15+15 & 21-20 \end{bmatrix}$$

$$= \begin{bmatrix} 1 & 0 \\ 0 & 1 \end{bmatrix} = I_2$$

ಇದೇ ರೀತಿ $BA = I_2$ ಎಂದು ತೋರಿಸಬಹುದು.

$\therefore$ Aಯ ಪ್ರತಿಲೋಮ = B.

13.39 **ಪ್ರಮೇಯ : Aಯ ಪ್ರತಿಲೋಮ ದೊರೆಯುವ ಸಂದರ್ಭಗಳಲ್ಲಿ, ಏಕೈಕ ರೀತಿಯಲ್ಲಿ ದೊರೆಯುತ್ತದೆ.**

ಸಾಧನೆ ; ಸಾಧ್ಯವಾದರೆ B ಮತ್ತು C ಮಂಡಲಗಳಲ್ಲಿ ಪ್ರತಿಯೊಂದೂ Aಯ ಪ್ರತಿಲೋಮವೆಂದು ಭಾವಿಸೋಣ.

